ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಿರಂಗಾ
ಸ್ವಾತಂತ್ರ್ಯೋತ್ಸವದ ಅಂಗವಾಗಿ ಜಮ್ಮುವಿನಲ್ಲಿ ಮಹಿಳೆಯರು ಶನಿವಾರ ಕೈ ಹಾಗೂ ಮುಖಕ್ಕೆ ರಾಷ್ಟ್ರಧ್ವಜದ ಬಣ್ಣ ಹಚ್ಚಿಕೊಂಡಿದ್ದರು



‘ವಿಶ್ವಗುರು ಭಾರತ’ 100ನೇ ಸಂಚಿಕೆ ಬಿಡುಗಡೆ: ಸಚಿವೆ ನಿರ್ಮಲಾ ಹೇಳಿಕೆ

ವಂಚಕರ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತದ ಬ್ಯಾಂಕ್‌ಗಳಿಗೆ ವಂಚಿಸಿ, ದೇಶ ತೊರೆದವರನ್ನು ಸಂರಕ್ಷಿಸುವ ಪ್ರಶ್ನೆಯೇ ಇಲ್ಲ. ಕಾನೂನು ಕ್ರಮದ ಜತೆಗೆ, ಅವರ ಆಸ್ತಿಗಳ ಮುಟ್ಟುಗೋಲಿಗೆ ಪ್ರಕ್ರಿಯೆ ಆರಂಭಿಸಲಾಗಿದೆ’ ಎಂದು ಕೇಂದ್ರಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬಿಜೆಪಿ ರಾಜ್ಯ ಆರ್ಥಿಕ ಪ್ರಕೋಷ್ಠ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ವಿಶ್ವಗುರು ಭಾರತ’ 100ನೇ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆರ್‌ಬಿಐ ನೀತಿಗಳ ಪ್ರಕಾರವೇ ಬ್ಯಾಂಕ್‌ಗಳು ಉದ್ಯಮಿಗಳಿಗೆ ಸಾಲ ನೀಡಿವೆ. ವಂಚನೆ ಪ್ರಕರಣಗಳು ಬೆಳಕಿಗೆ ಬಂದ ನಂತರ ಸಾಲದ ನೀತಿಗಳಲ್ಲಿ ಬದಲಾವಣೆ ಮಾಡಲಾಗಿದೆ. ಬ್ಯಾಂಕ್‌ಗಳು ಉತ್ತಮ ಸ್ಥಿತಿಗೆ ಮರಳುತ್ತಿವೆ ಎಂದರು.

‘ಆರೇಳು ದಶಕ ದೇಶ ಆಳಿದವರು ಬಡತನ ನಿರ್ಮೂಲನೆ, ಬಟ್ಟೆ, ವಸತಿ ಎಂದು 20 ಅಂಶಗಳ ಕಾರ್ಯಕ್ರಮ ನಿರಂತರವಾಗಿ ಜಾರಿಗೆ ತಂದರು. ಇಂದಿಗೂ ಬಡತನ ನಿರ್ಮೂಲನೆ ಸಾಧ್ಯವಾಗಿಲ್ಲ. ಯೋಜನೆಗಳು ಅಂಕಿ, ಅಂಶಗಳ ಮೇಲಷ್ಟೆ ಇದ್ದವು. ಪ್ರಧಾನಿ ಮೋದಿ ಅವರ ಆಶಯ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಮೂಲ ಸೌಕರ್ಯ ತಲುಪಬೇಕು ಎನ್ನುವುದು. ಅದಕ್ಕಾಗಿ ಯೋಜನೆ ರೂಪಿಸುವುದಷ್ಟೆ ಅಲ್ಲ, ಅವು ನಿಜವಾದ ಫಲಾನುಭವಿಗಳಿಗೆ ತಲುಪಲು ಅಗತ್ಯವಾದ ಮೇಲ್ವಿಚಾರಣೆಗೂ ಗಮನ ನೀಡುತ್ತಿದ್ದಾರೆ’ ಎಂದರು.

‘ಮುದ್ರಾ ಯೋಜನೆ ಫಲವಾಗಿ ಬಡ, ಮಧ್ಯಮ ವರ್ಗದ ಜನರು ಜಾಮೀನು, ದಾಖಲೆಗಳ ಅಗತ್ಯವಿಲ್ಲದೆ ಸಾಲ ಪಡೆದು ಸ್ವ ಉದ್ಯೋಗ ಕೈಗೊಳ್ಳಲು ಸಾಧ್ಯವಾಗಿದೆ. ಒಂದು ದೇಶ- ಒಂದೇ ಪಡಿತರ ಚೀಟಿ ಕಲ್ಪನೆ ಆಹಾರ ಭದ್ರತೆ ಒದಗಿಸಿದೆ’ ಎಂದು ವಿವರಿಸಿದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ, ಮಾಜಿ ಹಣಕಾಸು ಸಲಹೆಗಾರರಾದ ಪ್ರೊ.ಕೆ.ವಿ. ರಾಜು, ಬಿಜೆಪಿ ರಾಷ್ಟ್ರೀಯ ವಕ್ತಾರರಾದ ಗೋಪಾಲ ಕೃಷ್ಣ ಅಗರ್ವಾಲ್, ಆರ್ಥಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಸಮೀರ್ ಕಾಗಲ್ಕರ್ ಇದ್ದರು.



ಬಿಜೆಪಿ ರಾಜ್ಯ ಆರ್ಥಿಕ ಪ್ರಕೋಷ್ಠ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ‘ವಿಶ್ವಗುರು ಭಾರತ’ 100ನೇ ಸಂಚಿಕೆ ಬಿಡುಗಡೆ ಮಾಡಿದರು. ಪ್ರಕೋಷ್ಠದ ರಾಜ್ಯ ಸಂಚಾಲಕ ಸಮೀರ್ ಕಾಗಲ್ಕರ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ, ನಿವೃತ್ತ ಹಣಕಾಸು ಸಲಹೆಗಾರ ಕೆ.ವಿ. ರಾಜು, ಬಿಜೆಪಿ ರಾಷ್ಟ್ರೀಯ ವಕ್ತಾರ ಗೋಪಾಲ ಕೃಷ್ಣ ಅಗರ್ವಾಲ್ ಇದ್ದರು– ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಆರ್‌ಬಿಐ ನೀತಿಗಳ ಪ್ರಕಾರವೇ ಬ್ಯಾಂಕ್‌ಗಳಿಂದ ಸಾಲ
- ಸಾಲ ನೀತಿ ಬದಲಾವಣೆ ಬಳಿಕ ಬ್ಯಾಂಕ್‌ಗಳ ಚೇತರಿಕೆ




ತಿರಂಗಾ ಮೆರವಣಿಗೆ

ಬಳ್ಳಾರಿಯ ಗವಿಯಪ್ಪ ವೃತ್ತದ ಬಳಿ 1.5 ಕಿ.ಮೀ ಉದ್ದದ ತ್ರಿವರ್ಣ ಧ್ವಜವನ್ನು ಜನರು ಮೆರವಣಿಗೆ ಮಾಡುತ್ತಿರುವ ದೃಶ್ಯ (ಎಡ ಚಿತ್ರ). ಕಾಂಗ್ರೆಸ್ ಪಕ್ಷದ ಮಲ್ಲೇಶ್ವರ ಘಟಕದ ವತಿಯಿಂದ ಶನಿವಾರ ಬೆಂಗಳೂರಿನ ಮತ್ತಿಕೆರೆಯಲ್ಲಿ 1308 ಅಡಿ ಉದ್ದದ ತ್ರಿವರ್ಣ ಧ್ವಜವನ್ನು ಮೆರವಣಿಗೆ ಮಾಡಲಾಯಿತು.

ರಾಜ್ಯದ ಐದು ಕಡೆ ಜನೋತ್ಸವ–ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ಸಾಧನೆಯನ್ನು ಜನರಿಗೆ ತಲುಪಿಸಲು ರಾಜ್ಯದ ಐದು ಕಡೆ ‘ಜನೋತ್ಸವ’ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದೊಡ್ಡಬಳ್ಳಾಪುರದಲ್ಲಿ ಆ. 28ರಂದು ಜನೋತ್ಸವ ನಡೆಸಲು ತೀರ್ಮಾನಿಸಲಾಗಿದೆ’ ಎಂದರು.

‘ಜುಲೈ 28ರಂದು ನಡೆಯಬೇಕಿದ್ದ ಜನೋತ್ಸವವನ್ನು ಅನಿವಾರ್ಯ ಕಾರಣಗಳಿಂದ ರದ್ದು ಮಾಡಲಾಗಿತ್ತು. ಸಾಕಷ್ಟು ತಯಾರಿ ನಡೆಸಿದ್ದು ದೊಡ್ಡಬಳ್ಳಾಪುರದಿಂದಲೇ ಜನೋತ್ಸವ ಆರಂಭಿಸಬೇಕು ಎಂದು ಆ ಭಾಗದ ಜನರು 10-15 ದಿನದಿಂದ ಒತ್ತಾಯಿಸುತ್ತಿದ್ದಾರೆ. ಜನರ ದೃಢ ನಿರ್ಧಾರ, ಉತ್ಸಾಹಕ್ಕೆ ತಲೆಬಾಗಿ ಅಲ್ಲಿಂದಲೇ ಆರಂಭಿಸುವ ತೀರ್ಮಾನಕ್ಕೆ ಬರಲಾಗಿದೆ’ ಎಂದರು.

‘ಜನೋತ್ಸವ ಆಯೋಜಿಸುತ್ತಿರುವ ಬಗ್ಗೆ ವರಿಷ್ಠರ ಜೊತೆ ಚರ್ಚೆ ಮಾಡುತ್ತೇವೆ. ಆ ಬಳಿಕ, ಕಾರ್ಯಕ್ರಮಕ್ಕೆ ಬರಲಿರುವ ರಾಷ್ಟ್ರೀಯ ನಾಯಕರು ಯಾರೆಲ್ಲ ಎನ್ನುವುದು ಖಚಿತವಾಗಲಿದೆ’ ಎಂದೂ ಅವರು ತಿಳಿಸಿದರು.


ಮಂತ್ರಾಲಯದಲ್ಲಿ ರಾಯರ 351ನೇ ಮಧ್ಯಾರಾಧನೆ ನಿಮಿತ್ತ ಮಠದ ಪ್ರಾಕಾರದಲ್ಲಿ ಸುವರ್ಣ ರಥೋತ್ಸವ ನೆರವೇರಿತು

ರಾಯರ ಮಧ್ಯಾರಾಧನೆ: ರಥೋತ್ಸವ

ರಾಯಚೂರು: ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಯವರ 351ನೇ ಆರಾಧನಾ ಮಹೋತ್ಸವದ ಅಂಗವಾಗಿ ಶನಿವಾರ ಜರುಗಿದ ಮಧ್ಯಾರಾಧನೆಯಲ್ಲಿ ದೇಶದ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ರಾಯರ ಮೂಲವೃಂದಾವನಕ್ಕೆ ಮಹಾಪಂಚಾಮೃತ ಅಭಿಷೇಕ ನೆರವೇರಿಸಿದ ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು, ನವರತ್ನ ಕವಚ ಸಮರ್ಪಿಸಿದರು. ವೃಂದಾವನಕ್ಕೆ ವಿಶೇಷ ಪುಷ್ಪಾಲಂಕಾರ, ವಸ್ತ್ರಾಲಂಕಾರ ಮಾಡಲಾಗಿತ್ತು.

ತಿರುಪತಿ ತಿರುಮಲದಿಂದ ತರಲಾದ ಶ್ರೀನಿವಾಸ ದೇವರ ಶೇಷವಸ್ತ್ರವನ್ನು ರಾಯರ ಸನ್ನಿಧಿಗೆ ಇಡಲಾಯಿತು. ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿರುಪತಿ ಶೇಷವಸ್ತ್ರವನ್ನು ತಲೆಯ ಮೇಲೆ ಇಟ್ಟುಕೊಂಡು ಬರಮಾಡಿಕೊಂಡರು.

ಮಹಾಮಂಗಳಾರತಿ ಬಳಿಕ ಮಧ್ಯಾರಾಧನೆ ಪ್ರಯುಕ್ತ ಮಠದ ಪ್ರಾಕಾರದಲ್ಲಿ ಸುವರ್ಣ ರಥೋತ್ಸವ ನಡೆಯಿತು. ಚಂಡಿವಾದ್ಯ ವೈಭವ ಮತ್ತು ವೇದಮಂತ್ರ ಘೋಷಣೆಗಳೊಂದಿಗೆ ಭಕ್ತರು ರಾಯರಿಗೆ ಜಯ ಘೋಷ ಕೂಗಿದರು.

ರಾಜ್ಯಸಭಾ ಸದಸ್ಯ ಜಗ್ಗೇಶ್ ಅವರು ರಾಯರ ಮಧ್ಯಾರಾಧನೆಯಲ್ಲಿ ಪಾಲ್ಗೊಂಡರು. ಭಾನುವಾರ ಉತ್ತರಾರಾಧನೆ ಪೂಜೆ ನಡೆಯಲಿದ್ದು, ಮಠದ ಹೊರಭಾಗ ಮಹಾರಥೋತ್ಸವ ಜರುಗಲಿದೆ.

ತಗ್ಗಿದ ಮಳೆ: ಒಳ ಹರಿವು ಇಳಿಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆ ಆರ್ಭಟ ಬಹುತೇಕ ತಗ್ಗಿದೆ. ಕಲಬುರಗಿ, ಕೊಪ್ಪಳದಲ್ಲಿ ತುಂತುರು ಮಳೆಯಾದರೆ, ಚಿಕ್ಕಮಗಳೂರು, ವಿಜಯಪುರದಲ್ಲಿ ಶನಿವಾರ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ಬಾಳೆಹೊನ್ನೂರು, ಮೂಡಿಗೆರೆ, ಕೊಟ್ಟಿಗೆಹಾರ ಹಾಗೂ ಬೆಳಗಾವಿ ನಗರ, ಸವದತ್ತಿ, ಖಾನಾಪುರ, ಬೈಲಹೊಂಗಲ, ರಾಮದುರ್ಗ ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ.

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಅಬ್ಬರ ತುಸು ಕಡಿಮೆಯಾಗಿದ್ದರ ಪರಿಣಾಮ ಬೆಳಗಾವಿ ಜಿಲ್ಲೆಯಲ್ಲಿ ಹರಿಯುವ ಕೃಷ್ಣಾ ನದಿಯ ಒಳಹರಿವು ಇಳಿಮುಖವಾಗಿದೆ. ರಾಜಾಪುರ ಬ್ಯಾರೇಜ್‌ನಿಂದ 1.48 ಲಕ್ಷ ಕ್ಯುಸೆಕ್ ಹಾಗೂ ದೂಧಗಂಗಾ ನದಿಯಿಂದ 33 ಸಾವಿರ ಕ್ಯುಸೆಕ್ ನೀರು ಸೇರಿ ಕಲ್ಲೋಳ ಸೇತುವೆ ಬಳಿ ಕೃಷ್ಣೆಯಲ್ಲಿ 1,82,023 ಕ್ಯುಸೆಕ್ ನೀರು ಹರಿಯುತ್ತಿದೆ. ನೀರಿನ ಪ್ರಮಾಣ ತಗ್ಗಿದ್ದರಿಂದ ನದಿ ತೀರದ ಗ್ರಾಮಗಳಲ್ಲಿ ತುಸು ನೆಮ್ಮದಿ ಮೂಡಿದೆ.

ಮಹಾರಾಷ್ಟ್ರದ ಉಜ್ಜನಿ ಜಲಾಶಯದಿಂದ 60 ಸಾವಿರ ಕ್ಯುಸೆಕ್ ನೀರು ಭೀಮಾ ನದಿಗೆ ಬಿಟ್ಟಿದ್ದರ ಪರಿಣಾಮ ವಿಜಯಪುರ ಜಿಲ್ಲೆಯ ಚಡಚಣ, ಇಂಡಿ, ಆಲಮೇಲ ತಾಲ್ಲೂಕು ವ್ಯಾಪ್ತಿಯಲ್ಲಿ ಭೀಮಾ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ. ಆಲಮಟ್ಟಿ ಅಣೆಕಟ್ಟೆಯಿಂದ ಕೃಷ್ಣಾ ನದಿಗೆ 2.25 ಲಕ್ಷ ಕ್ಯುಸೆಕ್ ನೀರು ಬಿಡಲಾಗಿದೆ. ಜಲಾಶಯದ ಕೆಳಭಾಗ ಪ್ರವಾಹ ಆತಂಕ ಎದುರಾಗಿದೆ

ಬಿಇಒ ಕೂಡಿಹಾಕಿದ ಗ್ರಾಮಸ್ಥರು

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನ ಕಡಿದಾಳು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿಯ ಗೋಡೆ ಶುಕ್ರವಾರ ರಾತ್ರಿ ಕುಸಿದಿದೆ. ಗ್ರಾಮಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಯನ್ನು ಕೆಲ ಹೊತ್ತು ಕೊಠಡಿಯೊಳಗೆ ಕೂಡಿಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಲಾ ಕಟ್ಟಡ ಶಿಥಿಲವಾಗಿದ್ದರೂ ರಿಪೇರಿಗೆ ಕ್ರಮ ವಹಿಸಿಲ್ಲ. ಗೋಡೆ ಕುಸಿದಾಗ ಶಾಲೆಯಲ್ಲಿ ಮಕ್ಕಳು ಇರಲಿಲ್ಲ, ಅಪಾಯ ಸಂಭವಿಸಿಲ್ಲ ಎಂದು ಗ್ರಾಮಸ್ಥರು ಹೇಳಿದ್ದಾರೆ.

‘ಶಾಲೆಯಲ್ಲಿ ಒಟ್ಟು 26 ವಿದ್ಯಾರ್ಥಿಗಳು ಇದ್ದಾರೆ. ಶಿಥಿಲವಾಗಿದ್ದ ಕೊಠಡಿಯಲ್ಲಿ ತರಗತಿ ನಡೆಸುವುದನ್ನು ಕೆಲ ತಿಂಗಳ ಹಿಂದೆಯೇ ನಿಲ್ಲಿಸಲಾಗಿತ್ತು. ಕಟ್ಟಡ ನಿರ್ಮಾಣಕ್ಕೆ ₹22 ಲಕ್ಷ ಮಂಜೂರಾಗಿದೆ. ಆದರೆ, ಜಾಗದ ಸಮಸ್ಯೆಯಿಂದಾಗಿ ನಿರ್ಮಾಣಕ್ಕೆ ತೊಡಕು ಉಂಟಾಗಿದೆ’ ಎಂದು ಬಿಇಒ ಹೇಮಂತ ರಾಜ್ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.38	72,169	56,252
ಹಾರಂಗಿ	2,859	2,854.86	3,650	3,250
ಕಬಿನಿ	2284.00	2,282.33	17,555	5,000
ಹೇಮಾವತಿ	2,922	2,921	35,116	41,770
ಲಿಂಗನಮಕ್ಕಿ	1,819	1,811.50	36,495	-
ಸೂಪಾ (ಮೀ)	564	547.05	23,198	-
ಮಾಣಿ	594	587.56	3,105	-
ತುಂಗಭದ್ರಾ	1,633	1,632.28	1,19,779	1,00,349
ಮಲಪ್ರಭಾ	2079.5	2,076.40	14,453	5,594
ಘಟಪ್ರಭಾ	2175	2,173.50	29,896	26,711
ಭದ್ರಾ	186	183.11	27,350	28,542
ಆಲಮಟ್ಟಿ (ಮೀ)	519.6	518.46	1,86,296	2,25,000
ನಾರಾಯಣಪುರ (ಮೀ)	492.25	490.81	2,20,000	2,21,812

*ನೆಲಮಟ್ಟದಿಂದ

ರಶ್ದಿ ಹತ್ಯೆ ಯತ್ನಕ್ಕೆ ಖಂಡನೆ; ಇರಾನ್ ಮೌನ

ನವದೆಹಲಿ/ಬೈರೂತ್/ಟೆಹರಾನ್/ಲಂಡನ್ (ಪಿಟಿಐ, ರಾಯಿಟರ್ಸ್): ಲೇಖಕ ಸಲ್ಮಾನ್ ರಶ್ದಿ ಅವರ ಹತ್ಯೆ ಯತ್ನಕ್ಕೆ ಜಾಗತಿಕವಾಗಿ ಭಾರಿ ಖಂಡನೆ ವ್ಯಕ್ತವಾಗಿದ್ದರೆ, ಇರಾನ್‌ನಲ್ಲಿ ಮೂಲಭೂತವಾದಿ ಸಿದ್ಧಾಂತದ ಪರವಾಗಿ ಇರುವವರು ಸಂತಸಪಟ್ಟಿದ್ದಾರೆ. ಇರಾನ್ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬ್ರಿಟನ್, ಅಮೆರಿಕ, ಫ್ರಾನ್ಸ್ ದೇಶಗಳು ಖಂಡಿಸಿವೆ. ಇದನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ಕರೆಯಲಾಗಿದೆ. ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯತ್ನಗಳನ್ನು ಸಹಿಸಲಾಗದು ಎಂದು ಬ್ರಿಟನ್ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಅವರು ಹೇಳಿದ್ದಾರೆ. ಮುಕ್ತವಾಗಿ ಮಾತನಾಡುವ ವಾತಾವರಣ ಇರಬೇಕು ಎಂದು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಅಭಿಪ್ರಾಯಪಟ್ಟಿದ್ದಾರೆ.

ಗೊಡ್ಡು ಸಂಪ್ರದಾಯಗಳ ವಿರುದ್ಧದ ರಶ್ದಿ ಅವರ ಹೋರಾಟ ನಮ್ಮದೂ ಹೌದು ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹೇಳಿದ್ದಾರೆ. ‘ರಶ್ದಿ ಅವರ ಮೇಲೆ ನಡೆದ ಭೀಕರ ದಾಳಿಗೆ ಜಗತ್ತು ಸಾಕ್ಷಿಯಾಗಿದೆ. ಅವರು ಬೇಗ ಗುಣಮುಖರಾಗಲಿ ಹಾಗೂ ದಾಳಿಕೋರನಿಗೆ ಶಿಕ್ಷೆಯಾಗಲಿ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಸಲಹೆಗಾರ ಸುಲ್ಲಿವನ್ ಹೇಳಿದ್ದಾರೆ.

ಭಾರತೀಯ ಲೇಖಕರು, ಕಲಾವಿದರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಗೀತಾಂಜಲಿ ಶ್ರೀ ಅವರು ಮಾನವೀಯತೆ ಎಲ್ಲಿದೆ ಎಂದು ಪ್ರಶ್ನಿಸಿದ್ದಾರೆ. ಜೈಪುರ ಸಾಹಿತ್ಯ ಉತ್ಸವದ ಆಯೋಜಕ ಸಂಜಯ್ ರಾಯ್, ಸಾಹಿತಿಗಳಾದ ನೀಲ್ ಗೈಮನ್, ಅಮಿತಾವ್ ಘೋಷ್, ಸ್ಟೀಫನ್ ಕಿಂಗ್, ಜೀನ್ ಗುರೆರೊ ಅವರು ಟ್ವಿಟರ್‌ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಇರಾನ್‌ನ ಮೂಲಭೂತವಾದಿ ಪತ್ರಿಕೆಗಳಿಂದ ಶ್ಲಾಘನೆ: ಸಲ್ಮಾನ್ ರಶ್ದಿ ಹತ್ಯೆಗೆ ಯತ್ನಿಸಿದ ದಾಳಿಕೋರನನ್ನು ಇರಾನ್‌ನ ಹಲವು ಮೂಲಭೂತವಾದಿ ಸಿದ್ಧಾಂತದ ಪತ್ರಿಕೆಗಳು ಶ್ಲಾಘಿಸಿದ್ದರೆ, ಇರಾನ್ ಈ ವಿಚಾರದಲ್ಲಿ ಅಂತರ ಕಾಯ್ದುಕೊಳ್ಳಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ. ರಶ್ದಿ ಮೇಲಿನ ದಾಳಿಗೆ ತನಗೇನೂ ಗೊತ್ತಿಲ್ಲ ಎಂದು ಇರಾನ್ ಸರ್ಕಾರದ ಬೆಂಬಲವಿರುವ ಸಶಸ್ತ್ರ ಪಡೆ ಹಿಜ್ಬುಲ್ಲಾ ಹೇಳಿದೆ.

ಖೊಮೇನಿ ಅವರಿಂದ ನೇಮಕವಾಗಿದ್ದ ‘ಕೈಹಾನ್’ ಪತ್ರಿಕೆಯ ಸಂಪಾದಕ ದಾಳಿಕೋರನನ್ನು ಹೊಗಳಿದ್ದಾರೆ. ‘ಖೊಮೇನಿ ಬಿಟ್ಟ ಬಾಣವು ಒಂದಲ್ಲಾ ಒಂದು ದಿನ ಗುರಿಯನ್ನು ಛೇದಿಸುತ್ತದೆ’ ಎಂಬುದಾಗಿ ಖೊಮೇನಿ ಅವರು ಈ ಹಿಂದೆ ಹೇಳಿದ್ದ ವಾಕ್ಯವನ್ನು ಅಸರ್ ಇರಾನ್ ನ್ಯೂಸ್ ಸೈಟ್ ಪ್ರಕಟಿಸಿದೆ. ‘ರಶ್ದಿಯ ಕುತ್ತಿಗೆಯನ್ನು ಇರಿದ ಚಾಕು’ ಎಂದು ವಟನ್ ಎಮರೂಜ್ ಪತ್ರಿಕೆ ತಲೆಬರಹ ನೀಡಿದೆ.

ದಾಳಿ ನಡೆದಿರುವುದಕ್ಕೆ ಇರಾನ್‌ನ ಕೆಲವು ನಾಗರಿಕರು ಸಂತಸ ವ್ಯಕ್ತಪಡಿಸಿದ್ದಾರೆ. 1998ರಲ್ಲಿ ‘ಸಟಾನಿಕ್ ವರ್ಸಸ್’ ಕೃತಿಯಲ್ಲಿ ಇಸ್ಲಾಂ ಅನ್ನು ಅವಹೇಳನ ಮಾಡಲು ಯತ್ನಿಸಿದ್ದ ರಶ್ದಿಯನ್ನು ಗುರಿಯಾಗಿಸಿ ನಡೆದಿರುವ ದಾಳಿ ಸರಿ ಎಂದು ಕೆಲವರು ಪ್ರತಿಪಾದಿಸಿದ್ದಾರೆ. ‘ರಶ್ದಿ ಯಾರೆಂದು ಗೊತ್ತಿಲ್ಲ. ಆದರೆ ಇಸ್ಲಾಂಗೆ ಅಪಮಾನ ಮಾಡಿದ ಅವರ ಮೇಲೆ ನಡೆದ ದಾಳಿಯಿಂದ ಸಂತೋಷವಾಗಿದೆ’ ಎಂದು ಇರಾನ್ ನಾಗರಿಕ ರೆಝಾ ಅಮಿರಿ ಎಂಬುವರು ಹೇಳಿದ್ದಾರೆ.

ಪರಮಾಣು ಒಪ್ಪಂದ ವಿಚಾರದಲ್ಲಿ ಹಲವು ದೇಶಗಳು ಈಗಾಗಲೇ ಇರಾನ್ ಜೊತೆ ಸಂಪರ್ಕ ಕಡಿತಗೊಳಿಸಿದ್ದು, ರಶ್ದಿ ವಿಚಾರದಿಂದ ಅದು ಇನ್ನಷ್ಟು ದೊಡ್ಡದಾಗುವುದು ಬೇಡ ಎಂದು ಅಭಿಪ್ರಾಯಪಟ್ಟಿದ್ದಾರೆ. ಚೀನಾ, ರಷ್ಯಾದಿಂದಲೂ ಇರಾನ್ ಏಕಾಂಗಿಯಾಗುವ ಪ್ರಸಂಗ ಎದುರಾಗಬಹುದು ಎಂದು ಇರಾನ್‌ನ ಮಾಜಿ ರಾಜತಾಂತ್ರಿಕ ಅಧಿಕಾರಿ ಮಾಷಲ್ಲಾ ಸೆಫತ್‌ಝುದಾ ಅವರು ಎಚ್ಚರಿಸಿದ್ದಾರೆ.

ಇರಾನ್‌ನ ಶ್ರೀಮಂತ ಧಾರ್ಮಿಕ ಸಂಸ್ಥೆಯು ರಶ್ದಿ ಹತ್ಯೆಗೆ ₹2 ಸಾವಿರ ಕೋಟಿ ಬಹುಮಾನ ಘೋಷಿಸಿತ್ತು. ಈ ಬಹುಮಾನದ ಮೊತ್ತವನ್ನು 2012ರಲ್ಲಿ ₹2,600 ಕೋಟಿಗೆ (33 ಲಕ್ಷ ಡಾಲರ್) ಏರಿಸಿತ್ತು.

ಭದ್ರತೆ ಅತಿಯಾಯಿತು ಎಂದಿದ್ದ ರಶ್ದಿ

ನ್ಯೂಯಾರ್ಕ್ (ಪಿಟಿಐ): ತಮಗೆ ನೀಡಲಾಗಿರುವ ಭದ್ರತೆ ಅತಿಯಾಯಿತು ಎಂದು ಸಲ್ಮಾನ್ ರಶ್ದಿ ಅವರು ಹಿಂದೊಮ್ಮೆ ದೂರಿದ್ದರು ಎಂದು ದಿ ನ್ಯೂಯಾರ್ಕ್ ಪೋಸ್ಟ್ ಪತ್ರಿಕೆ ಶನಿವಾರ ವರದಿ ಮಾಡಿದೆ.

2001ರಲ್ಲಿ ಪ್ರೇಗ್ ರೈಟರ್ಸ್ ಫೆಸ್ಟಿವಲ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ರಶ್ದಿ ಅವರು ಹೀಗೆ ಹೇಳಿದ್ದರು: ‘ಭಾರಿ ಭದ್ರತಾ ಸಿಬ್ಬಂದಿಯನ್ನು ಸುತ್ತಲೂ ಇರಿಸಿಕೊಂಡು ಇಲ್ಲಿ ಬಂದಿರುವುದಕ್ಕೆ ನನಗೆ ಮುಜುಗರವಾಗಿದೆ. ಇದು ನಿಜವಾಗಿಯೂ ಅನಗತ್ಯವಾಗಿತ್ತು ಎಂಬುದು ನನ್ನ ಭಾವನೆ. ಇದು ಅತಿ ಎನಿಸುತ್ತಿದೆ. ಖಂಡಿತವಾಗಿಯೂ ಇದು ನನ್ನ ಕೋರಿಕೆಯ ಮೇರೆಗೆ ಮಾಡಿದ ವ್ಯವಸ್ಥೆ ಅಲ್ಲ’.

> ರಶ್ದಿ ಮೇಲೆ ದಾಳಿ ನಡೆದಿದೆ ಎಂದರೆ, ಇಸ್ಲಾಂ ಟೀಕಾಕಾರರಾಗಿರುವ ಯಾರ ಮೇಲಾದರೂ ದಾಳಿ ನಡೆಯಬಹುದು. ಈ ಘಟನೆಯಿಂದ ಆಘಾತವಾಗಿದೆ
>
> **ತಸ್ಲೀಮಾ ನಸ್ರೀನ್**, ಲೇಖಕಿ

> ಕೆಲವು ಧಾರ್ಮಿಕ ಮುಖಂಡರು ಬೌದ್ಧಿಕವಾಗಿ ಶೂನ್ಯವಾಗಿದ್ದು, ಸಾಂಸ್ಕೃತಿಕವಾಗಿ ಅಜ್ಞಾನಿಗಳು, ರಶ್ದಿ ಹತ್ಯೆಗೆ ಫತ್ವಾ ಹೊರಡಿಸಿದ್ದನ್ನು ಸಮರ್ಥಿಸಿಕೊಳ್ಳಲಾಗದು. ದಾಳಿಕೋರನು ಇಸ್ಲಾಂ ಅನುಯಾಯಿಯೇ ಇರಬೇಕು
>
> **ಚಾರ್ಲಿ ಹೆಬ್ಡೊ**, ಫ್ರಾನ್ಸ್ ನಿಯತಕಾಲಿಕ

> ಪುಸ್ತಕ ನಿಷೇಧಕ್ಕೆ ನನ್ನ ವಿರೋಧವಿದೆ. ಆದರೆ ರಾಜೀವ್ ಗಾಂಧಿ ಸರ್ಕಾರವು ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಲು ರಶ್ದಿ ಅವರ ಸಟಾನಿಕ್ ವರ್ಸಸ್ ಕೃತಿಗೆ ನಿಷೇಧ ಹೇರಿತ್ತೇ ವಿನಾ ಮುಸ್ಲಿಮರ ತುಷ್ಟೀಕರಣಕ್ಕಾಗಿ ಅಲ್ಲ
>
> **ನಟವರ್ ಸಿಂಗ್**, ಹಿರಿಯ ಕಾಂಗ್ರೆಸ್ ಮುಖಂಡ

> ಕಾನೂನು ಕೈಗೆ ತೆಗೆದುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ. ರಶ್ದಿ ಅವರ ಹತ್ಯೆ ಯತ್ನವನ್ನು ಸರಿ ಎಂದು ಹೇಳಲಾಗದು. ಪ್ರವಾದಿ ಹೇಳಿದಂತೆ ಶಾಂತಿಯ ಮಾರ್ಗವನ್ನು ಎಲ್ಲರೂ ಪಾಲಿಸಬೇಕು
>
> **ಮೌಲಾನಾ ಖಾಲಿದ್ ರಶೀದ್ ಫರಂಗಿ ಮಹಾಲಿ**
>
> ಭಾರತದ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸದಸ್ಯ

> ರಶ್ದಿ ಹತ್ಯೆ ಯತ್ನದಿಂದ ಆಘಾತವಾಗಿದೆ. ಅವರು ಬೇಗ ಗುಣಮುಖರಾಗಲಿ. ಅವರ ಜೀವನ ಮತ್ತೆ ಎಂದಿನಂತೆ ಇರದು. ಸೃಜನಶೀಲ ಅಭಿವ್ಯಕ್ತಿಯು ಮುಕ್ತವಾಗಿರಲು ಸಾಧ್ಯವಿಲ್ಲವೇ?
>
> **ಶಶಿ ತರೂರ್**, ಕಾಂಗ್ರೆಸ್ ಮುಖಂಡ

ಚೀನಾದ ಗೂಢಚರ್ಯೆ ನೌಕೆ ತಂಗಲು ಲಂಕಾ ಅವಕಾಶ

ಕೊಲಂಬೊ (ಎಎಫ್‌ಪಿ): ಚೀನಾದ ಸಂಶೋಧನಾ ನೌಕೆ ಯುವಾನ್ ವಾಂಗ್–5 ಹಂಬನ್‌ತೋಟ ಬಂದರಿನಲ್ಲಿ ಇದೇ 16ರಿಂದ 22ರವರೆಗೆ ತಂಗುವುದಕ್ಕೆ ಶ್ರೀಲಂಕಾ ಸರ್ಕಾರ ಅನುಮತಿ ನೀಡಿದೆ. ಈ ಹಡಗು ಶ್ರೀಲಂಕಾದ ಬಂದರಿನಲ್ಲಿ ತಂಗುವುದಕ್ಕೆ ಭಾರತವು ಆಕ್ಷೇಪ ವ್ಯಕ್ತಪಡಿಸಿತ್ತು. ಹಾಗಾಗಿ, ಅನುಮತಿ ನೀಡುವುದು ಸ್ವಲ್ಪ ವಿಳಂಬವಾಗಿದೆ. ಭಾರತದ ಸೇನಾ ನೆಲೆಗಳು ಮತ್ತು ಇತರ ಸೌಲಭ್ಯಗಳ ಕುರಿತು ಈ ನೌಕೆಯು ಗೂಢಚರ್ಯೆ ನಡೆಸಬಹುದು ಎಂಬ ಕಳವಳವನ್ನು ಭಾರತ ವ್ಯಕ್ತಪಡಿಸಿತ್ತು. ಈ ನೌಕೆಯಲ್ಲಿ ಗೂಢಚರ್ಯೆಗೆ ಬೇಕಾದ ಸೌಲಭ್ಯಗಳು ಇವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಹಿಂದೂ ಮಹಾಸಾಗರದಲ್ಲಿ ಚೀನಾದ ಕಾರ್ಯಚಟುವಟಿಕೆಗಳು ಹೆಚ್ಚುತ್ತಿವೆ ಮತ್ತು ಶ್ರೀಲಂಕಾ ಮೇಲೆ ಚೀನಾದ ಪ್ರಭಾವ ದಟ್ಟವಾಗುತ್ತಿದೆ ಎಂಬ ಕಳವಳವನ್ನು ಭಾರತ ವ್ಯಕ್ತಪಡಿಸಿದೆ.

‘ರಾಜತಾಂತ್ರಿಕ ಅನುಮೋದನೆ ಇಂದು (ಶನಿವಾರ) ದೊರೆತಿದೆ. ಈ ನೌಕೆಯು ತಂಗುವುದಕ್ಕೆ ಬಂದರಿನಲ್ಲಿ ವ್ಯವಸ್ಥೆ ಮಾಡಲು ಸ್ಥಳೀಯವಾಗಿ ನೇಮಕ ಮಾಡಿಕೊಂಡಿರುವ ಏಜೆಂಟ್ ಜತೆ ಕೆಲಸ ಮಾಡಲಾಗುತ್ತಿದೆ’ ಎಂದು ಬಂದರಿನ ಮುಖ್ಯಸ್ಥ ನಿರ್ಮಲ್ ಪಿ. ಸಿಲ್ವ ತಿಳಿಸಿದ್ದಾರೆ.

ಈ ನೌಕೆಯು ಜುಲೈ 12ರಿಂದ ತಂಗಲು ಈ ಹಿಂದೆ ಅನುಮತಿ ನೀಡಲಾಗಿತ್ತು. ಆದರೆ, ದೇಶದ ಅಧ್ಯಕ್ಷರಾಗಿದ್ದ ಗೊಟಬಯ ರಾಜಪಕ್ಸ ಅವರು ಜುಲೈ 13ರಂದು ದೇಶದಿಂದ ಪರಾರಿಯಾಗಿದ್ದರು. ಅದಕ್ಕೂ ಹಿಂದೆ ಹಲವು ತಿಂಗಳು ಅಲ್ಲಿ ತೀವ್ರ ಪ್ರತಿಭಟನೆ ನಡೆದಿತ್ತು. ಗೊಟಬಯ ಅವರ ಸಹೋದರ ಮಹಿಂದ ರಾಜಪಕ್ಸ ಅವರು 2005ರಿಂದ 2015ರ ವರೆಗೆ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಚೀನಾದಿಂದ ಭಾರಿ ಮೊತ್ತದ ಸಾಲ ಪಡೆದಿದ್ದರು.

ಶುಕ್ರವಾರ ರಾತ್ರಿಯ ಹೊತ್ತಿಗೆ, ನೌಕೆಯು ಹಂಬನ್‌ತೋಟ ಬಂದರಿನಿಂದ ಸುಮಾರು ಸಾವಿರ ಕಿ.ಮೀ. ದೂರದಲ್ಲಿತ್ತು. ಈಗ ಅದು ಬಂದರಿನತ್ತ ಚಲಿಸುತ್ತಿದೆ ಎಂದು ಬಂದರಿನ ಅಧಿಕಾರಿಗಳು ಹೇಳಿದ್ದಾರೆ.

ಉಪಗ್ರಹಗಳ ಮೇಲೆ ನಿಗಾ: ಭಾರತ ಕಳವಳ

ಯುವಾನ್ ವಾಂಗ್ ನೌಕೆಯು ಭಾರತದ ಬಾಹ್ಯಾಕಾಶ ಚಟುವಟಿಕೆಗಳು ಮತ್ತು ಉಪಗ್ರಹಗಳ ಮೇಲೆ ನಿಗಾ ಇರಿಸಬಹುದು. ಖಂಡಾಂತರ ಕ್ಷಿಪಣಿ ಉಡ್ಡಯನದ ನಿರ್ದಿಷ್ಟ ಉದ್ದೇಶಗಳ ಮೇಲೆಯೂ ಕಣ್ಗಾವಲು ಇರಿಸಬಹುದು ಎಂಬ ಆತಂಕ ಭಾರತವನ್ನು ಕಾಡುತ್ತಿದೆ.

ಈ ನೌಕೆಯು ಗೂಢಚರ್ಯೆ ನಡೆಸಬಹುದು. ಹಾಗಾಗಿ ತಂಗಲು ಅವಕಾಶ ಕೊಡಬಾರದು ಎಂದು ಶ್ರೀಲಂಕಾವನ್ನು ಭಾರತ ಕೋರಿತ್ತು.

ಭಾರತದ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳ ಮೇಲೆ ಉಂಟಾಗುವ ಎಲ್ಲ ರೀತಿಯ ಪರಿಣಾಮಗಳ ಮೇಲೆ ನಿಗಾ ಇರಿಸಲಾಗಿದೆ. ಅದರ ರಕ್ಷಣೆಗೆ ಬೇಕಾದ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಭಾರತ ಹೇಳಿದೆ.

ಶ್ರೀಲಂಕಾಕ್ಕೆ ಭಾರತದಿಂದ 2 ಡಾರ್ನಿಯರ್ ವಿಮಾನ

ಸಾಗರದ ಮೇಲೆ ನಿಗಾ ಇರಿಸುವ ಎರಡು ಡಾರ್ನಿಯರ್–228 ವಿಮಾನಗಳನ್ನು ಭಾರತವು ನೀಡಿದೆ ಎಂದು ಶ್ರೀಲಂಕಾದ ವಾಯುಪಡೆ ಹೇಳಿದೆ. ಭಾರತದ ನೌಕಾಪಡೆಯಲ್ಲಿ ಕೆಲಸ ಮಾಡುತ್ತಿದ್ದ ಈ ವಿಮಾನಗಳನ್ನು ಪಡೆದುಕೊಳ್ಳಲಾಗಿದೆ. 2018ರಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಈ ವಿಮಾನಗಳು ದೊರೆತವು ಎಂದು ಶ್ರೀಲಂಕಾ ವಾಯುಪಡೆ ತಿಳಿಸಿದೆ.

ದೇಶದಾದ್ಯಂತ ‘ಹರ್ ಘರ್ ತಿರಂಗಾ’ಕ್ಕೆ ಚಾಲನೆ

ನವದೆಹಲಿ (ಪಿಟಿಐ): ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ದೇಶದಾದ್ಯಂತ ‘ಹರ್ ಘರ್ ತಿರಂಗಾ’ ಅಭಿಯಾನಕ್ಕೆ ಶನಿವಾರ ಚಾಲನೆ ದೊರೆಯಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನವದೆಹಲಿಯ ತಮ್ಮ ನಿವಾಸದಲ್ಲಿ ರಾಷ್ಟ್ರಧ್ವಜ ಹಾರಿಸಿ, ನಾಗರಿಕರೆಲ್ಲರೂ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

‘ತ್ರಿವರ್ಣ ಧ್ವಜ ನಮ್ಮ ಹೆಮ್ಮೆ. ಇದು ಎಲ್ಲಾ ಭಾರತೀಯರನ್ನು ಒಂದುಗೂಡಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿರುವ ‘ಹರ್ ಘರ್ ತಿರಂಗಾ’ ಅಭಿಯಾನದ ಅಂಗ ವಾಗಿ ನನ್ನ ಮನೆಯಲ್ಲಿ ರಾಷ್ಟ್ರಧ್ವಜ ಹಾರಿಸಿದ್ದೇನೆ. ಜೊತೆಗೆ ಹುತಾತ್ಮರಿಗೂ ಗೌರವ ಸಲ್ಲಿಸಿದ್ದೇನೆ’ ಎಂದು ಶಾ ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕೂಡ ತಮ್ಮ ನಿವಾಸದಲ್ಲಿ ರಾಷ್ಟ್ರಧ್ವಜ ಹಾರಿಸಿದ್ದು, ಅದರ ಚಿತ್ರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಕೇಂದ್ರ ಸಚಿವ ಭೂಪಿಂದರ್ ಯಾದವ್ ಅವರು ಉತ್ತರ ಪ್ರದೇಶದ ಬಲ್ಲಿಯಾಕ್ಕೆ ಭೇಟಿ ನೀಡಿ ಸ್ವಾತಂತ್ರ್ಯ ಹೋರಾಟಗಾರ ಚಿತ್ತು ಪಾಂಡೆ ಅವರಿಗೆ ಗೌರವ ಸಲ್ಲಿಸಿದರು. ಹಿಮಾಚಲ ಪ್ರದೇಶದ ಉನಾದಲ್ಲಿ ಹಮ್ಮಿಕೊಂಡಿದ್ದ ‘ಪ್ರಭಾತ ಫೇರಿ’ಯಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಪಾಲ್ಗೊಂಡಿದ್ದರು.

ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ರಾಜಭವನದ ಸಿಬ್ಬಂದಿಗೆ ರಾಷ್ಟ್ರಧ್ವಜ ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

(ಅಹಮದಾಬಾದ್ ವರದಿ): ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಹೀರಾಬೆನ್ ಅವರು ಗುಜರಾತ್‌ನ ಗಾಂಧಿನಗರದ ಹೊರವಲಯದಲ್ಲಿರುವ ತಮ್ಮ ಮನೆಯಲ್ಲಿ ಮಕ್ಕಳಿಗೆ ರಾಷ್ಟ್ರಧ್ವಜವನ್ನು ವಿತರಿಸುವ ಮೂಲಕ ತಿರಂಗಾ ಅಭಿಯಾನದಲ್ಲಿ ಪಾಲ್ಗೊಂಡರು.

ಪ್ರೊಫೈಲ್ ಚಿತ್ರವಾಗಿ ರಾಷ್ಟ್ರಧ್ವಜ ಬಳಸಿದ ಆರ್‌ಎಸ್‌ಎಸ್

ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ತನ್ನ ಸಾಮಾಜಿಕ ಮಾಧ್ಯಮ ಖಾತೆಗಳ ಪ್ರೊಫೈಲ್ ಚಿತ್ರವನ್ನು ಶನಿವಾರ ರಾಷ್ಟ್ರಧ್ವಜವಾಗಿ ಬದಲಿಸಿದೆ.

ರಾಷ್ಟ್ರಧ್ವಜದ ಕುರಿತು ಆರ್‌ಎಸ್‌ಎಸ್‌ನ ನಿಲುವಿನ ಬಗ್ಗೆ ಕಾಂಗ್ರೆಸ್ ಹಾಗೂ ಇತರ ವಿರೋಧಪಕ್ಷಗಳು ಟೀಕಿಸಿದ್ದವು.

‘52 ವರ್ಷಗಳಿಂದ ನಾಗಪುರದ ಪ್ರಧಾನ ಕಚೇರಿಯಲ್ಲಿ ರಾಷ್ಟ್ರಧ್ವಜ ಹಾರಿಸದ ಆರ್‌ಎಸ್‌ಎಸ್, ಪ್ರೊಫೈಲ್ ಚಿತ್ರವಾಗಿ ರಾಷ್ಟ್ರಧ್ವಜವನ್ನು ಬಳಸಬೇಕೆಂದು ಪ್ರಧಾನಿ ಮೋದಿ ಅವರು ನೀಡಿರುವ ಕರೆಯನ್ನು ಸ್ವೀಕರಿಸುತ್ತದೆಯೇ’ ಎಂದು ಈಚೆಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದರು.

ಸಂಕ್ಷಿಪ್ತ ಸುದ್ದಿ

ನ್ಯಾಯಾಧೀಶರ ಹತ್ಯೆ: ಇಬ್ಬರಿಗೆ ಆಜೀವ ಜೈಲು

ರಾಂಚಿ (ಜಾರ್ಖಂಡ್): ಧನ್‌ಬಾದ್ ನ್ಯಾಯಾಧೀಶರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಟೊ ಚಾಲಕ ಮತ್ತು ಆತನ ಸಹಚರನಿಗೆ ಇಲ್ಲಿನ ವಿಶೇಷ ಸಿಬಿಐ ನ್ಯಾಯಾಲಯವು ಜೀವನಪರ್ಯಂತ ಜೈಲು ಶಿಕ್ಷೆ ವಿಧಿಸಿದೆ.

‘ಇಂತಹ ಆರೋಪಿಗಳನ್ನು ಅವರ ಬದುಕಿನ ಕೊನೆಯವರೆಗೂ ಜೈಲಿನಲ್ಲಿರಿಸಬೇಕು’ ಎಂದೂ ತೀರ್ಪು ಪ್ರಕಟಿಸುವಾಗ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಇಬ್ಬರು ಅಪರಾಧಿಗಳಿಗೆ ತಲಾ ₹20 ಸಾವಿರ ದಂಡ ವಿಧಿಸಲಾಗಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ 49 ವರ್ಷದ ನ್ಯಾಯಾಧೀಶ ಉತ್ತಮ್ ಆನಂದ್ ಅವರನ್ನು ಹತ್ಯೆ ನಡೆಸಿದ ಪ್ರಕರಣದಲ್ಲಿ ಆಟೊ ಚಾಲಕ ಲಖನ್ ವರ್ಮಾ ಮತ್ತು ಆತನ ಸಹಚರ ರಾಹುಲ್ ವರ್ಮಾ ದೋಷಿಗಳೆಂದು ಸಿಬಿಐ ನ್ಯಾಯಾಲಯದ ನ್ಯಾಯಾಧೀಶರಾದ ರಜನಿಕಾಂತ್ ಪಾಠಕ್ ಅವರು ಜುಲೈ 28ರಂದು ತೀರ್ಪು ನೀಡಿದ್ದರು.

‘ನ್ಯಾಯಾಧೀಶರೊಬ್ಬರು ಈ ರೀತಿ ಹತ್ಯೆಗೀಡಾಗುತ್ತಾರೆ ಎಂದು ಯಾರೂ ಭಾವಿಸಿರಲಾರರು. ಈ ಘಟನೆಯು ಇಡೀ ನ್ಯಾಯಾಂಗ ವ್ಯವಸ್ಥೆಯನ್ನೇ ಬೆಚ್ಚಿಬೀಳಿಸಿದೆ’ ಎಂದೂ ರಜನಿಕಾಂತ್ ಪಾಠಕ್ ಹೇಳಿದ್ದಾರೆ.

ಕಾಶ್ಮೀರದಲ್ಲಿ ಸರ್ಕಾರಿ ಉದ್ಯೋಗದಿಂದ ನಾಲ್ವರ ವಜಾ

ಶ್ರೀನಗರ: ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನೇತೃತ್ವದ ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಭಯೋತ್ಪಾದಕರ ಜೊತೆ ನಂಟು ಹೊಂದಿರುವ ಆರೋಪದಡಿ ನಾಲ್ವರನ್ನು ಸರ್ಕಾರಿ ಉದ್ಯೋಗದಿಂದ ವಜಾಗೊಳಿಸಿ ಶನಿವಾರ ಆದೇಶಿಸಿದೆ.

1990ರಲ್ಲಿ ನಡೆದಿದ್ದ ಕಾಶ್ಮೀರಿ ಪಂಡಿತರ ಹತ್ಯೆ ಪ್ರಕರಣದ ಆರೋಪಿಯಾಗಿರುವ ಬಿಟ್ಟಾ ಕರಾಟೆ ಪತ್ನಿ ಅಸಬಾ ಉಲ್ ಅರ್ಜಮಂದ್ ಖಾನ್, ಪಾಕಿಸ್ತಾನ ಮೂಲದ ಯುನೈಟೆಡ್ ಜಿಹಾದ್ ಕೌನ್ಸಿಲ್ (ಯುಜೆಸಿ) ಮುಖ್ಯಸ್ಥ ಸೈಯದ್ ಸಲಾವುದ್ದೀನ್ ಪುತ್ರ ಸೈಯದ್ ಅಬ್ದುಲ್ ಮುಯೀದ್, ಮಜೀದ್ ಹುಸೇನ್ ಕ್ವಾದ್ರಿ ಮತ್ತು ಮುಹೀತ್ ಅಹ್ಮದ್ ಭಟ್ ವಜಾಗೊಂಡವರು.

19 ವರ್ಷ ಜೈಲಿನಲ್ಲಿದ್ದ ‘ಬಾಲಾಪರಾಧಿ’ ಬಿಡುಗಡೆಗೆ ಆದೇಶ

ನವದೆಹಲಿ (ಪಿಟಿಐ): ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಕೊಲೆಮಾಡಿದ್ದ ಆರೋಪದಡಿ ಸುಮಾರು 19 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ ‘ಬಾಲಾಪರಾಧಿ’ಯ ಬಿಡುಗಡೆಗೆ ಸುಪ್ರೀಂ ಕೋರ್ಟ್ ಶನಿವಾರ ಆದೇಶಿಸಿದೆ.

‘ಬಾಲ ನ್ಯಾಯ ಕಾಯ್ದೆ–2000ದ ಪ್ರಕಾರ ಬಾಲಾಪರಾಧಿಯನ್ನು ಮೂರು ವರ್ಷಗಳಿಗೂ ಹೆಚ್ಚು ಕಾಲ ಕಸ್ಟಡಿಯಲ್ಲಿ ಇಟ್ಟುಕೊಳ್ಳುವಂತಿಲ್ಲ’ ಎಂದು ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಹಾಗೂ ವಿ.ರಾಮಸುಬ್ರಮಣಿಯಂ ಅವರಿದ್ದ ದ್ವಿಸದಸ್ಯ ಪೀಠ ಹೇಳಿದೆ.

ಸಿಯುಇಟಿ–ಯುಜಿ ಪರೀಕ್ಷೆ ಮರುನಿಗದಿ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ನಾಲ್ಕನೇ ಹಂತದ ಪರೀಕ್ಷೆಯನ್ನು ಇದೇ 30ಕ್ಕೆ ನಿಗದಿಪಡಿಸಲಾಗಿದೆ. ಪರೀಕ್ಷಾ ಕೇಂದ್ರಕ್ಕಾಗಿ ನಗರ ಆಯ್ಕೆ ಮಾಡಲು 11 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಈ ಪರಿಷ್ಕರಣೆ ಮಾಡಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೇಂದ್ರ ಸಚಿವರ ಎದುರೇ ನಾಡಗೀತೆಗೆ ಅಪಮಾನ 5
ಎಚ್ಚರಿಕೆಯಿಂದ ನೀರು ಬಳಸಲು ಸಲಹೆ
ರಾಜ್ಯದಲ್ಲಿ 10 ಸಾವಿರ ಸಿಎಸ್‌ಸಿ ಗುರಿ: ವೀರೇಂದ್ರ ಹೆಗ್ಗಡೆ 5
ಇಂಗ್ಲೆಂಡ್: ವಿವಿಧೆಡೆ ಬರ, ಬಿಸಿ ಗಾಳಿ 6

ಭಾನುವಾರದ ಪುರವಣಿ
ಸ್ವತಂತ್ರ ಭಾರತದ ಏಳೂವರೆ ದಶಕಗಳ ಪಯಣದ ಹಿನ್ನೋಟ ಹಾಗೂ ಭವಿಷ್ಯದ ಚಿಂತನೆಗಳು



ಖ್ಯಾತನಾಮರ ಕೇಂದ್ರಗಳಿಗೆ ಅನುದಾನದ ಕೊರತೆ • ಆಜೀವ ಟ್ರಸ್ಟಿಗಳಂತಾದ ಪದಾಧಿಕಾರಿಗಳು

ನಾಮಬಲವೇ ಆಸ್ತಿ: ಕಾಯಕ ನಾಸ್ತಿ

• ವರುಣ ಹೆಗಡೆ

ಬೆಂಗಳೂರು: ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ವೈವಿಧ್ಯವನ್ನು ಚಿರಸ್ಥಾಯಿಯಾಗಿಸಿ, ಯುವ ಸಮುದಾಯಕ್ಕೆ ಪ್ರೇರಣೆ ನೀಡಬೇಕೆಂಬ ಆಶಯದಿಂದ ರಚನೆಯಾದ ಖ್ಯಾತ ನಾಮರ ಹೆಸರಿನ ಟ್ರಸ್ಟ್‌ಗಳು ಮೂಲ ಆಶಯವನ್ನೇ ಮರೆತಿವೆ. ಸದುದ್ದೇಶದಿಂದ ಸರ್ಕಾರ ರಚಿಸಿರುವ ಟ್ರಸ್ಟ್‌ಗಳ ಪೈಕಿ ಕೆಲವು ಕೆಲವರ ಸ್ವಯಾರ್ಜಿತ ಆಸ್ತಿಯಂತಾಗಿದ್ದರೆ, ಅನುದಾನದ ತಾರತಮ್ಯ, ಜಿಲ್ಲಾಧಿಕಾರಿಗಳ ನಿರಾಸಕ್ತಿ, ಅಧ್ಯಕ್ಷರ ವಯೋಸಹಜ ಅನಾರೋಗ್ಯ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಈ ಟ್ರಸ್ಟ್‌ಗಳ ಅಸ್ತಿತ್ವವೇ ಅಲುಗಾಡತೊಡಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿ 24 ಟ್ರಸ್ಟ್, ಪ್ರತಿಷ್ಠಾನಗಳು ಕಾರ್ಯ ನಿರ್ವಹಿಸುತ್ತಿವೆ. ಬಹುತೇಕ ಟ್ರಸ್ಟ್‌ಗಳು ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿವೆ. 'ಸಾಹಿತ್ಯ, ಸಂಗೀತ ಮತ್ತು ಕಲಾಲೋಕದಲ್ಲಿ ಪ್ರಜ್ವಲಿಸಿ, ಮರೆಯಾದವರ ಹೆಸರು ಚಿರಸ್ಥಾಯಿ ಆಗಬೇಕು. ಅಂತಹವರ ಕೊಡುಗೆ ಮತ್ತು ವಿಚಾರಧಾರೆ ಎಲ್ಲೆಡೆ ಪಸರಿಸಬೇಕು' ಎಂಬುದು ಟ್ರಸ್ಟ್‌ಗಳ ಸ್ಥಾಪನೆಯ ಮೂಲ ಉದ್ದೇಶ. ಈ ಟ್ರಸ್ಟ್‌ಗಳ ಕಾರ್ಯವೈಖರಿ ಅನುಸಾರ ಇಲಾಖೆಯು ₹ 5 ಲಕ್ಷದಿಂದ 15 ಲಕ್ಷದವರೆಗೆ ವಾರ್ಷಿಕ ಅನುದಾನ ನೀಡುತ್ತಿದೆ.

ಭವನ ನಿರ್ಮಾಣ, ಸಮಗ್ರ ಸಾಹಿತ್ಯ ಸಂಪುಟ ಹೊರತರುವುದೂ ಸೇರಿ ವಿವಿಧ ವಿಶೇಷ ಯೋಜನೆಗಳಿಗೆ ಪ್ರತ್ಯೇಕವಾಗಿ ಸರ್ಕಾರದಿಂದ ಅನುದಾನ ಪಡೆಯಲು ಅವಕಾಶವಿದೆ. ಆದರೆ, ಕಳೆದ ಕೆಲ ವರ್ಷಗಳಿಂದ ಪ್ರವಾಹ, ಬರ, ಕೋವಿಡ್ ಸೇರಿ ವಿವಿಧ ಕಾರಣಗಳನ್ನು ನೀಡಿ, ಅನುದಾನಕ್ಕೆ ಕತ್ತರಿ ಹಾಕುತ್ತಲೇ ಬರಲಾಗಿದೆ. ಇದರಿಂದಾಗಿ ಪ್ರಶಸ್ತಿ ಪ್ರದಾನದಂತಹ ಕಾರ್ಯಕ್ರಮಗಳಿಗೆ ಟ್ರಸ್ಟ್‌ಗಳು ಸೀಮಿತ ಆಗುತ್ತಿವೆ. ನೀಡಿದ ಅನುದಾನಕ್ಕೆ ಉತ್ತರದಾಯಿತ್ವವೂ ಇಲ್ಲವಾಗಿದೆ. ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳಿಂದ ಟ್ರಸ್ಟ್‌ಗಳ ಕಾರ್ಯವೈಖರಿ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆಯೂ ನಡೆಯುತ್ತಿಲ್ಲ. ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯೂ ಆಗುತ್ತಿಲ್ಲ. ಇದರಿಂದಾಗಿ ಅನುದಾನದ ಬಳಕೆಯಲ್ಲಿ ಪಾರದರ್ಶಕತೆ ಮರೆಯಾಗುತ್ತಿದೆ ಎಂಬ ಆರೋಪ ಸಹ ಸಾಂಸ್ಕೃತಿಕ ವಲಯದಲ್ಲಿದೆ.

ಧಾರವಾಡದ ಮಲ್ಲಿಕಾರ್ಜುನ ಮನ್ಸೂರ ಟ್ರಸ್ಟ್, ಡಿ.ವಿ.ಜಿ. ಪ್ರತಿಷ್ಠಾನ, ಉಡುಪಿಯ ಡಾ.ಶಿವರಾಮ ಕಾರಂತ ಟ್ರಸ್ಟ್, ಧಾರವಾಡದ ಡಾ.ಬಸವರಾಜ ರಾಜಗುರು ಟ್ರಸ್ಟ್ ಸೇರಿ ಕೆಲ ಟ್ರಸ್ಟ್‌ಗಳಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರು. ಕಾರ್ಯದೊತ್ತಡಗಳಿಂದ ಟ್ರಸ್ಟ್‌ನ ಕಾರ್ಯಚಟುವಟಿಕೆಗಳ ಕಡೆ ಅವರು ಗಮನ ಹರಿಸುತ್ತಿಲ್ಲ. ಇದರಿಂದಾಗಿ ಕೆಲ ಟ್ರಸ್ಟ್‌ಗಳು ನೀಡಲಾದ ವಾರ್ಷಿಕ ಅನುದಾನವನ್ನೂ ಉಳಿಸಿಕೊಳ್ಳುತ್ತಿವೆ.

ಇನ್ನು ಕೆಲ ಟ್ರಸ್ಟ್‌ಗಳ ಆಡಳಿತ ಕಚೇರಿ ಇರುವ ಸ್ಥಳಗಳಿಗೂ, ಅಧ್ಯಕ್ಷರು ವಾಸಿಸುವ ಸ್ಥಳಗಳಿಗೂ ಯಾವುದೇ ಸಂಬಂಧವಿಲ್ಲ. ಹಾವೇರಿಯಲ್ಲಿರುವ ಡಾ.ವಿ.ಕೃ. ಗೋಕಾಕ ಸ್ಮಾರಕ ಟ್ರಸ್ಟ್, ಶಿವಮೊಗ್ಗದಲ್ಲಿರುವ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಮಂಡ್ಯದಲ್ಲಿರುವ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಸೇರಿ ಕೆಲ ಟ್ರಸ್ಟ್‌ಗಳ ಕಚೇರಿ ಹಾಗೂ ಅಧ್ಯಕ್ಷರ ನಿವಾಸ ಬೇರೆ ಬೇರೆ ಜಿಲ್ಲೆಯಲ್ಲಿವೆ.

4ನೇ ಪುಟ ನೋಡಿ


ಇನ್ನಷ್ಟು ಸುದ್ದಿಗಳು 4



ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ಕವಿಮನೆ


ಒಳನೋಟ
ಕಳಾಹೀನ ಟ್ರಸ್ಟ್‌ಗಳು
ಪ್ರತಿಕ್ರಿಯಿಸಿ: 9606038256
feedback@prajavani.co.in

ಎಲ್ಲ ಟ್ರಸ್ಟ್‌ಗಳಿಗೆ ಕೊಟ್ಟ ಅನುದಾನ (₹ಕೋಟಿಗಳಲ್ಲಿ)



'ಸರ್ಕಾರದ ಹಸ್ತಕ್ಷೇಪ ತಪ್ಪಲಿ'

ಟ್ರಸ್ಟ್‌ಗಳೂ ಸೇರಿ ಸರ್ಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ ಇಲ್ಲವಾಗಿದೆ. ಸಾಂಸ್ಕೃತಿಕ ಕೇಂದ್ರಗಳಲ್ಲಿಯೂ ರಾಜಕೀಯ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಇದರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ವಿಷಯ ತಜ್ಞರು ಸಾಂಸ್ಕೃತಿಕ ಸಂಸ್ಥೆಗಳನ್ನು ಮುನ್ನಡೆಸಬೇಕು. ಸರ್ಕಾರದ ಹಸ್ತಕ್ಷೇಪ ತಪ್ಪಬೇಕು. ಅನುದಾನವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಳ ಮಾಡುತ್ತಾ ಹೋಗಬೇಕು. ಆದರೆ, ಇರುವ ಅನುದಾನವನ್ನೂ ಕಡಿತ ಮಾಡಲಾಗುತ್ತಿದೆ. ಪಠ್ಯಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಮನನೊಂದು ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನಕ್ಕೆ ರಾಜೀನಾಮೆ ನೀಡಿದ್ದೇನೆ.



ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

'ಅನುದಾನ, ಸ್ವಾಯತ್ತತೆ ಅಗತ್ಯ'

ಟ್ರಸ್ಟ್‌ಗಳು ಪ್ರಶಸ್ತಿ ವಿತರಣೆಯಂತಹ ಕಾರ್ಯಕ್ರಮಗಳಿಗೆ ಸೀಮಿತವಾಗುತ್ತಿವೆ. ಅವುಗಳಿಗೆ ಸ್ವಾಯತ್ತತೆ ಇಲ್ಲದಿರುವುದರಿಂದ ಸರ್ಕಾರದ ಅಂಗಸಂಸ್ಥೆಯಂತಾಗಿವೆ. ಕೆಲವು ಟ್ರಸ್ಟ್‌ಗಳಿಗೆ ₹ 10 ಲಕ್ಷದಿಂದ ₹12 ಲಕ್ಷದವರೆಗೆ ವಾರ್ಷಿಕ ನೀಡಲಾಗುತ್ತಿದೆ. ಇಷ್ಟು ಅನುದಾನದಲ್ಲಿ ದೀರ್ಘಾವಧಿ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಸ್ವರೂಪವೂ ಟ್ರಸ್ಟ್‌ಗಳಿಗಿಲ್ಲ. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷನಾಗಿದ್ದ ನಾನು, ಐದು ವರ್ಷ ಪೂರ್ಣವಾದ ಬಳಿಕ ರಾಜೀನಾಮೆ ನೀಡಿರುವೆ. ಟ್ರಸ್ಟ್‌ಗಳ ಪದಾಧಿಕಾರಿಗಳಿಗೂ ಅಕಾಡೆಮಿ, ಪ್ರಾಧಿಕಾರಗಳ ರೀತಿ ಅಧಿಕಾರಾವಧಿ ನಿಗದಿಪಡಿಸಬೇಕು.



ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತಿ



ಎಲ್ಲೆಲ್ಲೂ ತ್ರಿವರ್ಣ ಧ್ವಜ
ವಿಧಾನಸೌಧದ ಮುಂಭಾಗದಲ್ಲಿ ಶನಿವಾರ ನಡೆದ ಮನೆ ಮನೆಗಳಲ್ಲಿ ರಾಷ್ಟ್ರ ಧ್ವಜ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಸಾವಿರಾರು ವಿದ್ಯಾರ್ಥಿಗಳು ತ್ರಿವರ್ಣ ಧ್ವಜದೊಂದಿಗೆ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಮನೆ ಮನೆಗೆ ರಾಷ್ಟ್ರಧ್ವಜ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '75 ವರ್ಷ ಆತ್ಮಾವಲೋಕನ ಮತ್ತು ಸಿಂಹಾವಲೋಕನದ ಮಹತ್ವದ ಘಟ್ಟ. ಮುಂದಿನ 25 ವರ್ಷದ ಅಮೃತಕಾಲದಲ್ಲಿ ವಿಶ್ವದಲ್ಲಿ ಭಾರತವನ್ನು ಶ್ರೇಷ್ಠವಾಗಿಸುವ ಜವಾಬ್ದಾರಿ ಯುವಜನರ ಮೇಲಿದೆ. ಇದು ನಮ್ಮ ಬದ್ಧತೆ ಮತ್ತು ಸಂಕಲ್ಪ. ಯುವಕರು ಸಮಬಾಳಿನ, ಸಮಪಾಲಿನ ಭಾರತ ನಿರ್ಮಾಣದ ಸಂಕಲ್ಪ ಮಾಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯದಾದ್ಯಂತ ಆಯೋಜಿಸಿರುವ 'ಮನೆ ಮನೆಗಳಲ್ಲಿ ರಾಷ್ಟ್ರಧ್ವಜ' ಅಭಿಯಾನಕ್ಕೆ ವಿಧಾನಸೌಧದ ಎದುರು ಶನಿವಾರ ಚಾಲನೆ ನೀಡಿದ ಅವರು, 'ರಾಜ್ಯದಲ್ಲಿ ಸರ್ಕಾರದ ವತಿಯಿಂದ 1.08 ಕೋಟಿ ಧ್ವಜಗಳನ್ನು ನೀಡಿದ್ದೇವೆ. ಜನರೂ ಸ್ವಪ್ರೇರಣೆಯಿಂದ ಧ್ವಜ ಖರೀದಿಸಿದ್ದಾರೆ. 25 ಲಕ್ಷ ಮನೆಗಳ ಮೇಲೆ ಧ್ವಜ ಹಾರಾಡುತ್ತಿದೆ' ಎಂದರು.

'ಭವ್ಯ ಭಾರತ ಕಟ್ಟಲು ಯುವಜನತೆ ಸನ್ನದ್ಧರಾಗಬೇಕು. ದೇಶ ಮೊದಲು, ದೇಶದ ನಂತರ ನಾವೆಲ್ಲರೂ ಎಂಬುದನ್ನು ಪ್ರತಿಪಾದಿಸಬೇಕು. ಸಂಕುಚಿತ, ಸ್ವಾರ್ಥ ಮನೋಭಾವನೆ ತೊರೆದು, ದೇಶಕ್ಕಾಗಿ ನಿಲ್ಲುವ ಕರ್ತವ್ಯ ನಮ್ಮೆಲ್ಲರದ್ದು ಆಗಬೇಕು' ಎಂದರು.

'ಮುಂದಿನ 25 ವರ್ಷ ದೇಶಕ್ಕಾಗಿ ನಾನೇನು ಮಾಡಿದ್ದೇನೆ ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕು. ಯುವಜನರೆಂದರೆ ಶಕ್ತಿ ಮತ್ತು ಭವಿಷ್ಯ. ನವಕರ್ನಾಟಕದಿಂದ ನವಭಾರತ ನಿರ್ಮಾಣ ಮಾಡಬೇಕಿದೆ. ಯುವಜನರು ಭಾರತದ ಭವಿಷ್ಯ ನಿರ್ಮಿಸುವ ಭಾಗ್ಯಶಾಲಿಗಳು. ವ್ಯಕ್ತಿಗಾದರೆ 75 ವರ್ಷ ದೊಡ್ಡ ವಯಸ್ಸು. ದೇಶಕ್ಕಾದರೆ ನವತರುಣನ ವಯಸ್ಸು. ಯುವಜನರೇ ಇರುವ ಭವ್ಯ ಭವಿಷ್ಯವಿರುವ ದೇಶ ನಮ್ಮದು. ಪ್ರಧಾನಿ ನರೇಂದ್ರ ಮೋದಿ ಅವರು ಸಶಕ್ತ, ಸಂಪದ್ಭರಿತ ಭಾರತ ಕಟ್ಟಲು ಶ್ರಮಿಸುತ್ತಿದ್ದಾರೆ' ಎಂದು ಬಣ್ಣಿಸಿದರು.

ರಾಷ್ಟ್ರಧ್ವಜವನ್ನು ಹಿಡಿದಿದ್ದ ಸಾವಿರಾರು ವಿದ್ಯಾರ್ಥಿಗಳು ಈ ಅಭಿಯಾನದಲ್ಲಿ ಭಾಗವಹಿಸಿದರು.

ಹುಲಿಹೈದರ ಘರ್ಷಣೆ: 22 ಮಂದಿ ಬಂಧನ 5
'ತೈಲದ ಮೂಲ ಮುಚ್ಚಿಟ್ಟ ಭಾರತ' 6

ಸರ್ಕಾರ ನಡೀತಾ ಇಲ್ಲ: ಸಚಿವ ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ನಡೀತಾ ಇಲ್ಲ. ಇಲ್ಲಿ, ಮ್ಯಾನೇಜ್ ಮಾಡ್ತಾ ಇದ್ದೀವಿ ಅಷ್ಟೇ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿರುವ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮಾತು ಮುಂದುವರಿಸಿರುವ ಸಚಿವರು, 'ತಳ್ಳಿದರೆ ಸಾಕಪ್ಪ. ಎಂಟು ತಿಂಗಳಷ್ಟೆ ಅಂತ ತಳ್ತಾ ಇದೀವಿ ಕಣಪ್ಪಾ' ಎಂದೂ ಹೇಳುತ್ತಾರೆ.

ಈ ಸಂಬಂಧ, ಪ್ರತಿಕ್ರಿಯೆ ಪಡೆಯಲು ಮಾಧುಸ್ವಾಮಿ ಅವರಿಗೆ ಕರೆ ಮಾಡಿದರೆ ಅವರ ಆಪ್ತ ಸಹಾಯಕರು ಕರೆ ಸ್ವೀಕರಿಸಿದರೇ ವಿನಃ ಸಚಿವರು ಸಂಪರ್ಕಕ್ಕೆ ಸಿಗಲಿಲ್ಲ.

ಚನ್ನಪಟ್ಟಣದಿಂದ ಕರೆ ಮಾಡುವ ಭಾಸ್ಕರ್ ಎಂಬ ಸಾಮಾಜಿಕ ಕಾರ್ಯಕರ್ತರೊಬ್ಬರು, 'ವಿಎಸ್‌ಎಸ್‌ಎನ್ ಬ್ಯಾಂಕಿನಿಂದ ₹50 ಸಾವಿರ ಸಾಲ ಪಡೆದು ಕಟ್ಟಲು ಹೋದರೆ ಸಾಲ ನವೀಕರಣದ ಹೆಸರಿನಲ್ಲಿ ಬ್ಯಾಂಕ್ ಸಿಬ್ಬಂದಿ ₹1300 ಪಡೆಯುತ್ತಿದ್ದಾರೆ. ಫುಲ್ ದುಡ್ಡನ್ನು ಅವರು ಪಡೆದು ಮತ್ತೆ ಬಡ್ಡಿಗೆ ಅಂತ ಹಾಕ್ತಾ ಇದ್ದಾರೆ. ಇದರ ವಿರುದ್ಧ ಕ್ರಮ ಕೈಗೊಳ್ಳಿ' ಎಂದೂ ಮನವಿ ಮಾಡುತ್ತಾರೆ.

ಇದಕ್ಕೆ ಮಾಧುಸ್ವಾಮಿ ಅವರು, 'ಇವೆಲ್ಲವೂ ನನಗೆ ಗೊತ್ತಪ್ಪ. ನಿಮ್ಮೂರಲ್ಲಿ ಒಂದೇ ಅಲ್ಲ. ರಾಜ್ಯದ ಎಲ್ಲ ಕಡೆ ನಡೀತಾ ಇದೆ. ಸನ್ಮಾನ್ಯ ಸಚಿವ ಸೋಮಶೇಖರ್ ಅವರ ಗಮನಕ್ಕೂ ತಂದಿದ್ದೇವೆ. ಬಡ್ಡಿ ಹೊಡೆದುಕೊಂಡು ತಿಂತಾ ಇದ್ದಾರೆ. ಅಡಿಶನಲ್ ಸೆಸ್ ಅಂತ ಹಾಕ್ತಾ ಇದ್ದಾರೆ. ಬಡ್ಡಿ ವಸೂಲಿ ಮಾಡ್ತಿದ್ದಾರೆ ಎಂದೂ ಹೇಳಿದ್ದೇನೆ. ಕ್ರಮ ಜರುಗಿಸ್ತಾ ಇಲ್ಲ, ನಾವೇನು ಮಾಡಾಣ. ರೈತರಲ್ಲ, ನಾನೇ ಕಟ್ಟಿದ್ದೇನೋ ಮಾರಾಯ. ನಂತಾವ್ಲೇ ತಗಂಡ್ರಲ್ಲ' ಎಂದೂ ಅವರು ಹೇಳುತ್ತಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಬಿಜೆಪಿ ಸರ್ಕಾರದ ನಿಷ್ಕ್ರಿಯತೆ, ಸಚಿವರ ಅಸಾಮರ್ಥ್ಯ, ರೈತರಿಗೆ ಎಸಗುತ್ತಿರುವ ಅನ್ಯಾಯಗಳು ಮಾಧುಸ್ವಾಮಿಯವರಿಂದ ಬಯಲಾಗಿದೆ. ಈ ಸರ್ಕಾರದಲ್ಲಿ ನಡೆಯುತ್ತಿರುವುದು ಭ್ರಷ್ಟಾಚಾರದ ಮ್ಯಾನೇಜ್ ಮಾತ್ರ' ಎಂದು ಕುಟುಕಿದೆ.

'ಇನ್ನೆಂಟು ತಿಂಗಳು ಅಂತ ತಳ್ತಾ ಇದೀವಿ ಅಷ್ಟೇ' ಎಂಬುದು ಸಚಿವ ಮಾಧುಸ್ವಾಮಿಯವರ ಅಸಹಾಯಕತೆಯೋ, ತಮ್ಮದೇ ಸರ್ಕಾರದ ವಿರುದ್ಧದ ಆರೋಪವೋ' ಎಂದು ಪ್ರಶ್ನಿಸಿರುವ ಕಾಂಗ್ರೆಸ್, 'ರೈತರಿಗೆ ಅಷ್ಟೇ ಅಲ್ಲ, ಸ್ವತಃ ಕಾನೂನು ಸಚಿವರಿಗೆ ಸಹಕಾರಿ ಬ್ಯಾಂಕುಗಳಲ್ಲಿ ವಂಚನೆಯಾಗುತ್ತಿರುವುದು ಸರ್ಕಾರದ ದುರಾಡಳಿತಕ್ಕೆ ಹಿಡಿದ ಕನ್ನಡಿ' ಎಂದು ವ್ಯಂಗ್ಯವಾಡಿದೆ.

ರಶ್ದಿ ಸ್ಥಿತಿ ಗಂಭೀರ: ಒಂದು ಕಣ್ಣಿನ ದೃಷ್ಟಿ ಕಳೆದುಕೊಳ್ಳುವ ಅಪಾಯ



ನ್ಯೂಯಾರ್ಕ್ (ಎಎಫ್‌ಪಿ): ಖ್ಯಾತ ಲೇಖಕ ಸಲ್ಮಾನ್ ರಶ್ದಿ (75) ಅವರ ಸ್ಥಿತಿ ಗಂಭೀರವಾಗಿಯೇ ಇದೆ. ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿದೆ ಮತ್ತು ಅವರು ಒಂದು ಕಣ್ಣಿನ ದೃಷ್ಟಿ ಕಳೆದುಕೊಳ್ಳಬಹುದು ಎಂದು ಹೇಳಲಾಗಿದೆ.

ನ್ಯೂಯಾರ್ಕ್ ಸಮೀಪದ ಷಟೌಕ್ವಾ ಎಂಬಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಅಪರಿಚಿತನೊಬ್ಬ ಶುಕ್ರವಾರ ಇರಿದಿದ್ದ. ಅವರು ಬರೆದ 'ಸಟಾನಿಕ್ ವರ್ಸಸ್' ಎಂಬ ಕಾದಂಬರಿಯಲ್ಲಿ ಇಸ್ಲಾಂ ಧರ್ಮಕ್ಕೆ ಅಪಮಾನವಾಗಿದೆ ಎಂದು ಆರೋಪಿಸಿ ಅವರ ಹತ್ಯೆಗೆ ಇರಾನ್ 1989ರಲ್ಲಿ ಫತ್ವಾ ಹೊರಡಿಸಿತ್ತು.

ರಶ್ದಿ ಅವರ ತೋಳಿನ ನರಗಳು, ಪಿತ್ತಜನಕಾಂಗ ಹಾನಿಗೊಂಡಿವೆ. ಅವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ ಎಂದು ಅವರ ಏಜೆಂಟ್ ಆ್ಯಂಡ್ರ್ಯೂ ವೈಲಿ ತಿಳಿಸಿದ್ದಾರೆ.

ರಶ್ದಿ ಅವರನ್ನು ಇರಿದ ವ್ಯಕ್ತಿಯನ್ನು ಹಾದಿ ಮಟರ್ (24) ಎಂದು ಗುರುತಿಸಲಾಗಿದೆ. ಈತ ನ್ಯೂಜೆರ್ಸಿಯ ಫೇರ್‌ಫೀಲ್ಡ್‌ನವನು. ಇರಿತಕ್ಕೆ ಕಾರಣ ಏನು ಎಂದು ತಿಳಿದು ಬಂದಿಲ್ಲ. ಆತನ ಮೇಲೆ ಕೊಲೆಯತ್ನ ಮತ್ತು ಹಲ್ಲೆ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

1981ರಲ್ಲಿ ಪ್ರಕಟವಾದ 'ಮಿಡ್‌ನೈಟ್ಸ್ ಚಿಲ್ಡ್ರನ್' ಎಂಬ ಕಾದಂಬರಿಯ ಮೂಲಕ ರಶ್ದಿ ಪ್ರಸಿದ್ಧಿಗೆ ಬಂದರು. ಈ ಕೃತಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಿತ್ತು. ಸ್ವಾತಂತ್ರ್ಯೋತ್ತರ ಭಾರತದ ಕತೆಯನ್ನು ಈ ಕಾದಂಬರಿ ಹೊಂದಿದೆ.

ಮುಂಬೈಯಲ್ಲಿ 1947ರಲ್ಲಿ ಜನಿಸಿದ ರಶ್ದಿ, ಬ್ರಿಟನ್‌ಗೆ ತೆರಳಿ ವಿದ್ಯಾಭ್ಯಾಸವನ್ನು ಅಲ್ಲಿಯೇ ಪಡೆದರು. ವಿದ್ಯಾಭ್ಯಾಸದ ನಂತರ ಅವರು ಅಲ್ಲಿಯೇ ನೆಲೆಸಿದ್ದರು.

ಸಾವರಿನ್ ಸಕ್ಕರೆ ಕಾರ್ಖಾನೆ ವ್ಯಾಜ್ಯ

ನ್ಯಾಯಾಂಗ ನಿಂದನೆ: ಎಂ.ಡಿ ಸೇರಿ ಐವರು ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುಕೋಟಿ ಬ್ಯಾಂಕ್ ಸಾಲಕ್ಕೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ಹೈಕೋರ್ಟ್ ಆದೇಶದ ಅನುಸಾರ ಸಾಲದ ಮೊತ್ತದಲ್ಲಿನ ಭಾಗಶಃ ಮೊತ್ತ ₹ 25 ಕೋಟಿ ಭರ್ತಿ ಮಾಡದೆ ಕೋರ್ಟ್ ಆದೇಶ ಉಲ್ಲಂಘಿಸಿದ ಆರೋಪದಡಿ ಬಾಗಲಕೋಟೆ ಜಿಲ್ಲೆ ತೇರದಾಳದ ಸಾವರಿನ್ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ನಾಲ್ವರು ನಿರ್ದೇಶಕರನ್ನು ಹೈಕೋರ್ಟ್ ಜೈಲಿಗಟ್ಟಿದೆ.

ಕರ್ನಾಟಕ ರಾಜ್ಯ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕ್ ದಾಖಲಿಸಿದ್ದ ಸಿವಿಲ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆರೋಪಿಗಳಾದ ಮೆಸರ್ಸ್ ಸಾವರಿನ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಆದ ಶಿವಕುಮಾರ್ ಸಂಗಪ್ಪ ಮಲಘಾಣ, ನಿರ್ದೇಶಕರಾದ ಮಲ್ಲನಗೌಡ ಮಾಲಕಿ, ಬಿ.ಎನ್. ಅರಕೇರಿ, ಗುರಪ್ಪ ರೆಡ್ಡಿ ಮತ್ತು ನಿಂಗಪ್ಪ ತಿಮ್ಮಪ್ಪ ಹುಗ್ಗಿ ಅವರಿಗೆ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರಿದ್ದ ಧಾರವಾಡ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ಬಂಧಿತರನ್ನು ಇದೇ 12ರ ಸಂಜೆ ಧಾರವಾಡ ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದ್ದು, ಇವರಲ್ಲಿ ಇಬ್ಬರು ಹಿರಿಯ ರಾಜಕೀಯ ನಾಯಕರ ನಿಕಟವರ್ತಿಗಳು ಎಂದು ತಿಳಿದು ಬಂದಿದೆ.

ಕಾರ್ಖಾನೆ ಪಡೆದಿದ್ದ ಸಾಲದ ಮೊತ್ತ 2019ರಲ್ಲಿ ₹ 316.46 ಕೋಟಿಗೆ ತಲುಪಿತ್ತು. ಮರುಪಾವತಿ ವಿಳಂಬವಾದ ಕಾರಣ ವಿವಿಧ ಹಂತಗಳಲ್ಲಿ ಕಾನೂನು ಹೋರಾಟ ಎದುರಿಸುತ್ತಿತ್ತು. ಮೇಲ್ಮನವಿ ವಿಚಾರಣೆ ವೇಳೆ ₹ 25 ಕೋಟಿಯನ್ನು ಪಾವತಿಸುವುದಾಗಿ ಪ್ರತಿವಾದಿಗಳು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದರು. ಆದರೆ, ನಯಾ ಪೈಸೆಯನ್ನೂ ಪಾವತಿಸಿರಲಿಲ್ಲ. ಹೀಗಾಗಿ, ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಬ್ಯಾಂಕ್ ದಾಖಲಿಸಿತ್ತು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಚನ್ನಡಲು ಸಂತ್ರಸ್ತರಿಂದ ಮನೆಯ ಅಡಿಪಾಯದಲ್ಲಿ ರಾಷ್ಟ್ರಧ್ವಜ ಹಾರಾಟ 5
ಟ್ರಂಪ್ ರೆಸಾರ್ಟ್‌ನಿಂದ ದಾಖಲೆ ವಶ: ರಾಷ್ಟ್ರೀಯ ಭದ್ರತೆ ಹೆಚ್ಚಿದ ಕಳವಳ 6

ಉಪನ್ಯಾಸ ಕಾರ್ಯಕ್ರಮ: ವಿಮರ್ಶಕ ರಹಮತ್ ತರೀಕೆರೆ ಅಭಿಮತ

‘ಪ್ರಜಾಪ್ರಭುತ್ವದ ಉಳಿವಿಗೆ ಬಹುತ್ವ ಆಧಾರ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನ್ಯಾಷನಲ್ ಕಾಲೇಜಿನಲ್ಲಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ
- ‘ಬಹುತ್ವ ಮತ್ತು ವೈವಿಧ್ಯ ಎರಡೂ ಒಂದೇ ಅಲ್ಲ’
- ಆರ್ಥಿಕತೆಯಲ್ಲಿಯೂ ಬಹುತ್ವವನ್ನು ಕಾಣಬಹುದು: ತರೀಕೆರೆ


ರಹಮತ್ ತರೀಕೆರೆ

ಬೆಂಗಳೂರು: ‘ಆಹಾರ ಪದ್ಧತಿ, ಸಂಸ್ಕೃತಿ, ಉಡುಗೆ, ಭಾಷೆ ಸೇರಿ ಎಲ್ಲೆಡೆ ಭಾರತದಲ್ಲಿ ಬಹುತ್ವವಿದೆ. ಈ ಬಹುತ್ವವನ್ನು ಕಾಪಾಡಿಕೊಂಡರೆ ಮಾತ್ರ ದೇಶದ ಪ್ರಜಾಪ್ರಭತ್ವವೂ ಭದ್ರವಾಗಿ ಉಳಿಯಲಿದೆ’ ಎಂದು ವಿಮರ್ಶಕ ರಹಮತ್ ತರೀಕೆರೆ ತಿಳಿಸಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು ನಗರದಲ್ಲಿ ಶನಿವಾರ ಆಯೋಜಿಸಿದ್ದ ಸರಣಿ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ‘ಕನ್ನಡ ಸಾಹಿತ್ಯ ಮತ್ತು ಬಹುತ್ವ ಪರಿಕಲ್ಪನೆ’ ವಿಷಯದ ಬಗ್ಗೆ ಮಾತನಾಡಿದರು.

‘ಭಾರತದ ಸೌಂದರ್ಯ ಬಹುತ್ವದಲ್ಲಿ ಅಡಗಿದೆ. ಬಹುತ್ವವನ್ನು ಸಕಾರಾತ್ಮಕ ಮತ್ತು ನಕಾರಾತ್ಮಕವಾಗಿ ದೇಶದಲ್ಲಿ ಬಳಸಲಾಗುತ್ತದೆ. ಬಹುತ್ವ ಮತ್ತು ವೈವಿಧ್ಯ ಎರಡೂ ಒಂದೇ ಅಲ್ಲ. ವೈವಿಧ್ಯ ಯಾಂತ್ರಿಕವಾದರೆ, ಬಹುತ್ವ ಜೈವಿಕ ಸಂಬಂಧ ಹೊಂದಿರುತ್ತದೆ. ಸಂಗೀತ, ಸಾಹಿತ್ಯ, ಚಲನಚಿತ್ರವೂ ಬಹುತ್ವದಿಂದ ಹೊಸ ಹುಟ್ಟನ್ನು ಪಡೆದಿವೆ’ ಎಂದು ಹೇಳಿದರು.

‘ಬಹುತ್ವವನ್ನು ಮಾನವ ಸಂಬಂಧದ ಜತೆಗೆ ಭಾಷಿಕ ಹಾಗೂ ಧಾರ್ಮಿಕ ಸಂಬಂಧಗಳಲ್ಲಿಯೂ ನೋಡಬೇಕು. ಆದರೆ, ಧರ್ಮಗಳ ನಡುವೆ ಅರ್ಥಪೂರ್ಣ ಸಂವಾದ ನಡೆಯದಿರುವುದು ವಿಪರ್ಯಾಸ. ಬಹುತ್ವವನ್ನು ಪ್ರಯೋಗ ಮಾಡಿದ ಎಲ್ಲ ರಾಜಮನೆತನ, ಕೃತಿಗಳನ್ನು ಏಕರೂಪವಾಗಿ ನೋಡುವುದು ಶಾಪ’ ಎಂದು ಬೇಸರ ವ್ಯಕ್ತಪಡಿಸಿದರು.

‘ಆರ್ಥಿಕತೆಯಲ್ಲಿಯೂ ಬಹುತ್ವವನ್ನು ಕಾಣಬಹುದು. ಪಂಕ್ಚರ್ ಹಾಕುವವರನ್ನು ಸಂಸದರೊಬ್ಬರು ತುಚ್ಛೀಕರಿಸಿ ಮಾತನಾಡಿದರು. ದೇಶದ ಆರ್ಥಿಕತೆ ಎಲ್ಲ ಬಗೆಯ ಉತ್ಪನ್ನ, ಶ್ರಮಗಳನ್ನು ಅವಲಂಬಿಸಿದೆ ಎನ್ನುವುದನ್ನು ಅರಿತುಕೊಳ್ಳಬೇಕು. ಬಹುತ್ವವು ದುಡಿಮೆಗೂ ಸಂಬಂಧಿಸಿದೆ. ವಾಸ್ತವದಲ್ಲಿ ಬಹುತ್ವವಿದ್ದರೂ ಅದನ್ನು ಏಕರೂಪವಾಗಿ ಬಳಸಲಾಗುತ್ತಿದೆ’ ಎಂದು ಹೇಳಿದರು.

‘ಕನ್ನಡ ಸಾಹಿತ್ಯ ಬಹುತ್ವದ ಸಾರ ರೂಪ. ದೇಶದ ದೊಡ್ಡ ಗಾಯಕರು, ನಟರು ಒಂದೇ ಭಾಷೆಗೆ ಸೀಮಿತವಾಗಿಲ್ಲ. ಸಾಹಿತಿಗಳು ಬಹುಪ್ರಕಾರಗಳಲ್ಲಿ ಬರೆದಿದ್ದಾರೆ. ದೇಶದ ಸಾಮಾನ್ಯ ರಚನಾ ಕ್ರಮದಲ್ಲಿಯೇ ಬಹುತ್ವದ ವಿವಿಧ ಆಯಾಮಗಳಿವೆ. ಪಠ್ಯದಲ್ಲಿಯೂ ಬಹುತ್ವ ಕಾಣಬಹುದು. ‘ಶಾಕುಂತಲಾ’, ‘ವಡ್ಡಾರಾಧನೆ’ ಸೇರಿ ವಿವಿಧ ಪಠ್ಯಗಳು ಎರಡು ಮೂರು ಭಾಷೆಗಳಲ್ಲಿವೆ. ಆದರೆ, ಎ.ಕೆ. ರಾಮಾನುಜಮ್ ಅವರ ‘300 ರಾಮಾಯಣ’ವನ್ನು ಪಠ್ಯದಿಂದ ಕೈಬಿಟ್ಟಿರುವುದು ಬಹುತ್ವ ನಿರಾಕರಿಸುತ್ತಿರುವುದಕ್ಕೆ ಸಾಕ್ಷಿ’ ಎಂದರು.

ಸ್ಪರ್ಶ್ ಆಸ್ಪತ್ರೆಯಿಂದ ಅಂಗಾಂಗ ದಾನ ಜಾಗೃತಿ

ಅಂಗಾಂಗ ವೈಫಲ್ಯದಿಂದ ರೋಗಿಗಳ ಸ್ಥಿತಿ ಗಂಭೀರ: ಸಚಿವ ಮುನಿರತ್ನ

ಪ್ರಜಾವಾಣಿ ವಾರ್ತೆ


ಸ್ಪರ್ಶ್ ಆಸ್ಪತ್ರೆ ಸಿಬ್ಬಂದಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಿದರು

ಬೆಂಗಳೂರು: ‘ಅಂಗಾಂಗ ದಾನಿಗಳ ಕೊರತೆಯಿಂದಾಗಿ ಹೃದಯ ಮತ್ತು ಶ್ವಾಸಕೋಶದ ಕಸಿಗಾಗಿ ಕಾಯುತ್ತಿರುವವರ ಸ್ಥಿತಿ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಕಳವಳ ವ್ಯಕ್ತಪಡಿಸಿದರು.

ವಿಶ್ವ ಅಂಗಾಂಗ ದಿನದ ಪ್ರಯುಕ್ತ ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ವಾಕಥಾನ್‌ಗೆ ಚಾಲನೆ ನೀಡಿ, ಮಾತನಾಡಿದರು.

‘ಸಮಯಕ್ಕೆ ಸರಿಯಾಗಿ ಅಂಗಾಂಗ ಸಿಗದೆ ದೇಶದಲ್ಲಿ ವರ್ಷಕ್ಕೆ 5 ಲಕ್ಷ ಮಂದಿ ಮರಣ ಹೊಂದುತ್ತಿದ್ದಾರೆ. ಯಕೃತ್ತಿನ ಕಸಿ ಅಗತ್ಯವಿರುವ 30 ಸಾವಿರ ರೋಗಿಗಳಲ್ಲಿ 1,500 ಮಂದಿಗೆ ಮಾತ್ರ ಅಂಗಾಂಗ ದೊರೆಯುತ್ತಿದೆ. ಮೂಢನಂಬಿಕೆ ಸೇರಿ ವಿವಿಧ ಕಾರಣಗಳಿಂದ ಬಹುತೇಕರು ಅಂಗಾಂಗ ದಾನಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಅಂಗಾಂಗ ದಾನದ ಮಹತ್ವ ಸಾರಿ, ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಬೇಕು’ ಎಂದು ಹೇಳಿದರು.

ಸ್ಪರ್ಶ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ.ಶರಣ ಶಿವರಾಜ್ ಪಾಟೀಲ, ‘ಅಂಗಾಂಗ ದಾನದ ಬಗ್ಗೆ ಜನಜಾಗೃತಿ ಮೂಡಿಸಿ, ದಾನಿಗಳಾಗಿ ಮುಂದೆ ಬರುವಂತೆ ಪ್ರೋತ್ಸಾಹಿಸುವ ತುರ್ತು ಅಗತ್ಯವಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ’ ಎಂದು ತಿಳಿಸಿದರು.

ಅಂಗಾಂಗ ದಾನಿಗಳ ಕುಟುಂಬಗಳಿಗೆ ದಾನಿಗಳ ಸವಲತ್ತು ಕಾರ್ಡ್‌ಗಳನ್ನು ಆಸ್ಪತ್ರೆ ಹಸ್ತಾಂತರಿಸಿತು. ಈ ಕಾರ್ಡ್ ಜೀವಮಾನ ಮಾನ್ಯತೆ ಹೊಂದಿರಲಿದ್ದು, ಸ್ಪರ್ಶ್ ಆಸ್ಪತ್ರೆಯ ಎಲ್ಲ ಘಟಕಗಳಲ್ಲಿ ವಿವಿಧ ವೈದ್ಯಕೀಯ ಸೌಲಭ್ಯ ಳನ್ನು ಪಡೆಯಬಹುದಾಗಿದೆ.

ರಿಲಯನ್ಸ್ ಡಿಜಿಟಲ್‌ನಲ್ಲಿ ಎಲೆಕ್ಟ್ರಾನಿಕ್ಸ್ ಸೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಕಂಪನಿಯು ಭಾರತದ ಅತಿದೊಡ್ಡ ಎಲೆಕ್ಟ್ರಾನಿಕ್ಸ್ ಸೇಲ್ ಆರಂಭವಾಗಿದ್ದು, ವಿವಿಧ ವಿಭಾಗಗಳ ಮೇಲೆ ವಿಶೇಷ ಕೊಡುಗೆಗಳನ್ನು ನೀಡಿದೆ.

ಮಂಗಳವಾರದವರೆಗೆ ಪ್ರಮುಖ ಬ್ಯಾಂಕ್‌ಗಳ ಕಾರ್ಡ್‌ಗಳ ಮೇಲೆ ಶೇ 10ರವರೆಗೆ ರಿಯಾಯಿತಿ ಪಡೆಯಬಹುದು. ಶೇ 10 ಇನ್‌ಸ್ಟಂಟ್ ಡಿಸ್ಕೌಂಟ್ ವೋಚರ್ ಸಹ ಪಡೆದು, ಮುಂದಿನ ಖರೀದಿಯಲ್ಲಿ ರಿಡೀಮ್ ಮಾಡಿಕೊಳ್ಳಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಫೋನ್, ಲ್ಯಾಪ್‌ಟಾಪ್, ಟಿವಿ, ಗೃಹೋಪಯೋಗಿ ಹಾಗೂ ಇತರೆ ಸಾಮಗ್ರಿಗಳನ್ನು ಆಕರ್ಷಕ ಬೆಲೆಯಲ್ಲಿ ಖರೀದಿಸಬಹುದು ಎಂದು ಹೇಳಿದೆ. ಎಲ್ಲಾ ಕೊಡುಗೆಗಳು ಮತ್ತು ಬೆಲೆಗಳು ನಿಯಮ ಮತ್ತು ಷರತ್ತುಗಳಿಗೆ ಅನ್ವಯಿಸುತ್ತವೆ ಎಂದು ತಿಳಿಸಿದೆ.

ಇಂದು ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ಹಾಲೇನಹಳ್ಳಿ ಗ್ರಾಮದ ಆತ್ಮ ರಾಮಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಭಾನುವಾರ ರಾತ್ರಿ 8.30ಕ್ಕೆ ಆತ್ಮರಾಮ ಸ್ವಾಮಿ ದೇವಾಲಯದ ಎದುರು ‘ಶ್ರೀಕೃಷ್ಣ ಸಂಧಾನ’ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಿಯಾಂಕ್ ಹೇಳಿಕೆ: ಬಿಜೆಪಿ ಮಹಿಳಾ ಮೋರ್ಚಾ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಕುರಿತು ಕೀಳು ಅಭಿರುಚಿಯ ಹೇಳಿಕೆ ನೀಡಿರುವ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ದೇಶದ ಮಹಿಳೆಯರ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ ಆಗ್ರಹಿಸಿದ್ದಾರೆ.

ಅಂಬೇಡ್ಕರ್, ಗಾಂಧೀಜಿ ಅವರ ತತ್ವ, ಸಿದ್ಧಾಂತ ಹೇಳುವ ಅವರು, ‘ಸರ್ಕಾರಿ ನೌಕರಿ ಪಡೆಯಲು ಮಹಿಳೆಯರು ಮಂಚ ಏರಬೇಕು, ಯುವಕರು ಲಂಚ ಕೊಡಬೇಕು’ ಎನ್ನುವ ಮೂಲಕ ಕಾಂಗ್ರೆಸ್‌ನ ಕುಸಂಸ್ಕೃತಿ ಅನಾವರಣ ಮಾಡಿದ್ದಾರೆ’ ಎಂದು ಕಿಡಿ ಕಾರಿದ್ದಾರೆ.

‘ಅವರ ಹೇಳಿಕೆ ಉದ್ಯೋಗಸ್ಥ ಮಹಿಳಾ ಕುಲಕ್ಕೆ ಮಾಡಿದ ಅವಮಾನ. ಸ್ವತಃ ಭ್ರಷ್ಟಾಚಾರ ಮತ್ತು ಕುಸಂಸ್ಕೃತಿಯ ಪದ ಬಳಸಿ ತಮ್ಮನ್ನು ಚಾಲ್ತಿಯಲ್ಲಿಡಲು ಬಯಸುತ್ತಿದ್ದಾರೆ. ಅಸಭ್ಯ ಪದ ಬಳಸಿದ ಅವರ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಅವರು ದ್ರೌಪತಿ ಮುರ್ಮು ಅವರನ್ನು ‘ರಾಷ್ಟ್ರಪತ್ನಿ’ ಎಂದು ಸಂಬೋಧಿಸಿ ಅವಮಾನ ಮಾಡಿದ್ದರು. ಈಗ ಪ್ರಿಯಾಂಕ್ ಖರ್ಗೆ ಸರದಿ. ತಕ್ಷಣ ಮಹಿಳೆಯರ ಕ್ಷಮೆಯಾಚಿಸದಿದ್ದರೆ, ಕಾಂಗ್ರೆಸ್ ಕ್ರಮ ಕೈಗೊಳ್ಳದೇ ಹೋದರೆ, ಮಹಿಳಾ ಮೋರ್ಚಾ ಹೋರಾಟ ಹಮ್ಮಿಕೊಳ್ಳಲಿದೆ. ಜನರೇ ಪಾಠ ಕಲಿಸಲಿದ್ದಾರೆ’ ಎಂದು ಎಚ್ಚರಿಸಿದರು.



ಕೈಪಿಡಿ ಬಿಡುಗಡೆ

ನಗರದ ಶಂಕರಪುರದಲ್ಲಿರುವ ಶಂಕರ ಕ್ಯಾನ್ಸರ್ ಆಸ್ಪತ್ರೆಯ ದಶಮಾನೋತ್ಸವದ ಪ್ರಯುಕ್ತ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ (ಎಡದಿಂದ ಮೂರನೆಯವರು) ಸಂಸ್ಥೆಯ ಸಾಧನೆ ಪರಿಚಯಿಸುವ ಕೈಪಿಡಿ ಬಿಡುಗಡೆ ಮಾಡಿದರು. ಸುಶ್ಮಿತಾ ಬಾಗ್‌ಚಿ, ಸುಬ್ರತೋ ಬಾಗ್‌ಚಿ ಹಾಗೂ ಸಂಸ್ಥೆಯ ಸಂಸ್ಥಾಪಕ ಟ್ರಸ್ಟಿ ಡಾ.ಬಿ.ಎಸ್. ಶ್ರೀನಾಥ ಇದ್ದಾರೆ

ದುರಾಡಳಿತದ ವಿರುದ್ಧ ಕಾಂಗ್ರೆಸ್ ಹೋರಾಟ: ಡಿ.ಕೆ.ಮೋಹನ್

ಕೆ.ಆರ್.ಪುರ: ಇಲ್ಲಿನ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ, ದುರಾಡಳಿತ ಖಂಡಿಸಿ ಈ ತಿಂಗಳ 19ರಂದು ಕಾಂಗ್ರೆಸ್‌ನಿಂದ ಹೋರಾಟಕ್ಕೆ ಚಾಲನೆ ನೀಡಲಾಗುವುದು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್ ತಿಳಿಸಿದರು.

ಕೆ.ಆರ್.ಪುರ ಕ್ಷೇತ್ರದಲ್ಲಿ ಶೇ40ಕ್ಕೂ ಹೆಚ್ಚು ಕಮಿಷನ್ ಪಡೆದು ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ಶೇ 30ರಷ್ಟು ಮಾತ್ರ ಅಭಿವೃದ್ಧಿ ಕಾಮಗಾರಿಗೆ ಹಣ ಬಳಕೆ ಆಗುತ್ತಿದೆ. ಶಾಸಕ ಬೈರತಿ ಬಸವರಾಜ ಅವರು ಕಳೆದ ಎಂಟು ವರ್ಷದಲ್ಲಿ ಸುಮಾರು ₹ 3,000 ಕೋಟಿ ಅನುದಾನ ತಂದಿದ್ದರೂ ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಕೆ.ಆರ್.ಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳಿಲ್ಲದೆ ಮೂಲಭೂತ ಸೌಕರ್ಯಗಳು ಇಲ್ಲದೆ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಆಂಜಿನಪ್ಪ, ಅರುಳಪ್ಪ, ಗಗನ್ ಯಾದವ್, ಬೊಸ್ಕೊ, ಕಲಾ ಪ್ರಕಾಶ್, ರತ್ನಮ್ಮ ಇದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ









ಕಾಂಗ್ರೆಸ್‌ನಿಂದ 'ಸ್ವಾತಂತ್ರ್ಯ ನಡಿಗೆ'

ಪ್ರಜಾವಾಣಿ ವಾರ್ತೆ



ವೀರಪ್ಪ ಮೊಯಿಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಕಾಂಗ್ರೆಸ್ ಮುಖಂಡರಾದ ಎಂ.ಎನ್‌.ಗೋಪಾಲಕೃಷ್ಣ, ಕೇಶವ ರಾಜಣ್ಣ, ಯಲಹಂಕ ಗ್ರಾಮಾಂತರ ಕಾಂಗ್ರೆಸ್ ಘಟಕದ ಅಧ್ಯಕ್ಷ ಎನ್‌.ಎಂ. ಶ್ರೀನಿವಾಸ್, ಲಾವಣ್ಯ ನರಸಿಂಹಮೂರ್ತಿ, ಮೂರ್ತಿ, ಮಂಜುನಾಥ್ ಅದ್ದೆ, ಶಾರದ, ನಾಗವೇಣಿ, ಎನ್‌. ತಿಮ್ಮರಾಜು ಇತರರು ಇದ್ದರು

ಯಲಹಂಕ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಯಲಹಂಕ ಗ್ರಾಮಾಂತರ ಕಾಂಗ್ರೆಸ್ ಘಟಕದ ವತಿಯಿಂದ 'ಸ್ವಾತಂತ್ರ್ಯ ನಡಿಗೆ' ಪಾದಯಾತ್ರೆಯನ್ನು ರಾಜಾನುಕುಂಟೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ರಾಷ್ಟ್ರಧ್ವಜಗಳನ್ನು ಹಿಡಿದು, ರಾಜಾನುಕುಂಟೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಈ ವೇಳೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ, 'ಸ್ವಾತಂತ್ರ್ಯಕ್ಕಾಗಿ ಹೋರಾಡಿ, ತ್ಯಾಗ-ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸಿ, ಗೌರವಿಸುವ ಸಲುವಾಗಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶದೆಲ್ಲೆಡೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಶಾಸಕ ಕೃಷ್ಣಬೈರೇಗೌಡ, ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಯಲಹಂಕ ಕ್ಷೇತ್ರದ ಚುನಾವಣಾ ಉಸ್ತುವಾರಿ ಮಿಲಿಂದ್ ಧರ್ಮಸೇನ, ಕಾಂಗ್ರೆಸ್ ಮುಖಂಡರಾದ ಎಂ.ಎನ್.ಗೋಪಾಲ ಕೃಷ್ಣ, ಕೇಶವ ರಾಜಣ್ಣ, ಯಲಹಂಕ, ಗ್ರಾಮಾಂತರ ಹಾಗೂ ಹೆಸರಘಟ್ಟ ಘಟಕಗಳ ಅಧ್ಯಕ್ಷರಾದ ವೈ.ಆರ್.ಶ್ರೀಧರ್, ಎನ್. ಎಂ.ಶ್ರೀನಿವಾಸ್, ನಾಗರಾಜಗೌಡ, ಮುಖಂಡರಾದ ಎಸ್.ಬಿ.ಬಾಷಾ, ಮಂಜುನಾಥ್ ಅದ್ದೆ, ಶಾರದ, ಲಾವಣ್ಯ ನರಸಿಂಹಮೂರ್ತಿ ಇದ್ದರು.

ಕಸದ ಬುಟ್ಟಿಯಲ್ಲಿ ರಾಷ್ಟ್ರಧ್ವಜ: ಆಕ್ರೋಶ

ಕೊರಟಗೆರೆ: ತಾಲ್ಲೂಕಿನ ಬುಕ್ಕಪಟ್ಟಣ ಗ್ರಾಮ ಪಂಚಾಯಿತಿ ಕಟ್ಟಡದ ಮೇಲೆ ಕಸದ ಬುಟ್ಟಿಯಲ್ಲಿ ರಾಷ್ಟ್ರಧ್ವಜ ಹಾರಿಸಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ಹರ್ ಘರ್ ತಿರಂಗಾ' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರ ಪ್ರಯುಕ್ತ ಗ್ರಾಮ ಪಂಚಾಯಿತಿ ಕಟ್ಟಡದ ಮೇಲೆ ರಾಷ್ಟ್ರ ಧ್ವಜ ಹಾರಿಸುವಾಗ ಕಸದ ಬುಟ್ಟಿ ಬಳಸಿದ್ದು, ಸದ್ಯ ಈ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.



ಗ್ರಾಮ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನೋಟಿಸ್ ಜಾರಿ: ಘಟನೆಯ ಕುರಿತು ಸಮಜಾಯಿಷಿ ನೀಡುವಂತೆ ಗ್ರಾ.ಪಂ ನೀರುಗಂಟಿ ನವೀನ್‌ಕುಮಾರ್‌ಗೆ ಪಿಡಿಒ ನೋಟಿಸ್ ಜಾರಿ ಮಾಡಿದ್ದಾರೆ.

ಪಾಕ್ ಧ್ವಜ ಹಾರಿಸಿದ ಯುವಕನ ಬಂಧನ

ಕುಶಿನಗರ, ಉತ್ತರ ಪ್ರದೇಶ (ಪಿಟಿಐ): ಪಾಕಿಸ್ತಾನದ ರಾಷ್ಟ್ರಧ್ವಜವನ್ನು ತನ್ನ ನಿವಾಸದಲ್ಲಿ ಹಾರಿಸಿದ ಆರೋಪದ ಮೇಲೆ ತರಿಯಾ ಸುಜನ್ ಠಾಣೆ ಪೊಲೀಸರು ಸಲ್ಮಾನ್ (21) ಎಂಬ ಯುವಕನನ್ನು ಬಂಧಿಸಲಾಗಿದೆ ಎಂದು ಹೆಚ್ಚುವರಿ ಎಸ್ಪಿ ರಿತೇಶ್ ಕುಮಾರ್ ಸಿಂಗ್ ಶನಿವಾರ ತಿಳಿಸಿದರು.



ರಾಷ್ಟ್ರಧ್ವಜ ವಿತರಣೆ

ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ನಗರದ ದೇವರಾಜ ಅರಸು ಬಡಾವಣೆಯ ಮಸ್ಜಿದ್ ಏ ಮೊಹಮ್ಮದಿಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಕಾರ್ಯದರ್ಶಿ ಅಬ್ದುಲ್ ಘನಿ ತಾಹೀರ್ ನೇತೃತ್ವದಲ್ಲಿ ನಿವಾಸಿಗಳಿಗೆ ತ್ರಿವರ್ಣ ಧ್ವಜವನ್ನು ವಿತರಿಸಲಾಯಿತು. ಮೌಲಾನ ಬದ್ರುದ್ದೀನ್ ಸಾಬ್, ಗುಬ್ಬಿ ರಹಮತ್ ಉಲ್ಲಾ ಸಾಬ್, ನಬಿಖಾನ್ ಸಾಬ್, ಗಫಾರ್ ಸಾಬ್, ರಫೀಕ್ ಸಾಬ್ ಇದ್ದರು

'ಬೆಂಗಳೂರು– ಗಂಡಿಕೋಟಾ' ವಿಶೇಷ ಪ್ರವಾಸ ಪ್ಯಾಕೇಜ್'

ಬೆಂಗಳೂರು: ಕರ್ನಾಟಕದ ಪ್ರವಾಸಿಗರು ಆಂಧ್ರಪ್ರದೇಶದ ಐತಿಹಾಸಿಕ ಸ್ಥಳ ಗಂಡಿಕೋಟಾ ವೀಕ್ಷಣೆ ಮಾಡಲೆಂದು ಮೂರು ದಿನಗಳ 'ಬೆಂಗಳೂರು–ಗಂಡಿಕೋಟಾ' ವಿಶೇಷ ಪ್ರವಾಸ ಪ್ಯಾಕೇಜ್‌ನ್ನು ಆಂಧ್ರಪ್ರದೇಶ ಪ್ರವಾಸೋದ್ಯಮ ಇಲಾಖೆ ಪ್ರಕಟಿಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದ ಇಲಾಖೆಯ ವಲಯ ಪ್ರಬಂಧಕ ಗಿರಿಧರ್, 'ಬೆಂಗಳೂರಿನಿಂದ ಗಂಡಿಕೋಟಾ ಕೋಟೆಗೆ ಪ್ರವಾಸಿಗರನ್ನು ಹೊತ್ತ ಬಸ್ ಶೀಘ್ರ ತೆರಳಲಿದೆ. ಒಂದು ರಾತ್ರಿ ಮತ್ತು ಎರಡು ಹಗಲಿನ ಪ್ಯಾಕೇಜ್ ಇದಾಗಿದೆ. ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಡಲಿರುವ ಬಸ್ ಸಂಜೆ 4.30ಕ್ಕೆ ಗಂಡಿಕೋಟಾ ತಲುಪಲಿದೆ. ವಯಸ್ಕರಿಗೆ ₹ 2,542 ಮತ್ತು ಮಕ್ಕಳಿಗೆ ₹ 2,034 ಪ್ರವಾಸ ದರ ನಿಗದಿಪಡಿಸಲಾಗಿದೆ' ಎಂದು ವಿವರಿಸಿದರು.

'ಐತಿಹಾಸಿಕ ಜುಮ್ಮಾ ಮಸೀದಿ, ಬೇಲಂ ಗುಹೆ, ಮಾಧವರಾಯ ದೇವಸ್ಥಾನ, ರಘುನಂದನ ಸ್ವಾಮಿ ದೇವಸ್ಥಾನ, ಮೈಲಾವರಂ ಅಣೆಕಟ್ಟು ಮುಂತಾದ ಸ್ಥಳಗಳನ್ನು ಈ ಪ್ರವಾಸ ಪ್ಯಾಕೇಜ್‌ನಲ್ಲಿ ವೀಕ್ಷಿಸಬಹುದು. ರಾತ್ರಿ ವೇಳೆಯಲ್ಲಿ ಗಂಡಿಕೋಟಾ ಕೋಟೆಯಲ್ಲಿ ಫೈರ್ ಕ್ಯಾಂಪ್ ಆಯೋಜಿಸಲಾಗುವುದು. ಆಸಕ್ತರು ಇಲಾಖೆಯ ಬೆಂಗಳೂರು ಕೇಂದ್ರ ಕಚೇರಿಯನ್ನು (080-41136372, 22385513) ಸಂಪರ್ಕಿಸಬಹುದು' ಎಂದು ಹೇಳಿದರು.

'ಆರಾಧನಾ ಯೋಜನೆ': ₹ 49.74 ಕೋಟಿ ಬಿಡುಗಡೆ

ಬೆಂಗಳೂರು: 'ಪರಿಶಿಷ್ಟ ಜಾತಿ, ಪಂಗಡ, ಲಂಬಾಣಿ ತಾಂಡಾ, ವಡ್ಡರ ಕೇರಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಗಳು ವಾಸವಿರುವ ಸ್ಥಳಗಳಲ್ಲಿನ ದೇವಾಲಯ, ಪೂಜಾ ಮಂದಿರ, ಪ್ರಾರ್ಥನಾ ಮಂದಿರಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಹೊಸ ನಿರ್ಮಾಣಗಳ ಯೋಜನೆಗೆ 'ಆರಾಧನಾ ಯೋಜನೆ'ಯಡಿ ಪ್ರಸಕ್ತ ಸಾಲಿನಲ್ಲಿ ₹ 49.74 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಮುಜರಾಯಿ ಸಚಿವರಾದ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡಗಳ ಉಪ ಯೋಜನೆಯಡಿ (ಎಸ್‌ಸಿಪಿ, ಟಿಎಸ್‌ಪಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆ ಆಧಾರದಲ್ಲಿ ವಿಧಾನಸಭಾ ಕ್ಷೇತ್ರವಾರು ಎಸ್‌ಸಿಪಿಯಲ್ಲಿ ₹ 19.38 ಕೋಟಿ ಟಿಎಸ್‌ಪಿಯಲ್ಲಿ ₹ 30.36 ಕೋಟಿ ಅನುದಾನವನ್ನು ಎಲ್ಲ 31 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

'ರಾಜ್ಯದ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಗೆ ಕಳೆದ 10 ವರ್ಷಗಳಲ್ಲಿ ಅತಿ ಹೆಚ್ಚು ಅನುದಾನವನ್ನು ಬೊಮ್ಮಾಯಿ ನೇತೃತ್ವದ ಸರ್ಕಾರ ಬಿಡುಗಡೆ ಮಾಡಿದೆ. ಎಸ್‌ಸಿಪಿ, ಟಿಎಸ್‌ಪಿ ಅಡಿಯಲ್ಲಿ ಆರಾಧನಾ ಯೋಜನೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಧಾರ್ಮಿಕ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದೂ ಅವರು ತಿಳಿಸಿದ್ದಾರೆ.

ಪಿ.ಸುಶೀಲಾ ಅವರಿಗೆ 'ಘಂಟಸಾಲ ಶತಜಯಂತಿ ಪುರಸ್ಕಾರ' ಪ್ರದಾನ

'ಭಾಷೆ ಮೀರಿದ ಗೌರವ ತಂದ ಸಂಗೀತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಗೀತ, ಗಾಯನವು ಕಲಾವಿದರಿಗೆ ಭಾಷೆ ಮೀರಿದ ಆಪ್ತತೆ ತಂದು ಕೊಡುತ್ತದೆ. ದಕ್ಷಿಣ ಭಾರತದ ಎಲ್ಲ ಭಾಷೆಯ ಜನರೂ ತಮ್ಮವಳೆಂದು ಸ್ವೀಕರಿಸಿದ್ದು ಅದಕ್ಕೆ ಸಾಕ್ಷಿ' ಎಂದು ಹೇಳುತ್ತಲೇ ಗಾಯಕಿ ಪಿ.ಸುಶೀಲಾ ಅವರು ಭಾವುಕರಾದರು.

ಮಲ್ಲೇಶ್ವರದ ತೆಲುಗು ವಿಜ್ಞಾನ ಸಮಿತಿ ಶನಿವಾರ ಆಯೋಜಿಸಿದ್ದ ಘಂಟಸಾಲ ವೆಂಕಟೇಶ್ವರರಾವ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ 'ಘಂಟಸಾಲ ಶತಜಯಂತಿ ಪುರಸ್ಕಾರ' ಸ್ವೀಕರಿಸಿ ಸುಶೀಲಾ ಅವರು ಮಾತನಾಡಿದರು.

'ತೆಲುಗಿನಲ್ಲಿ ಎನ್‌.ಟಿ.ರಾಮರಾವ್, ಕನ್ನಡದಲ್ಲಿ ರಾಜ್‌ಕುಮಾರ್ ಮೇರು ನಟರು. ಅವರ ಜತೆಗೆ ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವ ಇಂದಿಗೂ ಹಸಿರಾಗಿದೆ. 'ಎಲ್ಲೇ ಇರು ಹೇಗೆ ಇರು, ಎಂದೆಂದೂ ಮನದಲ್ಲಿ ನೀ ತುಂಬಿರು' ಹಾಡು ಇಂದಿಗೂ ಗುನುಗುತ್ತಿರುತ್ತೇನೆ. ಕನ್ನಡದ ಜನರು ತೆಲುಗರಷ್ಟೇ ಪ್ರೀತಿ ತೋರಿದ್ದಾರೆ. ಎರಡೂ ಸಹೋದರ ಭಾಷೆಗಳು ಎನ್ನುವುದು ಹೆಮ್ಮೆಯ ಸಂಗತಿ' ಎಂದು ಹೇಳಿದರು.

ಮನುಷ್ಯನ ಶರೀರ ಮಣ್ಣಾಗುತ್ತದೆ. ಮಾಡಿದ ಸಾಧನೆ ಶಾಶ್ವತವಾಗಿರುತ್ತದೆ. ಸಾಧನೆಗೆ ಸಂದ ಪ್ರಶಸ್ತಿಗಳಿಗಿಂತ ಜನರು ಇಂದಿಗೂ ತೋರುವ ಪ್ರೀತಿ, ವಿಶ್ವಾಸಗಳು ಇನ್ನಷ್ಟು ಜೀವಂತಿಕೆಯನ್ನು ತುಂಬುತ್ತವೆ ಎಂದು ಕೃತಜ್ಞತೆ ಸಲ್ಲಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಕನ್ನಡದಲ್ಲಿ ತಾವು ನಿರ್ಮಾಣ ಮಾಡಿದ ಎರಡು ಚಿತ್ರಗಳು ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆಯಲು ಚಿತ್ರದ ಸಂಗೀತ ಕಾರಣ. ಬಹುತೇಕ ಜನರು ಉತ್ತರದ ಗಾಯಕಿ ಲತಾ ಮಂಗೇಶ್ಕರ್ ಜತೆ ಸುಶೀಲ ಅವರನ್ನು ಹೋಲಿಸುತ್ತಾರೆ. ಆದರೆ, ಸುಶೀಲ ಅವರು ದಕ್ಷಿಣಕ್ಕಷ್ಟೆ ಸೀಮಿತವಾಗಿಲ್ಲ. ಅವರ ಸಂಗೀತದ ವಿಶೇಷತೆ, ಧ್ವನಿಯ ಏರಿಳಿತ ಭಾರತದ ಯಾವ ಗಾಯಕರಲ್ಲೂ ಇಲ್ಲ. ಉತ್ತರ ಕರ್ನಾಟಕದ ಭಾಷೆಯಲ್ಲೂ ಅದ್ಭುತವಾಗಿ ಹಾಡಿದ ಕಲಾವಿದೆ ಎಂದು ಬಣ್ಣಿಸಿದರು.

ಸಮಿತಿ ಅಧ್ಯಕ್ಷ ಎ.ರಾಧಾಕೃಷ್ಣರಾಜು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಗಂಗರಾಜು, ಪ್ರಧಾನ ಕಾರ್ಯದರ್ಶಿ ಲಕ್ಷ್ಮಿರೆಡ್ಡಿ ಉಪಸ್ಥಿತರಿದ್ದರು.



ತೆಲುಗು ವಿಜ್ಞಾನ ಸಮಿತಿ ಆಯೋಜಿಸಿದ್ದ ಘಂಟಸಾಲ ವೆಂಕಟೇಶ್ವರರಾವ್ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಗಾಯಕಿ ಪಿ. ಸುಶೀಲಾ ಅರವರಿಗೆ 'ಘಂಟಸಾಲ ಶತ ಜಯಂತಿ ಪುರಸ್ಕಾರ' ನೀಡಿ ಗೌರವಿಸಲಾಯಿತು. ತೆಲುಗು ವಿಜ್ಞಾನ ಸಮಿತಿ ಕಾರ್ಯದರ್ಶಿ ಲಕ್ಷ್ಮಿ ರೆಡ್ಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು, ಉಪಾಧ್ಯಕ್ಷ ಗಂಗರಾಜು ಇದ್ದರು —ಪ್ರಜಾವಾಣಿ ಚಿತ್ರ

17ರಿಂದ ಗುರು ಗೀತಾ ಪ್ರವಚನ

ಬೆಂಗಳೂರು: ಋಷಿಪೀಠ ಸತ್ಸಂಗ ಸಮಿತಿಯು ಇದೇ 17ರಿಂದ 23ರವರೆಗೆ ವಿದ್ವಾಂಸ ಸಾಮವೇದ ಷಣ್ಮುಖ ಶರ್ಮ ಅವರಿಂದ ತೆಲುಗಿನಲ್ಲಿ 'ಗುರು-ಭಕ್ತ-ಮುಕ್ತಿ' (ಗುರು ಗೀತಾ) ಪ್ರವಚನ ಯಜ್ಞವನ್ನು ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಯಕ್ರಮದ ಸಂಘಟಕ ರಾಧಾಕೃಷ್ಣ ಜಿ. ಶೇಷಪ್ಪ, 'ಏಳು ದಿನಗಳ ಪ್ರವಚನವು ಶಂಕರಪುರದಲ್ಲಿರುವ ಶೃಂಗೇರಿ ಶಂಕರಮಠದ ಭಾರತೀ ತೀರ್ಥ ಸಭಾ ಭವನದಲ್ಲಿ ನಡೆಯಲಿದೆ. ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, 6 ಗಂಟೆಯಿಂದ ಪ್ರವಚನ ನಡೆಯಲಿದೆ. ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷಗಳಿಂದ ಈ ಪ್ರವಚನ ನಡೆದಿರಲಿಲ್ಲ' ಎಂದು ತಿಳಿಸಿದರು.

'ಪ್ರವಚನಕ್ಕೆ ಪ್ರವೇಶ ಉಚಿತ ಇರುತ್ತದೆ. ಆನ್‌ಲೈನ್ ವೇದಿಕೆಗಳಲ್ಲಿಯೂ ನೇರಪ್ರಸಾರ ಇರುತ್ತದೆ. ಎಲ್ಲ ಭಾಷೆ, ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು' ಎಂದು ವಿವರಿಸಿದರು.

ಋಷಿಪೀಠ ಸತ್ಸಂಗ ಸಮಿತಿ ಕಾರ್ಯಕರ್ತರಾದ ವಿ.ಎ. ಶಾಸ್ತ್ರಿ, ಜೆ.ವಿ.ಆರ್. ಪ್ರಸಾದ್ ರಾವ್ ಮತ್ತು ರಘುರಾಮ್ ವೋಲೇಟಿ ಅವರು ಇದ್ದರು.

ಸೋನಿಯಾ ಗಾಂಧಿಗೆ ಮತ್ತೊಮ್ಮೆ ಕೋವಿಡ್–19 ದೃಢ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಮತ್ತೊಮ್ಮೆ ಕೋವಿಡ್ ದೃಢಪಟ್ಟಿದ್ದು, ಅವರು ಪ್ರತ್ಯೇಕವಾಸದಲ್ಲಿದ್ದಾರೆ.

ಅವರ ಪುತ್ರಿ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಕಳೆದ ವಾರ ಕೋವಿಡ್ ದೃಢಪಟ್ಟಿತ್ತು.

'ಸೋನಿಯಾ ಗಾಂಧಿಯವರಿಗೆ ಕೋವಿಡ್ ದೃಢಪಟ್ಟಿದೆ. ಕೋವಿಡ್ ಮಾರ್ಗಸೂಚಿಗಳ ಅನ್ವಯ ಅವರು, ಪ್ರತ್ಯೇಕವಾಸದಲ್ಲಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

ಜೂನ್‌ನಲ್ಲೂ ಸೋನಿಯಾ ಗಾಂಧಿಯವರಿಗೆ ಕೋವಿಡ್ ದೃಢಪಟ್ಟಿತ್ತು. ಜೂನ್ 12ರಂದು ಅವರು ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು, ಜೂನ್ 20ರಂದು ಮನೆಗೆ ತೆರಳಿದ್ದರು.

'ಯುವಜನರಿಗೆ ಅರವಿಂದರ ವಿಚಾರ ತಲುಪಲಿ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಅರವಿಂದ ಘೋಷ್ ಅವರ ಚಿಂತನೆಗಳನ್ನು ಯುವಜನರಲ್ಲಿ ಬಿತ್ತಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ರಾಷ್ಟ್ರೋತ್ಥಾನ ಪರಿಷತ್ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಕಾ.ಶ್ರೀ. ನಾಗರಾಜ್ ಅವರ 'ಮಂತ್ರದ್ರಷ್ಟ ಅರವಿಂದ್ ಘೋಷ್' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು. 'ಇಂದಿನ ಯುವ ಪೀಳಿಗೆಗೆ ರಾಷ್ಟ್ರಪ್ರೇಮ ಬೆಳೆಸಲು ಗಟ್ಟಿ ವಿಚಾರಗಳನ್ನು ತಿಳಿಸಬೇಕು. ಅರವಿಂದರ ಚಿಂತನೆಗಳನ್ನು ಯುವ ಜನರಿಗೆ ಮನವರಿಕೆ ಮಾಡಿಸಬೇಕು. ದೇಶದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರೀಯ ವಿಚಾರಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಪ್ರಯತ್ನ ಮಾಡಿದ್ದರು. ಕಾ.ಶ್ರೀ. ನಾಗರಾಜ್ ಅವರ ಕೃತಿಯು ಅರವಿಂದ ಘೋಷ್ ಅವರ ವಿಚಾರಗಳನ್ನು ಯುವಕರಿಗೆ ಮುಟ್ಟಿಸಲು ಸಹಕಾರಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಸ್ತಾರ್ ಮೀಡಿಯಾದ ಪ್ರಧಾನ ಸಂಪಾದಕ ಹರಿಪ್ರಕಾಶ್ ಕೋಣೆಮನೆ, '1906ರಲ್ಲಿ ಪೂರ್ಣ ಸ್ವರಾಜ್ಯದ ಕಲ್ಪನೆ ಕೊಟ್ಟದ್ದೇ ಅರವಿಂದರು. ಅವರ ಚಿಂತನೆಗಳು ದೂರದೃಷ್ಟಿ ಹೊಂದಿದ್ದವು. ನಮಗೆ ಅರಿವಿಂದರಂತಹವರು ಪ್ರೇರಣೆಯಾಗಬೇಕು' ಎಂದು ಹೇಳಿದರು.

ಕೃತಿಯ ಲೇಖಕ ಕಾ.ಶ್ರೀ. ನಾಗರಾಜ್, 'ದೇಶವನ್ನು ಕಟ್ಟುವಲ್ಲಿ ಅರವಿಂದರು ಮಹತ್ವದ ಪಾತ್ರ ವಹಿಸಿದ್ದಾರೆ. 1920ರಲ್ಲಿ ನಾಗಪುರ ಕಾಂಗ್ರೆಸ್‌ಗೆ ಅಧ್ಯಕ್ಷರಾಗಿ ಬರಬೇಕೆಂದು ಅವರನ್ನು ಕೇಳಿಕೊಂಡಾಗ ನಿರಾಕರಿಸಿದ ಅವರು, 'ತಾವು ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೇರಿಕೊಂಡಿದ್ದು, ಬರುವುದಿಲ್ಲ' ಎಂದು ಹೇಳಿದ್ದರು. ಅವರು ಹುಟ್ಟಾ ರಾಜಕಾರಣಿಯೆ? ಚರಿತ್ರಕಾರರೆ? ವಿದ್ವಾಂಸರೆ? ಎಂಬ ಬಗ್ಗೆ ಹೇಳುವುದು ಕಷ್ಟ' ಎಂದರು.



'ಮಂತ್ರದ್ರಷ್ಟ ಅರವಿಂದ್ ಘೋಷ್' ಕೃತಿಯನ್ನು ಬಿ.ಸಿ. ನಾಗೇಶ್ ಬಿಡುಗಡೆ ಮಾಡಿದರು. ಹರಿಪ್ರಕಾಶ್ ಕೋಣೆಮನೆ ಹಾಗೂ ಕಾ.ಶ್ರೀ. ನಾಗರಾಜ್ ಇದ್ದಾರೆ – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: 'ಮಂತ್ರದ್ರಷ್ಟ ಅರವಿಂದ್ ಘೋಷ್'
ಲೇಖಕರು: ಕಾ.ಶ್ರೀ. ನಾಗರಾಜ್
ಪುಟಗಳು: 160
ಬೆಲೆ: ₹ 100
ಪ್ರಕಾಶನ: ರಾಷ್ಟ್ರೋತ್ಥಾನ ಪರಿಷತ್

'ಮನಸ್ಸು ಒಂದಾದರೆ ಸಾಧನೆ ಸಾಧ್ಯ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಮಹಾರಾಷ್ಟ್ರ–ಕರ್ನಾಟಕದ ಮಧ್ಯೆ ಸಾಮರಸ್ಯ ಬೆಳೆಯಬೇಕು. ಮನಸ್ಸು ಒಂದಾದರೆ ಎಲ್ಲ ಸಾಧನೆಗಳನ್ನು ಮಾಡಬಹುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪುಣೆಯ ಬಂಟರ ಕನ್ನಡ ಸಂಘವು ಶನಿವಾರ ಅಲ್ಲಿ ಆಯೋಜಿಸಿದ್ದ ಕನ್ನಡ ಭವನದ ನಾಲ್ಕನೇ ವಾರ್ಷಿಕೋತ್ಸವ ಹಾಗೂ ಕಲ್ಪವೃಕ್ಷ ಶಕುಂತಲಾ ಜಗನ್ನಾಥ ಬಿ. ಶೆಟ್ಟಿ ಅವರ ಸಮಾಜ ಕಲ್ಯಾಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಇಲ್ಲಿನ ಕನ್ನಡಿಗರು ಹೆಮ್ಮೆ ಪಡುವ ಸಾಧನೆ ಮಾಡಿದ್ದಾರೆ. ಶಿವಾಜಿ ಮಹಾರಾಜರನ್ನು ಅತ್ಯಂತ ಗೌರವದಿಂದ ಕಾಣುವ ರಾಜ್ಯ ನಮ್ಮದು. ಅದೇ ರೀತಿ ಕನ್ನಡಿಗರನ್ನೂ ಗೌರವಿಸುವ ರಾಜ್ಯ ಮಹಾರಾಷ್ಟ್ರ. ನಿಮ್ಮ ಸಂಬಂಧ ಕನ್ನಡದ ಸಂಸ್ಕೃತಿ, ಭಾವನೆ, ಬೆಳವಣಿಗೆಗೆ ನಿರಂತರವಾಗಿ ಇರಲಿ. ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಕೆಲಸವಾಗಲಿ' ಎಂದು ಕಿವಿಮಾತು ಹೇಳಿದರು.

'ಬಂಟರು ಎನ್ನುವ ಹೆಸರಿನಲ್ಲಿಯೇ ಶಕ್ತಿ ಇದೆ. ದೇಶದ ಉದ್ದಗಲಕ್ಕೆ, ಕಾಶ್ಮೀರದಿಂದ ಕನ್ಯಾಕುಮಾರಿ, ದಿಲ್ಲಿ ಎಲ್ಲೇ ಹೋದರೂ ಬಂಟರಿಗೆ ಗೌರವವಿದೆ. ಬಂಟರಾಗಬೇಕಾದರೆ ಅವರಿಗೆ ಎಂಟೆದೆ ಇರಬೇಕು. ಎಂಟೆದೆ ಇದೆ ಎಂದು ಗರ್ವ ತೋರಿಸುವವರಲ್ಲ. ಅದು ಅವರ ರಕ್ತದ ಕಣ ಕಣದಲ್ಲಿದೆ. ವ್ಯಾಪಾರ ವ್ಯವಹಾರದಲ್ಲಿ ಸಾಹಸಕ್ಕೆ ಕೈಹಾಕುವವರು ಬಂಟರು. ಯಾರಿಗೂ ಸಾಧ್ಯವಿಲ್ಲದ್ದನ್ನು ಮಾಡಿ ತೋರಿಸಿರುವವರು' ಎಂದು ಮುಖ್ಯಮಂತ್ರಿ ಬಣ್ಣಿಸಿದರು.

'21ನೇ ಶತಮಾನ ಜ್ಞಾನದ ಕಾಲ. ಮುಂದಿನ ಪೀಳಿಗೆ ಜ್ಞಾನ ಪಡೆಯಬೇಕು. ಜ್ಞಾನದಲ್ಲಿಯೂ ಬಂಟರು ಕಡಿಮೆ ಇಲ್ಲ. ಬಂಟರ ಸಮಾಜಕ್ಕೆ ಕೀರ್ತಿ, ಕಿರೀಟ ಸಿಗುತ್ತದೆ. ಸಂಘದ ಚಟುವಟಿಕೆಗೆ ಸರ್ಕಾರದ ವತಿಯಿಂದ ಅಗತ್ಯವಿರುವ ನೆರವು ನೀಡಲಾಗುವುದು. ಯಾತ್ರಿ ನಿವಾಸ ನಿರ್ಮಿಸಲು ಪಂಡರಾಪುರಕ್ಕೆ ಈ ವರ್ಷ ₹ 5 ಕೋಟಿ ಅನುದಾನ ನೀಡಲಾಗಿದೆ. ಕನ್ನಡಿಗರು ಹೋಗುವ ಕಡೆಗಳಲ್ಲಿ ಸಹಾಯ ಹಸ್ತ ಚಾಚುತ್ತಿದ್ದೇವೆ' ಎಂದರು.



ಬಂಟರ ಸಂಘದ ವತಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪತ್ನಿ ಚನ್ನಮ್ಮ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಇದ್ದರು.

ಚಿತ್ರಾವಳಿ



ಆನಂದಧಾಮ ಟ್ರಸ್ಟ್, ಕುಂದಾಪುರ ವ್ಯಾಸರಾಜ ಮಠದ ವತಿಯಿಂದ ರಾಘವೇಂದ್ರ ಸ್ವಾಮಿಗಳ ಆರಾಧನೆ ಕಾರ್ಯಕ್ರಮವನ್ನು ಶನಿವಾರ ಆಚರಿಸಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಅಶೋಕ್ ಹಾರ್ನಳ್ಳಿ ಅವರನ್ನು ಸನ್ಮಾನಿಸಲಾಯಿತು. ಪತ್ರಕರ್ತ ಮೋಹನ್‌ಕೆ. ಶ್ರೀಷ ಇದ್ದಾರೆ



ನಗರದ ರಾಜಾಜಿನಗರ ರಾಜಕುಮಾರ್ ರಸ್ತೆಯಲ್ಲಿರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ಶನಿವಾರ ನಡೆದ ಶ್ರೀ ರಾಘವೇಂದ್ರ ಸ್ವಾಮಿ ರವರ 351ನೇ ಆರಾಧನಾ ಮಹೋತ್ಸವದಲ್ಲಿ ಭಕ್ತಾದಿಗಳು ರಾಯರ ದರ್ಶನ ಪಡೆದರು —ಪ್ರಜಾವಾಣಿ ಚಿತ್ರ

ವೈದ್ಯಕೀಯ ಸಂಶೋಧನೆಗೆ ಆದ್ಯತೆ ಅಗತ್ಯ: ಡಾ.ಸಿ. ರಾಮಚಂದ್ರ



ಬೆಂಗಳೂರು: 'ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡ 12ನೇ ರಾಷ್ಟ್ರೀಯ ಬ್ರಾಕಿ ಥೆರಪಿ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ವೈದ್ಯರಾದವರು ಶಸ್ತ್ರಚಿಕಿತ್ಸೆಯ ಎಲ್ಲ ವಿಧಾನಗಳನ್ನು ಕಲಿಯಬೇಕು. ವೈದ್ಯಕೀಯ ವೃತ್ತಿಯನ್ನು ಅನ್ಯ ವೃತ್ತಿಯೊಂದಿಗೆ ಹೋಲಿಸಿ ನೋಡಬಾರದು. ಉಳಿದ ವೃತ್ತಿಗಳಲ್ಲಿ ಹಣ, ಅಂತಸ್ತಿನ ಬಗ್ಗೆ ಆಲೋಚನೆ ಇರುತ್ತದೆ. ಆದರೆ, ವೈದ್ಯರು ಸೇವಾ ಮನೋಭಾವ ಅಳವಡಿಸಿಕೊಂಡಿರುತ್ತಾರೆ. ಈ ವೃತ್ತಿಯಲ್ಲಿ ಮಾನವೀಯತೆಗೆ ಮೊದಲು ಆದ್ಯತೆ ನೀಡಬೇಕಾಗುತ್ತದೆ' ಎಂದು ಹೇಳಿದರು.

'ವೈದ್ಯಕೀಯ ಶಸ್ತ್ರಚಿಕಿತ್ಸಾ ವಿಧಾನಗಳಲ್ಲಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆಗಳನ್ನು ಸುಲಭವಾಗಿ ನಡೆಸಬಹುದಾಗಿದೆ' ಎಂದರು.

ಮದ್ರಾಸ್ ವೈದ್ಯಕೀಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಕೆ. ಥಾಯ್ಲಾನ್, '1930ರಲ್ಲಿ ರಾಂಚಿಯಲ್ಲಿ ಮೊದಲ ಬಾರಿಗೆ ಬ್ರಾಕಿ ಥೆರಪಿಯನ್ನು ಆರಂಭ ಮಾಡಲಾಯಿತು. ಬ್ರಾಕಿ ಥೆರಪಿ ವಿಧಾನದಿಂದ ರೋಗಿಗಳು ಬೇಗ ಚೇತರಿಸಿಕೊಳ್ಳಬಹುದು' ಎಂದು ತಿಳಿಸಿದರು.

ಎಚ್‌ಬಿಸಿಆರ್‌ಸಿ-ಟಿಎಂಸಿ ಸಂಸ್ಥೆ ನಿರ್ದೇಶಕ ಡಾ.ಉಮೇಶ್ ಮಹಾಂತ್ ಶೆಟ್ಟಿ, 'ಗರ್ಭಕೋಶ, ಸ್ತನ, ತಲೆ ಸೇರಿ ವಿವಿಧ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಒದಗಿಸಲು ಬ್ರಾಕಿ ಥೆರಪಿ ಅನುಕೂಲವಾಗಲಿದೆ. ಇದು ಇತರ ವಿಕಿರಣ ಚಿಕಿತ್ಸೆಗಿಂತ ಭಿನ್ನವಾಗಿದೆ. ಈ ಚಿಕಿತ್ಸಾ ವಿಧಾನದಿಂದ ಯಾವುದೇ ಅಂಗಗಳಿಗೆ ಹಾನಿಯಾಗುವುದಿಲ್ಲ' ಎಂದು ಹೇಳಿದರು.

ನಗರದಲ್ಲಿ ಇಂದು

ರಾಘವೇಂದ್ರ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ: ರಥೋತ್ಸವಕ್ಕೆ ಚಾಲನೆ: ವೈ. ನಾರಾಯಣ ಸ್ವಾಮಿ, ಬೆಳಿಗ್ಗೆ 10.30ಕ್ಕೆ ಪ್ರವಚನ: ವಸಂತಾಚಾರ್ ಪೂಜಾರ್, 11.30ಕ್ಕೆ ದಾಸವಾಣಿ: ವಸುಧೇಂದ್ರ.ಎಲ್. ವೈದ್ಯ ಮತ್ತು ತಂಡದವರಿಂದ, ಸಂಜೆ 6.30ಕ್ಕೆ ಕರ್ನಾಟಕ ಸಂಗೀತ: ಆರ್.ಕೆ. ಪದ್ಮನಾಭನ್ ತಂಡದವರಿಂದ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಎನ್. ಜಿ.ಇ.ಎಫ್ ಬಡಾವಣೆ, ರಾಜಮಹಲ್ ವಿಲಾಸ್, ಸಂಜಯನಗರ

ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತಿ ಹಾಗೂ ವಿಜಯ ಭವಾನಿ ವೆಲ್‌ಫೇರ್ ಅಸೋಸಿಯೇಷನ್‌ನ 36ನೇ ವಾರ್ಷಿಕ ಸಮಾರಂಭ: ಅತಿಥಿಗಳು: ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ರಿಜ್ವಾನ್ ಅರ್ಷದ್, ಎಂ.ಜಿ. ಮುಳೆ, ಎಸ್.ಜಿ. ಮಂಜುನಾಥ ಸಿಂಗ್, ಆಯೋಜನೆ: ವಿಜಯ ಭವಾನಿ ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಕೆ.ಕೆ. ಎಂ.ಪಿ. ಕಲ್ಯಾಣ ಮಂಟಪ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 11

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ಸುಶೀಲಾ ಮತ್ತು ಜೆ. ಮಲ್ಲೇಶ್, ಮಹಾಲಕ್ಷ್ಮಿ ಮತ್ತು ಎಂ.ಸುದೀಪ್, ನಂ134/ಎ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಎಚ್.ಆರ್. ಬಿ ಬಡಾವಣೆ, ಮಹಾದೇವಪುರ, ಸಂಜೆ: ಶೋಭಾ ಮತ್ತು ಜ್ಞಾನೇಶ್ವರ ತೆಗ್ಗಿನಮಠ, ನಂ.548, 201ನೇ ಮಹಡಿ, 7ನೇ ಮುಖ್ಯರಸ್ತೆ, ಜಗದೀಶ್‌ನಗರ

ಆಶಾ ಕಿರಣ್ ಡಯಾಲಿಸಿಸ್ ಘಟಕದ ಉದ್ಘಾಟನೆ: ಅತಿಥಿಗಳು: ಡಾ.ಕೆ. ಸುಧಾಕರ್, ರಿಜ್ವಾನ್ ಅರ್ಷದ್, ಎಫ್. ಆರ್. ಸಿಂಘ್ವಿ, ಎಸ್.ವಿ.ಎಸ್. ಸುಬ್ರಹ್ಮಣ್ಯಂ ಗುಪ್ತಾ, ಆಯೋಜನೆ: ಅಗರಬತ್ತಿ ಮ್ಯಾನುಫ್ಯಾಕ್ಚರರ್ಸ್ ಚಾರಿಟಬಲ್ ಟ್ರಸ್ಟ್, ಸ್ಥಳ: ಎಂಎಂಸಿಟಿ ಬಿಲ್ಡಿಂಗ್, ಎಸ್.ಆರ್. ನಗರ, ಬೆಳಿಗ್ಗೆ 10

ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ ಹಾಗೂ ಎಸ್. ಅಂಬುಜಾ ಪ್ರಕಾಶ್ ಅವರ 'ಹಿಂದೂ ಹಬ್ಬ ಹರಿದಿನಗಳು' ಕೃತಿ ಬಿಡುಗಡೆ: ಪ್ರಶಸ್ತಿ ಪ್ರದಾನ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಪುಸ್ತಕ ಬಿಡುಗಡೆ: ಕೆ. ರಮಾನಂದ, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಅಂಚೆ ಕಚೇರಿ ಪಕ್ಕ ಶೇಷಾದ್ರಿಪುರ, ಬೆಳಿಗ್ಗೆ 10.30

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಪತ್ರಿಕೋದ್ಯಮದ ಹಿರಿಯರಿಗೆ ಗೌರವ 'ಮನೆಯಂಗಳದಲ್ಲಿ ಮನದುಂಬಿ ನಮನ': ಕಲ್ಲೆ ಶಿವೋತ್ತಮ ರಾವ್ ಅವರಿಗೆ ಗೌರವ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮದ ಉದ್ಘಾಟನೆ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: 1031, ಮೊದಲ ಮುಖ್ಯರಸ್ತೆ, ಕೈಗಾರಿಕಾ ಪ್ರದೇಶ ಯಲಹಂಕ ನ್ಯೂಟೌನ್, ಬೆಳಿಗ್ಗೆ 11

75ನೇ ವರ್ಷದ ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಮಾರಂಭ: ಉದ್ಘಾಟನೆ: ಬಿ. ಸೋಮಶೇಖರ್, ಅಧ್ಯಕ್ಷತೆ: ದಿಬ್ಬೂರು ಸಿದ್ಧಲಿಂಗಪ್ಪ, ಅತಿಥಿಗಳು: ನಾ.ಮಲ್ಲಿಕಾರ್ಜುನ, ದಿಬ್ಬೂರು.ಎಸ್. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ನಾಗರಿಕರ ವಿಚಾರ ವೇದಿಕೆ, ಸ್ಥಳ: ದಿಬ್ಬೂರು ನಿವಾಸ, 135, 75ನೇ ಮುಖ್ಯರಸ್ತೆ, ಜಯನಗರ, ಬೆಳಿಗ್ಗೆ 11

ಭಗವಾನ್.ಎಸ್. ಚವ್ಹಾಣ ಅವರ ಏಕವ್ಯಕ್ತಿ ಚಿತ್ರಕಲೆ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 11

'ಸಂಭವ' ವಾರ್ಷಿಕೋತ್ಸವ ದಿನಾಚರಣೆ: ಅತಿಥಿಗಳು: ಸೂರಜ್‌ಗೌಡ, ಧನ್ಯಾ ರಾಮಕುಮಾರ್, ಕಂಬದ ರಂಗಯ್ಯ, ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ ಪೈ, ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಎಸ್. ಕಾಲೇಜ್ ಫಾರ್ ವುಮೆನ್, ಬಸವನಗುಡಿ, ಬೆಳಿಗ್ಗೆ 11

ಆಜಾದಿ ಕಾ ಅಮೃತ ಮಹೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಆಚಾರ್ಯ ಮಹಾಮಂಡಲೇಶ್ವರ ಮಧುಸೂದನಾನಂದಪುರಿ ಸ್ವಾಮೀಜಿ, ಅತಿಥಿಗಳು: ಯು.ಬಿ. ವೆಂಕಟೇಶ್, ಎಲ್.ಎ. ರವಿಸುಬ್ರಹ್ಮಣ್ಯ, ತೇಜಸ್ವಿನಿ ಅನಂತಕುಮಾರ್, ಎಚ್.ಸಿ. ಕೃಷ್ಣ, ವೈ.ಎ. ಸುಧಾಕರ್ ಬಾಬು, ಮಹೇಂದ್ರ ಮುನ್ನೋತ್ ಜೈನ್, ಆಯೋಜನೆ: ಮಾನಸ ಇಂಗ್ಲಿಷ್ ಶಾಲೆ, ಸ್ಥಳ: ಕೆಂಪೇಗೌಡ ಆಟದ ಮೈದಾನ (ಡೊಂಕಾಲ್ ಫೀಲ್ಡ್), ಬಸವನಗುಡಿ, ಸಂಜೆ 3.30

ವಿಜ್ಞಾನ ಕೂಟ 'ಬಬಲ್‌ಗಳ ಅದ್ಭುತ ಲೋಕ': ಆಯೋಜನೆ: ಜವಾಹರ್ ಲಾಲ್ ನೆಹರು ತಾರಾಲಯ, ಸ್ಥಳ: ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್, ಸಂಜೆ 4

ಬೀಳ್ಕೊಡುಗೆ ಸಮಾರಂಭ: ಸಾನ್ನಿಧ್ಯ: ನಿ.ಪ್ರ. ಮಲ್ಲಿಕಾರ್ಜುನ ಸ್ವಾಮೀಜಿ, ಅತಿಥಿಗಳು: ಟಿ. ಮೋಹನ್ ರೆಡ್ಡಿ, ಶಾಂತರಾಜು, ಆಯೋಜನೆ: ಪುಣ್ಯಕ್ಷೇತ್ರ ಪಾದಯಾತ್ರಿಗಳ ಸೇವಾ ಸಮಿತಿ, ಸ್ಥಳ: ಹಲಸೂರು, ಸಂಜೆ 5

'ಉತ್ತರಾರಾಧನೆ' ಸಾಂಸ್ಕೃತಿಕ ಕಾರ್ಯಕ್ರಮಗಳು: ಬೆಳಿಗ್ಗೆ 10ಕ್ಕೆ, ಭಜನೆ: ಅಖಿಲ ಭಾರತ ಮಾಧ್ವ ಮಹಾಮಂಡಳಿ, ಸಂಜೆ 5ಕ್ಕೆ, ವೇಣುವಾದನ: ವಿದ್ವಾನ್ ಪ್ರದ್ಯುಮ್ನ, ಆಯೋಜನೆ: ಸರ್ವಮೂಲ ಪ್ರತಿಷ್ಠಾನ, ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ

ಸ್ವಾತಂತ್ರ್ಯದ ರಕ್ಷಣೆ ಮತ್ತು ಜನತೆಯ ಹಕ್ಕುಗಳ ಉಳಿವಿಗಾಗಿ ಕಾರ್ಮಿಕರಿಂದ ಅಹೋರಾತ್ರಿ ಸ್ವಾತಂತ್ರ್ಯೋತ್ಸವ: ಆಯೋಜನೆ: ಸಿಐಟಿಯು, ಸ್ಥಳ: ಟೌನ್‌ಹಾಲ್ ಎದುರು, ಸಂಜೆ 6

ರಾಘವೇಂದ್ರ ಗುರುಸಾರ್ವಭೌಮರ 351ನೇ ಆರಾಧನಾ ಪಂಚರಾತ್ರೋತ್ಸವ: ಬೆಳಿಗ್ಗೆ 10ಕ್ಕೆ ಮಹಾರಥೋತ್ಸವ, ಭಕ್ತಿ ಲಹರಿ: ಅನಂತ ಕುಲಕರ್ಣಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 7

'ರಕ್ತಧ್ವಜ' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಣಿ ಭಟ್ ಎ., ಅತಿಥಿಗಳು: ಡಿ. ಮಹೇಂದ್ರ, ನಾಗಲಕ್ಷ್ಮಿ ಕೆ. ರಾವ್, ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

8 ಸಾವಿರ ಜನರಿಗೆ ಆಹ್ವಾನ: ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಅದ್ದೂರಿ ಆಚರಣೆಗೆ ಸಿದ್ಧತೆ

ಸ್ವಾತಂತ್ರ್ಯೋತ್ಸವ: ಸಾರ್ವಜನಿಕರಿಗೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆ.15ರಂದು ನಡೆಯಲಿರುವ 75ನೇ ಸ್ವಾತಂತ್ರ್ಯೋತ್ಸವದಲ್ಲಿ ಸಾರ್ವಜನಿಕರೂ ಭಾಗವಹಿಸಲು ಈ ಬಾರಿ ಅವಕಾಶ ಕಲ್ಪಿಸಲಾಗಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಸಿದ್ಧತೆಗಳನ್ನು ಪರಿಶೀಲಿಸಿದ ಅವರು, 'ಎರಡು ವರ್ಷಗಳ ಬಳಿಕ ಈ ವರ್ಷ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. 8 ಸಾವಿರ ಆಹ್ವಾನ ಪತ್ರಿಕೆಯನ್ನು ಬೆಂಗಳೂರು ನಗರದ ಜಿಲ್ಲಾಡಳಿತ ಮುದ್ರಿಸಿದ್ದು, 6,200 ಪತ್ರಿಕೆಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಆಹ್ವಾನಿತರಿಗೆ ವೀಕ್ಷಕ ಗ್ಯಾಲರಿಯನ್ನೂ ವ್ಯವಸ್ಥೆಗೊಳಿಸಲಾಗಿದೆ' ಎಂದು ಹೇಳಿದರು.

ಅಂದು ಬೆಳಿಗ್ಗೆ 8.45ಕ್ಕೆ ಮುಖ್ಯಮಂತ್ರಿ ಅವರು ಮೈದಾನಕ್ಕೆ ಬರಲಿದ್ದು, 9 ಗಂಟೆಗೆ ಧ್ವಜಾರೋಹಣ ನೆರವೇರಿಸಲಿದ್ದಾರೆ. ಧ್ವಜಾರೋಣದ ನಂತರ ಮುಖ್ಯಮಂತ್ರಿ ಅವರು ತೆರೆದ ಜೀಪಿನಲ್ಲಿ ಪರೇಡ್ ಪರಿವೀಕ್ಷಣೆ ಮತ್ತು ಗೌರವ ರಕ್ಷೆ ಸ್ವೀಕರಿಸುವರು. ಬಳಿಕ ಸ್ವಾತಂತ್ರ್ಯೋತ್ಸವದ ಸಂದೇಶ ನೀಡಲಿದ್ದಾರೆ ಎಂದು ತಿಳಿಸಿದರು. ಕೆಎಸ್‌ಆರ್‌ಪಿ, ಸಿಆರ್‌ಪಿಎಫ್, ಬಿಎಸ್‌ಎಫ್, ಸಿಎಆರ್, ಕೆಎಸ್‌ಐ-ಎಸ್‌ಎಫ್, ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಹೋಂ ಗಾರ್ಡ್ಸ್, ಟ್ರಾಫಿಕ್ ವಾರ್ಡನ್, ಅಗ್ನಿಶಾಮಕ ದಳ, ಶ್ವಾನದಳ ಸೇರಿ ಒಟ್ಟು 36 ತುಕಡಿಗಳ 1,200 ಮಂದಿ ಪಥ ಸಂಚಲನದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಪಶ್ಚಿಮ ವಿಭಾಗದ ಹೆಚ್ಚುವರಿ ಆಯುಕ್ತ ಸಂದೀಪ್ ಪಾಟಿಲ್, ಸಂಚಾರ ಪೊಲೀಸ್ ಜಂಟಿ ಆಯುಕ್ತ ರವಿಕಾಂತೆಗೌಡ ಇದ್ದರು.



ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಮಹಿಳಾ ಪೊಲೀಸ್ ತಂಡದಿಂದ ತಾಲೀಮು ನಡೆಯಿತು – ಪ್ರಜಾವಾಣಿ ಚಿತ್ರ



ವಿದ್ಯಾರ್ಥಿನಿಯರು ಪಥ ಸಂಚಲನದ ತಾಲೀಮು ನಡೆಸಿದರು

2,400 ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ

ಧ್ವಜಾರೋಹಣ ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, 2,400 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

'ಚಿಕ್ಕಬಿದಿರಕಲ್ಲು ಸರ್ಕಾರಿ ಪ್ರೌಢಶಾಲೆಯ 800 ಮಕ್ಕಳು ಅಮೃತ ಮಹೋತ್ಸವ ಭಾರತದ ಸಂಭ್ರಮದ ನೃತ್ಯ ಪ್ರದರ್ಶಿಸಲಿದ್ದಾರೆ. ಹೇರೋಹಳ್ಳಿ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ 800 ಮಕ್ಕಳು 'ಈಸೂರು ಹೋರಾಟ' ಹಾಗೂ ಗುರಪ್ಪನಪಾಳ್ಯದ ರೋಜ್ ಪ್ರೌಢಶಾಲೆಯ 850 ಮಕ್ಕಳು 'ಜೈ ಜವಾನ್ ಜೈ ಕಿಸಾನ್' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಎಂಇಜಿ ತಂಡದವರು ಟೆಂಟ್ ಪೆಗ್ಗಿಂಗ್, ಕಾಂಬ್ಯಾಟ್ ಫ್ರೀ ಫಾಲ್ ಮತ್ತು ಉತ್ತಮ ದೇಹದಾರ್ಢ್ಯ ಸಾಹಸ ಪ್ರದರ್ಶಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

1,700 ಸಿಬ್ಬಂದಿಯಿಂದ ಭದ್ರತೆ

'ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. 9 ಡಿಸಿಪಿಗಳ ನೇತೃತ್ವದಲ್ಲಿ 1,700 ಪೊಲೀಸ್ ಸಿಬ್ಬಂದಿಯನ್ನು ಭದ್ರತೆ ಕಾರ್ಯಕ್ಕೆ ನಿಯೋಜಿಸಲಾಗಿದೆ' ಎಂದು ನಗರದ ಪೊಲೀಸ್ ಕಮಿಷನರ್ ಸಿ.ಎಚ್. ಪ್ರತಾಪರೆಡ್ಡಿ ತಿಳಿಸಿದರು.

ಮೈದಾನದ ಸುತ್ತ ಭದ್ರತೆ ಮತ್ತು ಸುರಕ್ಷತೆಗಾಗಿ 100 ಸಿಸಿಟಿವಿ ಕ್ಯಾಮೆರಾ, ನಾಲ್ಕು ಬ್ಯಾಗೇಜ್ ಸ್ಕ್ಯಾನರ್ ಅಳವಡಿಸಲಾಗುವುದು. ಕಾರ್ಯಕ್ರಮಕ್ಕೆ ಬರುವ ಪ್ರತಿಯೊಬ್ಬರಿಗೂ ಪಾಸು ಮತ್ತು ಗುರುತಿನ ಚೀಟಿ ವಿತರಿಸಲಾಗುವುದು. ಪರ್ಸ್ ಮತ್ತು ಮೊಬೈಲ್ ಫೋನ್ ಹೊರೆತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಕಾರ್ಯಕ್ರಮಕ್ಕೆ ತರುವಂತಿಲ್ಲ. ಆಹ್ವಾನಿತರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈದ್ಗಾ ಮೈದಾನದಲ್ಲಿ ಕಂದಾಯ ಇಲಾಖೆಯಿಂದ ಧ್ವಜಾರೋಹಣ ಮಾಡಲಾಗುತ್ತಿದೆ. ಅದಕ್ಕೆ ಬೇಕಾದ ಭದ್ರತೆ ಒದಗಿಸಲಾಗಿದೆ. ನಗರದ ಹಲವೆಡೆ ಆ.15ರಂದು ಮೆರವಣಿಗೆ ಮತ್ತು ಸಭೆಗಳು ನಡೆಲಿದ್ದು, ಸಂಚಾರಕ್ಕೆ ತೊಂದರೆ ಆಗುವ ಸಾಧ್ಯತೆ ಇದ್ದು, ಸಾರ್ವಜನಿಕರು ಸಹಕರಿಸಬೇಕು. ತೊಂದರೆ ಆಗದಂತೆ ಆಯೋಜಕರು ಎಚ್ಚರ ವಹಿಸಬೇಕು ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳ ಪ್ರದರ್ಶನ

ಬೆಂಗಳೂರು: ನಗರದ ವಿಶ್ವೇಶ್ವರಪುರದ ಸಜ್ಜನರಾವ್ ವೃತ್ತದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ 100 ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಪ್ರದರ್ಶಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ತಿಳಿಸಿದ್ದಾರೆ.

ವಿಶ್ವೇಶ್ವರಪುರದ ಮೈಸೂರು ಪೌರ, ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ ಮತ್ತು ಸಮರ್ಪಣಾ ಸಂಘಟನೆಗಳ ಜೊತೆಗೆ ವಿವಿಧ ಸಂಘ–ಸಂಸ್ಥೆಗಳು ಭಾಗವಹಿಸಲಿವೆ. 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸಲು ಆಗಸ್ಟ್ 14 (ಭಾನುವಾರ) ರಾತ್ರಿ 8ಯಿಂದ ದೇಶ ಭಕ್ತಿ ಗೀತೆಗಳು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಧ್ಯರಾತ್ರಿ 12ರ ನಂತರ 75 ಧ್ವಜಾರೋಹಣ ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ರಮಕ್ಕೆ ಚಾಲನೆ

ಬೊಮ್ಮನಹಳ್ಳಿ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಶನಿವಾರದಿಂದ ಮೂರು ದಿನಗಳ ಕಾಲ ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಆರ್‌ಬಿಐ ಬಡಾವಣೆ ಮತ್ತು ಮೈಕೋ ಲೇಔಟ್‌ನಲ್ಲಿ ಬಿಬಿಎಂಪಿ ಬೊಮ್ಮನಹಳ್ಳಿ ವಲಯದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಎರಡೂ ಕಾರ್ಯಕ್ರಮಗಳಲ್ಲಿ ಶಾಲಾ ವಿದ್ಯಾರ್ಥಿಗಳು, ಪೌರಕಾರ್ಮಿಕರು ಹಾಗೂ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು. ಸೇನೆ, ರಕ್ಷಣಾ ಇಲಾಖೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ದೇಶಕ್ಕಾಗಿ ದುಡಿದ ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಶಾಸಕ ಎಂ.ಕೃಷ್ಣಪ್ಪ 'ದೇಶದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ಸಾರುವ ತ್ರಿವರ್ಣ ಧ್ವಜ ಎಲ್ಲರ ಮನೆಗಳ ಮೇಲೆ ಹಾರುತ್ತಿರುವುದು ಹೆಮ್ಮೆಯ ಸಂಕೇತ' ಎಂದರು. ಮೈಕೊ ಲೇಔಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಸತೀಶ್ ರೆಡ್ಡಿ, 'ದೇಶ ಸ್ವಾತಂತ್ರ್ಯ ಗಳಿಸಿದ 75 ವರ್ಷಗಳ ಆಚರಣೆಯ ಸಂದರ್ಭದಲ್ಲಿ ನಾವೆಲ್ಲ ಭಾಗಿಯಾಗಿರುವುದು ಹೆಮ್ಮೆಯ ವಿಚಾರ. ಭ್ರಷ್ಟಾಚಾರರಹಿತವಾದ, ಪಾರದರ್ಶಕ, ಜನಸ್ನೇಹಿಯಾದ ಆಡಳಿತ ನೀಡಿದಾಗ ಜನರಿಗೆ ದೇಶದ ಬಗ್ಗೆ ಅಭಿಮಾನ, ಹೆಮ್ಮೆ ಮೂಡುತ್ತದೆ' ಎಂದರು.

ಬಿಬಿಎಂಪಿ ವಲಯ ಆಯುಕ್ತ ಹರೀಶ್ ಕುಮಾರ್, ನಿವೃತ್ತ ನ್ಯಾಯಮೂರ್ತಿ ಸುಧೀಂದ್ರ ರಾವ್, ಮನೋವಿಜ್ಞಾನಿ ಡಾ.ಸಿ.ಆರ್.ಚಂದ್ರಶೇಖರ್, ಮಾಜಿ ಕ್ರಿಕೆಟಿಗ ಅಯ್ಯಪ್ಪ, ಪಾಲಿಕೆ ಮಾಜಿ ಸದಸ್ಯ ಪುರುಷೋತ್ತಮ, ಭಾಗ್ಯಲಕ್ಷ್ಮಿ ಮುರಳಿ, ಬಿಜೆಪಿ ಮುಖಂಡ ಮುರಳೀಧರ್, ಮಾಜಿ ಉಪ ಮೇಯರ್ ರಾಮಮೋಹನ ರಾಜ್ ಇದ್ದರು.

ದೇಶ ವಿಭಜನೆ ದುರಂತದ ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಸಂಭ್ರಮದ ನಡುವೆಯೇ ದೇಶ ವಿಭಜನೆಯ ಕರಾಳ ದಿನಗಳನ್ನು ನೆನಪಿಸುವ ಛಾಯಾಚಿತ್ರ ಪ್ರದರ್ಶನವನ್ನು ಪುರಭವನದಲ್ಲಿ ಬಿಬಿಎಂಪಿ ಆಯೋಜಿಸಿದ್ದು, ಒಂದೊಂದು ಚಿತ್ರವೂ ಕರಾಳ ದಿನಗಳ ನೂರೆಂಟು ಕಥೆಗಳನ್ನು ಹೇಳುತ್ತಿದೆ.

1947ರಲ್ಲಿ ದೇಶ ವಿಭಜನೆಯಾದಾಗ ಅತಿ ದೊಡ್ಡ ವಲಸೆ ಆಯಿತು. ಅದಕ್ಕೆ ಸಂಬಂಧಿಸಿದ ಆಯ್ದ 51 ಚಿತ್ರಗಳನ್ನು ಮುದ್ರಿಸಿ ಪ್ರದರ್ಶನಕ್ಕೆ ಇಡಲಾಗಿದೆ. ಸಹಬಾಳ್ವೆಯ ಮಹತ್ವವನ್ನು ಇತಿಹಾಸದಿಂದ ತಿಳಿಯಬೇಕು ಎಂಬುದನ್ನು ಈ ಚಿತ್ರಗಳು ಸಾರುತ್ತಿವೆ. ವಿದ್ಯಾರ್ಥಿಗಳು, ಯುವಕರು ಪುರಭವನಕ್ಕೆ ಭೇಟಿ ನೀಡಿ ಚಿತ್ರಗಳನ್ನು ನೋಡಿ ಭಾರವಾದ ಮನಸಿನಿಂದ ಹೊರ ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು.

ವಸ್ತು ಪ್ರದರ್ಶನ ಉದ್ಘಾಟಿಸಿದ ಶಾಸಕ ಉದಯ್ ಗರುಡಾಚಾರ್, 'ದೇಶ ವಿಭಜನೆ ಆಗದಿದ್ದರೆ ಅಮೆರಿಕ ಮತ್ತು ರಷ್ಯಾಗಿಂತ ಭಾರತ ಶಕ್ತಿಶಾಲಿ ಆಗಿರುತ್ತಿತ್ತು. ಬ್ರಿಟಿಷರು ದೇಶ ಬಿಡುವ ಮುನ್ನ ಮೂರು ಭಾಗ ಮಾಡಿಹೋದರು. ಆ ಸಂದರ್ಭದ ಸಾಮಾನ್ಯ ಜನರ ತೊಳಲಾಟವನ್ನು ಈ ಚಿತ್ರಗಳು ಹೇಳುತ್ತಿವೆ' ಎಂದು ಹೇಳಿದರು.

ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ಸ್ವಾತಂತ್ರ್ಯೋತ್ಸದ ಸಂಭ್ರಮದ ಜತೆಗೆ ಶಾಂತಿ ಮತ್ತು ಸಹಬಾಳ್ವೆ ಬಗ್ಗೆಯೂ ನಾವು ತಿಳಿದುಕೊಳ್ಳಬೇಕಿದೆ. ವಿಭಜನೆ ಅದೆಷ್ಟು ಸಂಕಟಮಯ ಎಂಬುದನ್ನು ಈ ಚಿತ್ರಗಳು ಹೇಳುತ್ತಿವೆ. ದೇಶ ವಿಭಜನೆ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಅದಕ್ಕೆ ಅವಕಾಶ ನೀಡದೆ ಒಟ್ಟಾಗಿಯೇ ಬಾಳಬೇಕು ಎಂಬುದನ್ನು ಈ ವಸ್ತು ಪ್ರದರ್ಶನ ಅರ್ಥ ಮಾಡಿಸುತ್ತಿದೆ' ಎಂದು ಹೇಳಿದರು.

ದಕ್ಷಿಣ ವಲಯ ಆಯುಕ್ತ ಜಯರಾಮ ರಾಯಪುರ ಅವರು ಕಡಿಮೆ ಅವಧಿಯಲ್ಲಿ ಛಾಯಾಚಿತ್ರ ಪ್ರದರ್ಶನವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.



ವಿಭಜನೆಯ ದುರಂತ ದಿನದ ಸ್ಮರಣೆಗಾಗಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನವನ್ನು ಶಾಸಕ ಉದಯ್ ಗರುಡಾಚಾರ್, ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ವೀಕ್ಷಿಸಿದರು

ಮಧ್ಯರಾತ್ರಿಯೇ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ 'ಹರ್ ಘರ್ ತಿರಂಗಾ' ಕಾರ್ಯಕ್ರಮವನ್ನು ಮಲ್ಲೇಶ್ವರದ ಸರ್ಕಾರಿ ಕಾಲೇಜು ಮೈದಾನದಲ್ಲಿ ಆ.14ರ (ಭಾನುವಾರ) ಮಧ್ಯರಾತ್ರಿ ಆಚರಣೆ ಮಾಡಲಾಗುತ್ತಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ 10 ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಳ್ಳಲಿದ್ದಾರೆ. ಭಾನುವಾರ ರಾತ್ರಿ 8.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಹಮ್ಮಿಕೊಳ್ಳಲಾಗಿದೆ. ಖ್ಯಾತ ಗಾಯಕಿ ಮಂಗ್ಲಿ (ಸತ್ಯವತಿ) ಅವರು ದೇಶಭಕ್ತಿ ಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ. ರಾತ್ರಿ 12 ಗಂಟೆಗೆ ಧ್ವಜಾರೋಹಣದ ಜೊತೆಗೆ 45 ನಿಮಿಷಗಳ ವಿಶೇಷ ಪಟಾಕಿ ಮತ್ತು ಸಿಡಿಮದ್ದು ಪ್ರದರ್ಶನ ಏರ್ಪಡಿಸಲಾಗಿದೆ. ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿ ನವಭಾರತದ ನಾಯಕರ ಚಿತ್ತಾರಗಳು ಮೂಡಿ ಬರಲಿವೆ ಎಂದು ತಿಳಿಸಿದ್ದಾರೆ.



ಮೈಸೂರು ರಸ್ತೆಯಲ್ಲಿ ಪೌರ ಕಾರ್ಮಿಕರು ತ್ರಿವರ್ಣ ಧ್ವಜ ಹಿಡಿದು ಜಾಗೃತಿ ಮೂಡಿಸಿದರು

ಬಿಬಿಎಂಪಿಯಿಂದ ಹಲವೆಡೆ ರಾಷ್ಟ್ರಧ್ವಜ ಅಭಿಯಾನ

ಬೆಂಗಳೂರು: 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪ್ರತಿ ಮನೆ ಮೇಲೆ ರಾಷ್ಟ್ರಧ್ವಜ ಅಭಿಯಾನ ನಗರದಲ್ಲಿ ಆರಂಭವಾಗಿದ್ದು, ಬಿಬಿಎಂಪಿಯಿಂದ ಬಗೆ ಬಗೆಯಲ್ಲಿ ಅಭಿಯಾನ ನಡೆಸಲಾಯಿತು.

ಯಲಹಂಕದಲ್ಲಿ ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪೌರಕಾರ್ಮಿಕರಿಗೆ ರಾಷ್ಟ್ರಧ್ವಜ ವಿತರಿಸಿ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಹೆಬ್ಬಾಳ ಜಂಕ್ಷನ್‌ನಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಚಾಮರಾಜಪೇಟೆಯ ಮಕ್ಕಳ ಕೂಟ, ಗಾಂಧಿನಗರ, ಮಲ್ಲೇಶ್ವರ ಜಂಕ್ಷನ್, ಆನಂದರಾವ್ ವೃತ್ತ, ಸ್ವಾತಂತ್ರ್ಯ ಉದ್ಯಾನ, ಗೋವಿಂದರಾಜನಗರ, ಬೊಮ್ಮನಹಳ್ಳಿ, ಆರ್.ಬಿ.ಐ ಲೇಔಟ್ ಮೈದಾನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ತ್ರಿವರ್ಣ ಧ್ವಜ ಅಭಿಯಾನ ನಡೆಸಲಾಯಿತು. ಹಲವೆಡೆ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮಗಳು ನಡೆದವು.

ಪೂರ್ವ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಿದರು. ಸ್ಕೌಟ್ಸ್ ಆ್ಯಂಡ್ ಗೈಡ್ಸ್ ವಿದ್ಯಾರ್ಥಿಗಳು, ಘನತ್ಯಾಜ್ಯ ವಿಭಾಗದ ತಂಡದವರು, ಶಿಕ್ಷಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಮೆಜೆಸ್ಟಿಕ್, ಪಾಲಿಕೆ ಕೇಂದ್ರ ಕಚೇರಿ ವೃತ್ತ, ಕೆ.ಆರ್.ಮಾರುಕಟ್ಟೆ, ವಿಕ್ಟೋರಿಯಾ ಆಸ್ಪತ್ರೆ ಬಸ್ ನಿಲ್ದಾಣ, ಕಲಾಸಿಪಾಳ್ಯ ಮಾರುಕಟ್ಟೆ, ದಾಸಪ್ಪ ಆಸ್ಪತ್ರೆ ಮುಂಭಾಗ, ಬಸವೇಶ್ವರ ವೃತ್ತ, ಮೆಟ್ರೊ ನಿಲ್ದಾಣಗಳು ಸೇರಿ ಹಲವೆಡೆ ಪಾಲಿಕೆ ಬಸ್ ಮೂಲಕ ಧ್ವಜ ಮಾರಾಟ ಮಾಡಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಪುಲಕೇಶಿ ನಗರದಲ್ಲಿ ಸ್ವಚ್ಛತಾ ಅಭಿಯಾನ, ಕೆಎಸ್‌ಆರ್ ರೈಲು ನಿಲ್ದಾಣ, ಗರುಡಾ ಮಾಲ್‌ನಲ್ಲಿ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಯಲಹಂಕ ವಲಯ, ದಾಸರಹಳ್ಳಿ ವಲಯ ಹಾಗೂ ಮಧ್ಯಾಹ್ನದ ನಂತರ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಛಾಯಾಚಿತ್ರ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದೆ.

ಚಾಮರಾಜಪೇಟೆ ಮೈದಾನ: ಧ್ವಜಾರೋಹಣ– ಸಿದ್ಧತೆ ಪರಿಶೀಲನೆ

ಬೆಂಗಳೂರು: ನಗರದ ಚಾಮರಾಜಪೇಟೆಯ ಮೈದಾನದಲ್ಲಿ ಆಗಸ್ಟ್ 15ರಂದು ಉಪ ವಿಭಾಗಾಧಿಕಾರಿ ಅವರಿಂದಲೇ ಧ್ವಜಾರೋಹಣ ನೆರವೇರಿಸಲು ತೀರ್ಮಾನಿಸಲಾಗಿದ್ದು, ಶನಿವಾರ ಕಂದಾಯ ಸಚಿವ ಆರ್.ಅಶೋಕ ಹಾಗೂ ಹಿರಿಯ ಅಧಿಕಾರಿಗಳು ಮೈದಾನಕ್ಕೆ ಭೇಟಿ ನೀಡಿ, ಸಿದ್ಧತೆ ಹಾಗೂ ಭದ್ರತೆ ಪರಿಶೀಲಿಸಿದರು.

'ಸ್ವಾತಂತ್ರ್ಯ ದಿನಾಚರಣೆಯಂದು ಗೊಂದಲಕ್ಕೆ ಅವಕಾಶ ನೀಡಬಾರದು. ಧ್ವಜಾರೋಹಣ ಕಾರ್ಯಕ್ರಮವು ಸುಗಮವಾಗಿ ನಡೆಯಬೇಕು' ಎಂದು ಸಚಿವರು ಪೊಲೀಸರಿಗೆ ಸೂಚಿಸಿದರು.

ಮೈದಾನದ ವಿವಾದವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಮೈದಾನದ ಸುತ್ತಲೂ ಪೊಲೀಸ್ ಪಹರೆ ಹೆಚ್ಚಿಸಲಾಗಿದೆ. 500ಕ್ಕೂ ಹೆಚ್ಚು ಪೊಲೀಸರು ಸುತ್ತಮುತ್ತಲ ಪ್ರದೇಶದಲ್ಲಿ ಭದ್ರತೆಯಲ್ಲಿ ತೊಡಗಿದ್ದಾರೆ. ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಿ, ಕಣ್ಗಾವಲು ವಹಿಸಲಾಗಿದೆ. ಶುಕ್ರವಾರ ಹೆಚ್ಚುವರಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ್ ನೇತೃತ್ವದಲ್ಲಿ ಪಥಸಂಚಲನ ನಡೆದಿತ್ತು.

ವಿರೋಧ–ಪರ ಹೇಳಿಕೆಗಳು ವ್ಯಕ್ತವಾಗುತ್ತಿರುವ ಬೆನ್ನಲೇ ಸೂಕ್ಷ್ಮ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಆಹ್ವಾನ ಪತ್ರಿಕೆಯುಳ್ಳ ಗಣ್ಯರಿಗೆ ಮಾತ್ರ ಧ್ವಜಾರೋಹಣದ ವೇಳೆ ಪ್ರವೇಶ ನೀಡಲು ನಿರ್ಧರಿಸಲಾಗಿದೆ. 'ಮೈದಾನಕ್ಕೆ ವಿಶೇಷ ಭದ್ರತಾ ಕಮಾಂಡೊ ಪಡೆ ನಿಯೋಜಿಸಲಾಗುವುದು. ಪಾದರಾಯನಪುರ, ಗೌರಿಪಾಳ್ಯ ಹಾಗೂ ಚಾಮರಾಜಪೇಟೆ ಸುತ್ತಮುತ್ತಲ ಪ್ರದೇಶದಲ್ಲಿ ಗಸ್ತು ನಡೆಸಲಾಗುತ್ತಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಮತ್ತಷ್ಟು ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ಸಚಿವರಿಗೆ ವಿವರಿಸಿದರು.

'15ರಂದು ನಡೆಯುವ ರಾಷ್ಟ್ರ ಧ್ವಜಾರೋಹಣದಲ್ಲಿ ಯಾವುದೇ ಸಂಘ–ಸಂಸ್ಥೆಗಳಿಗೆ ಧ್ವಜಾರೋಹಣ ನೆರವೇರಿಸಲು ಅವಕಾಶ ಇರುವುದಿಲ್ಲ. ಶಿಷ್ಟಾಚಾರದಂತೆ ಸ್ಥಳೀಯ ಶಾಸಕರು, ಸಂಸದರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು' ಎಂದು ಸಚಿವರು ಹೇಳಿದರು.

ಸಂಸದ ಪಿ.ಸಿ.ಮೋಹನ್, ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಹೆಚ್ಚುವರಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ, ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಹಾಜರಿದ್ದರು.



75ನೇ ಸ್ವಾತಂತ್ರ್ಯೋತ್ಸವದ ಸಡಗರ..

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ವಿಧಾನಸೌಧವು ತ್ರಿವರ್ಣ ಧ್ವಜದ ಆಕರ್ಷಕ ವಿದ್ಯುತ್ ದೀಪಾಲಂಕಾರದಲ್ಲಿ ಝಗಮಗಿಸುತ್ತಿರುವುದು ಶನಿವಾರ ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ... -ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ರಾಷ್ಟ್ರಧ್ವಜದ ಮೇಲೆ ಕೇಸರಿ ಧ್ವಜದ ಹಾರಾಟ

ಶನಿವಾರಸಂತೆ (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ಕೊಡ್ಲಿಪೇಟೆಯ ಬಸ್‌ನಿಲ್ದಾಣದ ಸಮೀಪ ರಾಷ್ಟ್ರಧ್ವಜಕ್ಕಿಂತ ಎತ್ತರದಲ್ಲಿ ಕೇಸರಿ ಧ್ವಜವನ್ನು ಹಾರಿಸಲಾಗಿದ್ದು, ಸಾರ್ವಜನಿಕರ ವ್ಯಾಪಕ ಆಕ್ರೋಶಕ್ಕೆ ಒಳಗಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆಯ ಹೋಬಳಿ ಘಟಕದ ಕಾರ್ಯದರ್ಶಿ ಡಿ.ಆರ್.ವೇದಕುಮಾರ್, 'ಇದು ಯಾವ ರಾಷ್ಟ್ರ ಪ್ರೇಮ? ಯಾವ ದೇಶ ಭಕ್ತಿ' ಎಂದು ಪ್ರಶ್ನಿಸಿದ್ದಾರೆ.

'ತಕ್ಷಣವೇ ಸ್ಥಳಕ್ಕೆ ಪರಿಶೀಲನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೂವಯ್ಯ ತಿಳಿಸಿದರು.



ಶನಿವಾರಸಂತೆ ಸಮೀಪದ ಕೊಡ್ಲಿಪೇಟೆಯಲ್ಲಿ ರಾಷ್ಟ್ರ ಧ್ವಜಕ್ಕಿಂತ ಮೇಲೆ ಕೇಸರಿ ಧ್ವಜವನ್ನು ಹಾರಿಸಲಾಗಿದೆ.

ಸ್ವಾತಂತ್ರ್ಯೋತ್ಸವ ಅಂಗವಾಗಿ ರಾಜಧಾನಿಯ ವಿವಿಧೆಡೆ ಕಾರ್ಯಕ್ರಮ

ವಾಹನ ದಟ್ಟಣೆ: ಬಸವಳಿದ ಜನರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಬಹುತೇಕ ರಸ್ತೆಗಳು ಶನಿವಾರ ವಾಹನ ದಟ್ಟಣೆಯಿಂದ ಕೂಡಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತ್ತು. ಇದರಿಂದ ಚಾಲಕರು ಬಸವಳಿದರು.

ದೂರದ ಊರಿಗೆ ವಾಹನಗಳಲ್ಲಿ ತೆರಳುತ್ತಿದ್ದ ಪ್ರಯಾಣಿಕರು ಟ್ರಾಫಿಕ್‌ನಲ್ಲಿ ಸಿಲುಕಿ ಪರದಾಡಿದರು. 2ನೇ ಶನಿವಾರ, ಭಾನುವಾರ ಹಾಗೂ ಸ್ವಾತಂತ್ರ್ಯ ದಿನಾಚರಣೆ ಸಾಲು ಸಾಲಾಗಿಯೇ ಬಂದಿದ್ದರಿಂದ ಜನರು ಊರಿನತ್ತ ತೆರಳಿದರು. ಒಮ್ಮೆಲೇ ವಾಹನ ದಟ್ಟಣೆಯಿಂದ ಸಮಸ್ಯೆ ಉಂಟಾಯಿತು.

ಯಶವಂತಪುರ ಫ್ಲೈಓವರ್, ಗೊರಗುಂಟೆಪಾಳ್ಯ, ಲಾಲ್‌ಬಾಗ್ ರಸ್ತೆ, ಕೆ.ಆರ್. ವೃತ್ತ, ಮೆಜೆಸ್ಟಿಕ್, ರಾಜಕುಮಾರ್ ರಸ್ತೆ, ಕೆಂಪೇಗೌಡ ರಸ್ತೆ, ಕಾರ್ಪೊರೇಷನ್ ವೃತ್ತ, ಪುರಭವನ, ಜೆಸಿ ರಸ್ತೆ, ನಿಮ್ಹಾನ್ಸ್ ರಸ್ತೆ, ಶಾಂತಿನಗರ, ಸದಾಶಿವನಗರ, ಗಾಂಧಿ ನಗರ, ಅರಮನೆ ರಸ್ತೆ, ಶೇಷಾದ್ರಿಪುರಂ ರಸ್ತೆ, ಹೆಣ್ಣೂರು ರಸ್ತೆ, ಲಿಂಗರಾಜಪುರ, ಸೇಂಟ್ ಜಾನ್ಸ್ ಆಸ್ಪತ್ರೆ, ಬಾಣಸವಾಡಿ, ಕೋರಮಂಗಲ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಸಮೀಪ ವಾಹನ ದಟ್ಟಣೆ ಕಂಡುಬಂತು.

ಪ್ರಮುಖ ವೃತ್ತಗಳಲ್ಲಿ ಸಾಲುಗಟ್ಟಿ ವಾಹನಗಳು ನಿಂತಿದ್ದವು. ಟ್ರಾಫಿಕ್ ಮಧ್ಯೆ ಆಂಬುಲೆನ್ಸ್‌ಗಳು ಸಿಲುಕಿ ಮುಂದೆ ಸಾಗಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ರಾಜಧಾನಿಯ ವಿವಿಧೆಡೆ ಸಂಘ–ಸಂಸ್ಥೆಗಳು, ರಾಜಕೀಯ ಪಕ್ಷಗಳು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ಜಾಥಾ ನಡೆಸಿದರು. ಇದರಿಂದಲೂ ಪ್ರಮುಖ ವೃತ್ತಗಳಲ್ಲಿ ಸುಗಮ ಸಂಚಾರ ಸಾಧ್ಯವಾಗಲಿಲ್ಲ.

ಬೆಳಿಗ್ಗೆಯೇ ವಿಧಾನಸೌಧದ ಎದುರು ಮನೆ ಮನೆಗಳಲ್ಲಿ ರಾಷ್ಟ್ರಧ್ವಜ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇಲ್ಲಿಗೂ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಂದಿದ್ದರು. ಬಿಜೆಪಿ ಆಯೋಜಿಸಿದ್ದ ಮೆರವಣಿಗೆಯಲ್ಲಿ ಕೇಂದ್ರ ಸಚಿವರು ಪಾಲ್ಗೊಂಡಿದ್ದರು. ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ ಮತ್ತಿಕೆರೆ ಭಾಗದಲ್ಲಿ ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಜಾಥಾದಲ್ಲೂ ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಹೀಗಾಗಿ ಆಯಾ ಭಾಗದಲ್ಲಿ ವಾಹನ ಸವಾರರು ಪರದಾಡಿದರು.

ವಾರಾಂತ್ಯದಿಂದ ಲಾಲ್‌ಬಾಗ್‌ನ ಫಲ–ಪುಷ್ಪ ಪ್ರದರ್ಶನ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಲಾಲ್‌ಬಾಗ್ ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ ಆಗಿತ್ತು.

ಗೊರಗುಂಟೆಪಾಳ್ಯ – ಹೆಬ್ಬಾಳ ಸಂಪರ್ಕಿಸುವ ಹೊರವರ್ತುಲ ರಸ್ತೆಯಲ್ಲಿರುವ ರೈಲ್ವೆ ಮೇಲ್ಸೇತುವೆ ದುರಸ್ತಿ ಕಾಮಗಾರಿ ನಡೆಯುತ್ತಿರುವ ಕಾರಣಕ್ಕೆ ವಾಹನ ಮಾರ್ಗ ಬದಲಾವಣೆ ಮಾಡಲಾಗಿದೆ. ಇದರಿಂದ ಯಶವಂತಪುರ ಮೇಲ್ಸೇತುವೆಯಿಂದ ಹೆಬ್ಬಾಳ ಮೇಲ್ಸೇತುವೆ ತನಕ ವಾಹನ ದಟ್ಟಣೆ ಇತ್ತು.



ನಗರದ ಯಶವಂತಪುರ ಫ್ಲೈಓವರ್ ಮೇಲೆ ವಾಹನಗಳ ಸಾಲು

ಸಾಲ ತೀರಿಸಲು ಸ್ನೇಹಿತೆ ಬಳಸಿಕೊಂಡು ಕೃತ್ಯ: ₹9 ಲಕ್ಷ ನಗದು ಜಪ್ತಿ

ಉದ್ಯಮಿ ಹನಿಟ್ರ್ಯಾಪ್: ನಟ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹ 14.90 ಲಕ್ಷ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಯುವರಾಜ್ ಅಲಿಯಾಸ್ ಯುವ (24) ಎಂಬಾತನನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜೆ.ಪಿ. ನಗರ ನಿವಾಸಿ ಯುವರಾಜ್, ವೃತ್ತಿಯಲ್ಲಿ ಜಿಮ್ ಸಲಕರಣೆ ಮಾರಾಟಗಾರ. ಕನ್ನಡ, ತೆಲುಗು, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ನಿರ್ಮಾಣವಾಗುತ್ತಿರುವ ‘ಮಿಸ್ಟರ್ ಭೀಮರಾವ್’ ಸಿನಿಮಾದಲ್ಲೂ ನಾಯಕನಾಗಿ ಯುವರಾಜ್ ನಟಿಸುತ್ತಿದ್ದನೆಂದು ಹೇಳಲಾಗುತ್ತಿದೆ. ಈತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹಲಸೂರು ಗೇಟ್ ಠಾಣೆ ಪೊಲೀಸರು ಹೇಳಿದರು.



ಯುವರಾಜ್

‘ಎಚ್‌ಎಸ್‌ಆರ್ ಲೇಔಟ್ ನಿವಾಸಿಯಾಗಿರುವ 72 ವರ್ಷದ ಉದ್ಯಮಿ ದೂರು ನೀಡಿದ್ದರು. ಯುವತಿಯರು ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇದೀಗ, ಪ್ರಕರಣದ ಪ್ರಮುಖ ಆರೋಪಿ ಯುವರಾಜ್‌ನನ್ನು ಬಂಧಿಸಲಾಗಿದೆ. ₹ 9 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಸಿಸಿಬಿ ಪೊಲೀಸರ ಸೋಗು

‘ಸ್ನೇಹಿತೆ ಮೊಬೈಲ್‌ನಿಂದ ಸಂದೇಶ ಕಳುಹಿಸಿ ಆಗಸ್ಟ್ 3ರಂದು ಉದ್ಯಮಿಯನ್ನು ಹೊಸೂರು ರಸ್ತೆಗೆ ಕರೆಸಿದ್ದ ಆರೋಪಿ, ವಾಟ್ಸ್‌ಆ್ಯಪ್ ಚಾಟಿಂಗ್ ಹಾಗೂ ವಿಡಿಯೊ ತೋರಿಸಿ ಬೆದರಿಸಿದ್ದ. ಸಿಸಿಬಿ ಪೊಲೀಸರೆಂದು ಹೇಳಿ ಹಂತ ಹಂತವಾಗಿ ₹ 14.90 ಲಕ್ಷ ಸುಲಿಗೆ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಯುವರಾಜ್ ಮಾತ್ರವಲ್ಲದೇ ಮತ್ತಷ್ಟು ಮಂದಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಅವರನ್ನು ಪತ್ತೆ ಮಾಡಲಾಗುತ್ತಿದೆ. ಸ್ನೇಹಿತೆಯ ವಿಚಾರಣೆ ನಡೆಸಲಾಗುವುದು’ ಎಂದು ತಿಳಿಸಿದರು.

ಸ್ನೇಹಿತೆ ಬಳಸಿಕೊಂಡು ಕೃತ್ಯ: ‘ತಯಾರಿಕಾ ಕಂಪನಿಗಳಿಂದ ಸಲಕರಣೆಗಳನ್ನು ಖರೀದಿಸಿ ಜಿಮ್‌ಗಳಿಗೆ ಮಾರುತ್ತಿದ್ದ ಯುವರಾಜ್, ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದ. ಹಲವರ ಬಳಿ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದ. ಸಾಲ ತೀರಿಸುವುದಕ್ಕಾಗಿಯೇ ಉದ್ಯಮಿಯನ್ನು ಬ್ಲ್ಯಾಕ್‌ಮೇಲ್ ಮಾಡಲು ಸಂಚು ರೂಪಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಯುವರಾಜ್‌ನ ಸ್ನೇಹಿತೆ ವಿಮೆ ಕಂಪನಿಯೊಂದರ ಪ್ರತಿನಿಧಿ. ಅವರು ಉದ್ಯಮಿ ಜೊತೆ ಸಂಪರ್ಕದಲ್ಲಿದ್ದರು. ನಿತ್ಯವೂ ವಾಟ್ಸ್‌ಆ್ಯಪ್ ಚಾಟಿಂಗ್ ಹಾಗೂ ವಿಡಿಯೊ ಕರೆ ಮಾಡುತ್ತಿದ್ದರು. ಇದನ್ನು ತಿಳಿದಿದ್ದ ಆರೋಪಿ, ಸ್ನೇಹಿತೆಯನ್ನೇ ಬಳಸಿಕೊಂಡು ಹನಿಟ್ರ್ಯಾಪ್ ಮಾಡಲು ಮುಂದಾಗಿದ್ದ.’

‘ಸ್ನೇಹಿತೆ ಮೊಬೈಲ್ ಮೂಲಕ ತಾನೇ ಉದ್ಯಮಿ ಜೊತೆ ಚಾಟಿಂಗ್ ಮಾಡುತ್ತಿದ್ದ. ಲೈಂಗಿಕವಾಗಿ ಮಾತನಾಡಿ ಪ್ರಚೋದಿಸುತ್ತಿದ್ದ. ಸ್ನೇಹಿತೆಯಿಂದಲೇ ವಿಡಿಯೊ ಕರೆ ಮಾಡಿಸಿ, ಚಿತ್ರೀಕರಿಸಿಟ್ಟುಕೊಂಡಿದ್ದ’ ಎಂದೂ ತಿಳಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಪತ್ನಿ: ಸಿಬ್ಬಂದಿ ಮೇಲೆ ಅನುಮಾನ

ಮನೆಗೆ ನುಗ್ಗಿ ವೃದ್ಧೆ ಹತ್ಯೆ: ನಗದು, ಚಿನ್ನಾಭರಣ ದೋಚಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಜಯಶ್ರೀ (80) ಎಂಬುವರನ್ನು ಹತ್ಯೆ ಮಾಡಲಾಗಿದ್ದು, ನಗದು ಹಾಗೂ ಚಿನ್ನಾಭರಣ ದೋಚಿಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ.

‘13ನೇ ಅಡ್ಡರಸ್ತೆಯ ನಿವಾಸಿ ಜಯಶ್ರೀ, ಒಂಟಿಯಾಗಿ ವಾಸವಿದ್ದರು. ಶುಕ್ರವಾರ ರಾತ್ರಿ ಮನೆಗೆ ನುಗ್ಗಿದ ಆರೋಪಿಗಳು ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ನಾಲ್ಕು ವಿಶೇಷ ತಂಡ ರಚಿಸಲಾಗಿದೆ’ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ ತಿಳಿಸಿದರು.

‘ಜಯಶ್ರೀ, ನಿವೃತ್ತ ಪೊಲೀಸ್ ಅಧಿಕಾರಿ ಶ್ರೀನಿವಾಸ್ ಅವರ ಪತ್ನಿ. ಕೆಲ ವರ್ಷಗಳ ಹಿಂದೆಯಷ್ಟೇ ಶ್ರೀನಿವಾಸ್ ತೀರಿಕೊಂಡಿದ್ದರು. ಅವರ ಮಗ, ಕಮ್ಮನಹಳ್ಳಿಯಲ್ಲಿ ಪ್ರತ್ಯೇಕವಾಗಿ ವಾಸವಿದ್ದಾರೆ. ಮಗಳು, ಕೆನಡಾದಲ್ಲಿದ್ದಾರೆ. ಜಯಶ್ರೀ ಅವರಿಗೆ ನಾಲ್ಕು ಮನೆಗಳಿದ್ದು, ಮೂರು ಮನೆಗಳನ್ನು ಬಾಡಿಗೆಗೆ ನೀಡಿದ್ದಾರೆ. ಕೆಳ ಮಹಡಿಯ ಮನೆಯಲ್ಲಿ ಒಂಟಿಯಾಗಿ ಅವರು ವಾಸವಿದ್ದರು.’



ಜಯಶ್ರೀ

‘ರಾತ್ರಿ 10 ಗಂಟೆಯಿಂದ 12 ಗಂಟೆ ಅವಧಿಯಲ್ಲಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಕೊಲೆ ಮಾಡಿರುವುದು ಗೊತ್ತಾಗಿದೆ. ಮಹಡಿಯಲ್ಲಿ ವಾಸವಿದ್ದ ನಿವಾಸಿಯೊಬ್ಬರು, ಮೆಟ್ಟಿಲು ಮೂಲಕ ತಮ್ಮ ಮನೆಗೆ ಹೊರಟಿದ್ದರು. ಜಯಶ್ರೀ ಮನೆ ಬಾಗಿಲು ತೆರೆದಿದ್ದನ್ನು ಗಮನಿಸಿ, ಇಣುಕಿ ನೋಡಿದ್ದರು. ಇದೇ ವೇಳೆಯೇ ಅವರಿಗೆ ಮೃತದೇಹ ಕಂಡಿತ್ತು. ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು’ ಎಂದು ಹೇಳಿದರು.

ಪರಿಚಯಸ್ಥರಿಂದಲೇ ಕೃತ್ಯ: ‘ನಗದು, ಚಿನ್ನಾಭರಣ ದೋಚುವ ಉದ್ದೇಶದಿಂದಲೇ ಜಯಶ್ರೀ ಅವರನ್ನು ಪರಿಚಯಸ್ಥರೇ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಜಯಶ್ರೀ ಅವರ ಬಳಿ ಕೆಲಸಕ್ಕಿದ್ದ ನೇಪಾಳದ ಭದ್ರತಾ ಸಿಬ್ಬಂದಿ ನಾಪತ್ತೆಯಾಗಿದ್ದು, ಆತನ ಮೇಲೆಯೇ ಸಂಶಯವಿದೆ’ ಎಂದು ಪೊಲೀಸರು ತಿಳಿಸಿದರು.

‘ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ. ಮನೆ ಕೆಲಸಗಾರರು ಹಾಗೂ ಸ್ಥಳೀಯರನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಹೇಳಿದರು.

ಪತಿ, ಪೊಲೀಸರಿಂದ ಕಿರುಕುಳ ಆರೋಪ

ಮಾಜಿ ಮೇಯರ್ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತಿ ಅನ್ವರ್ ಪಾಷಾ ಹಾಗೂ ಕೆ.ಆರ್. ಪುರ ಠಾಣೆ ಪೊಲೀಸರು ನನಗೆ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಮಾಜಿ ಮೇಯರ್ ಶಹತಾಜ್ ಬೇಗಂ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಡಿಯೊ ಸಂದೇಶ ಕಳುಹಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕುತ್ತಿಗೆಗೆ ಸೀರೆಯಿಂದ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಫೇಸ್‌ಬುಕ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿರುವ ಶಹತಾಜ್, ‘ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಮೋದಿ ಅವರೇ ಅನುಮತಿ ಕೊಡಿ. ಇಲ್ಲ, ನನಗೆ ರಕ್ಷಣೆ ಕೊಡಿ’ ಎಂದು ಹೇಳಿದ್ದಾರೆ.

‘ಪ್ರಾಮಾಣಿಕವಾಗಿ ಜನಸೇವೆ ಮಾಡುತ್ತಿದ್ದೇನೆ. ಸಂಬಂಧಿಕರೇ ಆದ ಅನ್ವರ್ ಪಾಷಾ ಜೊತೆ ನನ್ನ ಮದುವೆ ಮಾಡಿದ್ದರು. ಮದ್ಯ ವ್ಯಸನಿಯೂ ಆದ ಪತಿ, ಹಲವು ಯುವತಿಯರ ಜೊತೆ ಸಂಬಂಧವಿಟ್ಟುಕೊಂಡಿದ್ದಾರೆ. ಆಸ್ತಿ ಮೇಲೂ ಸಾಲ ಮಾಡಿ, ಬ್ಯಾಂಕ್‌ನಿಂದ ನೋಟಿಸ್ ಕೊಡಿಸಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. 2011ರಲ್ಲಿ ಪತ್ರಿಕೆಯೊಂದರಲ್ಲಿ ಜಾಹೀರಾತು ನೀಡಿ ತಲಾಖ್ ನೀಡಿದ್ದರು.’



ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಫೇಸ್‌ಬುಕ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿರುವ ಶಹತಾಜ್ ಬೇಗಂ

‘ತಲಾಖ್ ಪ್ರಶ್ನಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದೆ. ನನ್ನ ಪರ ತೀರ್ಪು ಬಂದಿತ್ತು. ಇಷ್ಟಾದರೂ ಪತಿಯ ಕಿರುಕುಳ ತಪ್ಪಿಲ್ಲ. ಕೆ.ಆರ್. ಪುರ ಠಾಣೆಗೆ ದೂರು ನೀಡಿದರೆ, ರಕ್ಷಣೆ ನೀಡಲು ಇನ್‌ಸ್ಪೆಕ್ಟರ್ ನಂದೀಶ್ ಹಣ ಕೇಳಿದರು. ಜೊತೆಗೆ ಠಾಣೆಯ ಪಿಎಸ್‌ಐ ಅನಿತಾ, ‘ನೀನು ಮಾಜಿ ಮಾತ್ರ. ಹೆಚ್ಚು ಮಾತನಾಡಬೇಡ’ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮದ್ಯ ಕುಡಿದು ಮನೆಗೆ ಬಂದಿದ್ದ ಕೆಲ ಪೊಲೀಸರು, ಸಂಬಂಧಿಕರ ಮೇಲೆ ಹಲ್ಲೆ ಸಹ ಮಾಡಿದ್ದಾರೆ’ ಎಂದು ಶಹತಾಜ್ ತಿಳಿಸಿದ್ದಾರೆ.

‘ಮಾಜಿ ರಾಜಕಾರಣಿಗಳು ಬದುಕಬಾರದೇ? ಮೋದಿ ಅವರೇ ನೀವು ಕೆಲ ವರ್ಷಗಳ ನಂತರ ಮಾಜಿ ಆಗುತ್ತೀರಿ, ಅವಾಗ ನಿಮಗೂ ಹೀಗೆಯೇ ಆದರೆ? ಪೊಲೀಸರು ಮಾತ್ರ ಸಾರ್ವಭೌಮರೇ? ನನಗಾದ ಅನ್ಯಾಯದ ಬಗ್ಗೆ ವೈಟ್‌ಫೀಲ್ಡ್ ಡಿಸಿಪಿ ಗಿರೀಶ್ ಅವರಿಗೂ ತಿಳಿಸಿದ್ದೇನೆ. ಆದರೂ ನ್ಯಾಯ ಸಿಗಲಿಲ್ಲ’ ಎಂದೂ ಹೇಳಿದ್ದಾರೆ.

ಪುಣೆ ರೇಸ್

ಐರನ್ ಏಜ್ ಗೆಲ್ಲುವ ನಿರೀಕ್ಷೆ

ಅಕ್ಕಸಾಹೇಬ್ ಮಹಾರಾಜ್ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಏಜ್ ಈ ರೇಸ್‌ನಲ್ಲಿ ಗೆಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಂಪೇನ್ 3, ಬೀಮರ್ 1, ಪವರ್ ಆಫ್ ಥೋರ್ 4
2ನೇ ರೇಸ್: ಆರ್ಕ್ ಡೆ ಟ್ರಿಯಾಂಪ್ 5, ಕಮಿಲಾ 1, ಬೋಲ್ಡ್ ಲೆಜೆಂಡ್ 2
3ನೇ ರೇಸ್: ಸೂಪರ್‌ಲೇಟಿವ್ 6, ಎಕ್ಸಲೇಟರ್ 4, ಸೆಲ್ಲಿನಿ 1
4ನೇ ರೇಸ್: ಥನ್‌ಬರ್ಗ್ 8, ಫಿಯರಿ ರೆಡ್ 5, ಲಿಬರೇಷನ್ 7
5ನೇ ರೇಸ್: ದಿ ಅವೇಕನಿಂಗ್ 8, ಬರ್ಕಿನ್ ಬ್ಲೋವರ್ 2, ಲಾರ್ಡ್ ವೇಡರ್ 5
6ನೇ ರೇಸ್: ಐರನ್ ಏಜ್ 2, ಎನಿಗ್ಮಾ 1, ಜೋಅಕ್ವಿನ್ 7
7ನೇ ರೇಸ್: ಮೆಜೆಸ್ಟಿಕ್ ವಾರಿಯರ್ 2, ಸಿಫರ್ 5, ಬ್ಲೇಜಿಂಗ್ ಬೇ 3
8ನೇ ರೇಸ್: ಸೆನ್ಸಿಬಿಲಿಟಿ 5, ಎಮ್ರೀಸ್ 8, ಸಿಮ್ ಸಿಮ್ 7

ಉತ್ತಮ ಬೆಟ್: ಥನ್‌ಬರ್ಗ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಕದ್ದ ಬೈಕ್‌ನಲ್ಲಿ ಸುತ್ತಾಟ: ಡೆಲಿವರಿ ಬಾಯ್ ವಶಕ್ಕೆ

ಬೆಂಗಳೂರು: ಹೀರೊ ಹೋಂಡಾ ಸ್ಪ್ಲೆಂಡರ್ ಬೈಕ್ ಕದ್ದು, ಅದರಲ್ಲೇ ಆಹಾರ ಪೂರೈಕೆ ಮಾಡುತ್ತಿದ್ದ ಡೆಲಿವರಿ ಬಾಯ್ ಒಬ್ಬರನ್ನು ಕೆ.ಆರ್. ಪುರ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದರು. ಇದೇ ವೇಳೆಯೇ ಡೆಲಿವರಿ ಬಾಯ್ ಮೊಬೈಲ್‌ನಲ್ಲಿ ಮಾತನಾಡುತ್ತ ಬೈಕ್ ಚಲಾಯಿಸಿಕೊಂಡು ಹೊರಟಿದ್ದರು. ಅದನ್ನು ಗಮನಿಸಿದ್ದ ಸಿಬ್ಬಂದಿ ತಡೆದು ನಿಲ್ಲಿಸಿ ವಾಹನಗಳ ದಾಖಲೆ ಪರಿಶೀಲನೆ ನಡೆಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಡೆಲಿವರಿ ಬಾಯ್ ಬಳಿ ಸೂಕ್ತ ದಾಖಲೆಗಳು ಇರಲಿಲ್ಲ. ಬೈಕ್ ನೋಂದಣಿ ಸಂಖ್ಯೆ ಆಧರಿಸಿ ಮಾಹಿತಿ ಸಂಗ್ರಹಿಸಲಾಗಿತ್ತು. ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಕದ್ದಿದ್ದ ಬೈಕ್ ಎಂಬುದು ಗೊತ್ತಾಗಿದೆ. ಡೆಲಿವರಿ ಬಾಯ್‌ನನ್ನು ವಶಕ್ಕೆ ಪಡೆದು ಸಂಬಂಧಪಟ್ಟ ಠಾಣೆ ಪೊಲೀಸರ ಸುಪರ್ದಿಗೆ ನೀಡಲಾಗಿದೆ’ ಎಂದೂ ತಿಳಿಸಿವೆ.

‘ಬೈಕ್ ಯಾರದ್ದು? ಅದನ್ನು ಹೇಗೆ ಕದ್ದರು ? ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ಹೇಳಿವೆ.

10ನೇ ಮಹಡಿಯಲ್ಲಿ ಪಾರ್ಟಿ: ಆಯತಪ್ಪಿ ಬಿದ್ದು ಸಾವು

ಬೆಂಗಳೂರು: ಬೆಳ್ಳಂದೂರು ಠಾಣೆ ವ್ಯಾಪ್ತಿಯ ವಸತಿ ಸಮುಚ್ಚಯವೊಂದರ 10ನೇ ಮಹಡಿಯಿಂದ ಬಿದ್ದು ತ್ರಿದೀಪ್ ಕೋನ್ವಾರ್ (28) ಎಂಬುವರು ಶನಿವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

‘ಅಸ್ಸಾಂನ ತ್ರಿದೀಪ್ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬೆಳ್ಳಂದೂರಿನ ಗ್ರೀನ್ ಗ್ಲೇನ್ ಬಡಾವಣೆಯಲ್ಲಿರುವ ಶೋಭಾ ಡಾಲಿಯಾ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದರು’ ಎಂದು ಪೊಲೀಸರು ಹೇಳಿದರು.

‘ಶುಕ್ರವಾರ ರಾತ್ರಿ ಪಾರ್ಟಿ ಮಾಡಲೆಂದು ತ್ರಿದೀಪ್ ಮನೆಯಿಂದ ಹೊರಗೆ ಹೋಗಿದ್ದರು. ಪಾರ್ಟಿ ಮುಗಿಸಿ ತಡರಾತ್ರಿ ಅಪಾರ್ಟ್‌ಮೆಂಟ್‌ಗೆ ವಾಪಸು ಬಂದಿದ್ದರು. ಇದೇ ಸಂದರ್ಭದಲ್ಲೇ ಕೆಲ ನಿವಾಸಿಗಳು, 10ನೇ ಮಹಡಿಯಲ್ಲೂ ಮದ್ಯದ ಪಾರ್ಟಿ ಮಾಡುತ್ತಿದ್ದರು.’

‘ಪಾರ್ಟಿಯಲ್ಲಿ ಪಾಲ್ಗೊಳ್ಳುವಂತೆ ತ್ರಿದೀಪ್ ಅವರನ್ನು ನಿವಾಸಿಗಳು ಆಹ್ವಾನಿಸಿದ್ದರು. ಅದಕ್ಕೆ ಒಪ್ಪಿದ್ದ ತ್ರಿದೀಪ್, 10ನೇ ಮಹಡಿಗೆ ಹೋಗಿದ್ದರು. ಮದ್ಯ ಕುಡಿದಿದ್ದ ಅವರು, ಅದರ ಅಮಲಿನಲ್ಲೇ ಮಹಡಿಯಲ್ಲಿ ಓಡಾಡುತ್ತಿದ್ದರು. ಇದೇ ವೇಳೆಯಲ್ಲೇ ಆಯತಪ್ಪಿ ನೆಲಮಹಡಿಗೆ ಬಿದ್ದು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ಹೇಳಿದರು.

ನಕಲಿ ನೋಂದಣಿ ಫಲಕ: ಡಾಟಾ ಎಂಟ್ರಿ ಆಪರೇಟರ್ ವಶಕ್ಕೆ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ನಕಲಿ ನೋಂದಣಿ ಫಲಕ ಅಳವಡಿಸಿಕೊಂಡು ಸುತ್ತಾಡುತ್ತಿದ್ದ ಆರೋಪಿ ರಾಮ್ ಗೋಪಾಲ್ ಎಂಬುವರನ್ನು ಮಾಗಡಿ ರಸ್ತೆ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಚೋಳರಪಾಳ್ಯ ನಿವಾಸಿ ರಾಮ್‌ಗೋಪಾಲ್, ಕಂಪನಿಯೊಂದರಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ಬದ್ರಿಪ್ರಸಾದ್ ಎಂಬುವರ ಹೆಸರಿನಲ್ಲಿ ನೋಂದಣಿ ಹಾಕಿದ್ದ ಸಂಖ್ಯೆಯನ್ನು ತಮ್ಮ ವಾಹನಕ್ಕೆ ಅಳವಡಿಸಿಕೊಂಡು ಆರೋಪಿ ಸುತ್ತಾಡುತ್ತಿದ್ದ’ ಎಂದು ಸಂಚಾರ ಪೊಲೀಸ್ ಮೂಲಗಳು ಹೇಳಿವೆ.

‘ಮಾಗಡಿ ರಸ್ತೆಯಲ್ಲಿ ಆರೋಪಿ ವಾಹನ ತಡೆದು ಪರಿಶೀಲಿಸಲಾಗಿತ್ತು. ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಿತ್ತು. ಅಸಲಿ ಮಾಲೀಕ ಬದ್ರಿಪ್ರಸಾದ್ ಅವರನ್ನು ಪತ್ತೆ ಮಾಡಿ, ಅವರ ದಾಖಲೆ ಪರಿಶೀಲಿಸಲಾಯಿತು. ಅವಾಗಲೇ ರಾಮ್‌ಗೋಪಾಲ್ ಕೃತ್ಯ ಬಯಲಾಯಿತು. ಈತನ ಕೃತ್ಯದ ವಿರುದ್ಧ ಮಾಲೀಕರು ಕೆ.ಪಿ. ಅಗ್ರಹಾರ ಠಾಣೆಗೆ ದೂರು ನೀಡಿದ್ದಾರೆ. ಅಲ್ಲಿಯ ಪೊಲೀಸರ ಸುಪರ್ದಿಗೆ ಆರೋಪಿಯನ್ನು ಒಪ್ಪಿಸಲಾಗಿದೆ’ ಎಂದೂ ತಿಳಿಸಿವೆ.

₹ 11 ಸಾವಿರ ದಂಡ: ‘ತಮ್ಮ ದ್ವಿಚಕ್ರ ವಾಹನ ಕಳ್ಳತನವಾಗಿರುವುದಾಗಿ ಹೇಳಿ ಸಿಟಿ ಮಾರ್ಕೆಟ್ ಠಾಣೆಗೆ 2018ರಲ್ಲಿ ದೂರು ನೀಡಿದ್ದ ಆರೋಪಿ ರಾಮ್‌ಗೋಪಾಲ್, ವಿಮೆ ಸಹ ಡ್ರಾ ಮಾಡಿಕೊಂಡಿದ್ದರು. 2018ರಲ್ಲಿ ದ್ವಿಚಕ್ರ ವಾಹನ ಪತ್ತೆಯಾಗಿತ್ತು. ಈ ವಿಷಯವನ್ನು ಮುಚ್ಚಿಟ್ಟಿದ್ದ ಆರೋಪಿ, ಅದೇ ವಾಹನಕ್ಕೆ ನಕಲಿ ನೋಂದಣಿ ಫಲಕ ಹಾಕಿಕೊಂಡಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ, ಹಲವು ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ. ₹ 11 ಸಾವಿರ ದಂಡ ವಾಹನದ ಮೇಲಿತ್ತು. ನೋಂದಣಿ ಸಂಖ್ಯೆ ಆಧರಿಸಿ ಅಸಲಿ ಮಾಲೀಕ ಬದ್ರಿಪ್ರಸಾದ್ ಅವರಿಗೆ ಪೊಲೀಸರು ದಂಡದ ನೋಟಿಸ್ ಕಳುಹಿಸಿದ್ದರು’ ಎಂದೂ ತಿಳಿಸಿವೆ.

ಪತ್ನಿ ಕತ್ತು ಕೊಯ್ದು ಕೊಲೆ: ಪತಿ ಬಂಧನ

ಹೊಳೆನರಸೀಪುರ (ಹಾಸನ): ತಾಲ್ಲೂಕಿನ ತಟ್ಟೇಕೆರೆ ಗ್ರಾಮದ ಶಿವಕುಮಾರ ಎಂಬುವರು ಇಲ್ಲಿನ ನ್ಯಾಯಾಲಯದ ಹೊರ ಆವರಣದ ಶೌಚಾಲಯದಲ್ಲಿ ಶನಿವಾರ ಪತ್ನಿ ಚೈತ್ರಾ (24) ಅವರ ಕತ್ತು ಕೊಯ್ದು ಕೊಲೆ ಮಾಡಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಅವ್ವಾರಹಳ್ಳಿಯ ಚೈತ್ರಾ ಹಾಗೂ ಶಿವಕುಮಾರ 6 ವರ್ಷಗಳ ಹಿಂದೆ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. 3 ವರ್ಷಗಳಿಂದ ದಂಪತಿ ನಡುವೆ ಜಗಳ ನಡೆಯುತ್ತಿತ್ತು. ವಿಚ್ಛೇದನ ಬಯಸಿ ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನಕ್ಕಾಗಿ ಅರ್ಜಿ ಸಲ್ಲಿಸಿದ್ದರು.

ಇಲ್ಲಿನ ನ್ಯಾಯಾಲಯದಲ್ಲಿ ಶನಿವಾರ ವಿಚಾರಣೆ ನಡೆಸಿ ಮುಂದಿನ ದಿನಾಂಕ ನೀಡಲಾಗಿತ್ತು. ಮಧ್ಯಾಹ್ನ 12.30ರ ಸುಮಾರಿಗೆ ನ್ಯಾಯಾಲಯದಿಂದ ಹೊರಗೆ ಬಂದ ಚೈತ್ರಾ, ತನ್ನ ಎರಡು ವರ್ಷದ ಪುತ್ರಿಯೊಂದಿಗೆ ಶೌಚಾಲಯಕ್ಕೆ ಹೋಗಿದ್ದರು. ಅವರನ್ನು ಹಿಂಬಾಲಿಸಿದ ಶಿವಕುಮಾರ ಪತ್ನಿಯ ಕತ್ತು ಕೊಯ್ದು ಓಡಿ ಹೋಗುತ್ತಿದ್ದಾಗ ಪೊಲೀಸರು ಬಂಧಿಸಿದರು.

ಚೈತ್ರಾ ಅವರಿಗೆ ಇಲ್ಲಿನ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅಸುನೀಗಿದರು.



ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಜಿನೇಂದ್ರ ಖಣಗಾವಿ, ಪ್ರಾಂಶುಪಾಲರಾದ ಡಾ.ಪದ್ಮಿನಿ ನಾಗರಾಜು ಇದ್ದರು

‘ಕನಸುಗಳ ಬೆನ್ನತ್ತಿ’

ಬೆಂಗಳೂರು: ‘ಪದವಿ ಪಡೆಯುವುದಷ್ಟೇ ವಿದ್ಯಾರ್ಥಿಗಳ ಗುರಿಯಾಗಬಾರದು. ಉನ್ನತ ಹುದ್ದೆಗಳಿಗಾಗಿ ದೊಡ್ಡ ಕನಸುಗಳ ಬೆನ್ನುಹತ್ತಬೇಕು. ಅದಕ್ಕಾಗಿ ಶ್ರಮಪಡಬೇಕು’ ಎಂದು ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಜಿನೇಂದ್ರ ಖಣಗಾವಿ ಸಲಹೆ ನೀಡಿದರು.

ರಾಣಿ ಸರಳಾದೇವಿ ಪಿಯು ಹಾಗೂ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಜಾಣ್ಮೆಯನ್ನು ಪದವಿ ಹಂತದಿಂದಲೇ ಮೈಗೂಡಿಸಿಕೊಳ್ಳಬೇಕು. ಯುಪಿಎಸ್‌ಸಿ, ಕೆಪಿಎಸ್‌ಸಿ ಪರೀಕ್ಷೆಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಬರೆಯಬೇಕು. ಶ್ರಮಪಟ್ಟರೆ ಸರ್ಕಾರದ ಇಂತಹ ಉನ್ನತ ಹುದ್ದೆ ದೊರೆಯುತ್ತದೆ. ಅಂತಹ ಆಸೆ ಕೈಗೂಡಿಸಿಕೊಳ್ಳಲು ನಿತ್ಯವೂ ತಮ್ಮ ಸುತ್ತಮುತ್ತಲ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಬೇಕು’ ಎಂದು ಕಿವಿಮಾತು ಹೇಳಿದರು.

ಉತ್ತರ ಕರ್ನಾಟಕ: ನಿರ್ಜೀವವಾದ ಟ್ರಸ್ಟ್‌ಗಳು!

● ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಕೋವಿಡ್ ಜನರ ಆರೋಗ್ಯದ ಮೇಲಷ್ಟೇ ಅಲ್ಲ, ಸಾಂಸ್ಕೃತಿಕ ವಲಯದ ಮೇಲೂ ಗದಾಪ್ರಹಾರ ಮಾಡಿತ್ತು. ಎರಡು ವರ್ಷಗಳವರೆಗೆ ಬಹುತೇಕ ಚಟುವಟಿಕೆಗಳು ನಿಸ್ತೇಜಗೊಂಡಿದ್ದವು. ಈಗ, ಲಸಿಕಾಕರಣದಿಂದ ಜನರ ಆರೋಗ್ಯವೇನೋ ಸುಧಾರಿಸಿದೆ. ಆದರೆ, ಸಾಹಿತ್ಯಿಕ ಚಟುವಟಿಕೆಗಳಲ್ಲಿ ಚೇತರಿಕೆ ಕಾಣುತ್ತಿಲ್ಲ. ಕನ್ನಡ ಭಾಷೆ, ಸಾಹಿತ್ಯ ಚಟುವಟಿಕೆ ಹಮ್ಮಿಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ರಚನೆಯಾಗಿರುವ ರಾಜ್ಯದ ಹಲವು ಟ್ರಸ್ಟ್‌ಗಳ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

ಈಗ ಟ್ರಸ್ಟ್‌ಗಳು ಮೈಕೊಡವಿಕೊಂಡು ನಿಲ್ಲಬೇಕೆನ್ನುವಾಗ ಸರ್ಕಾರ ನೆರವಿಗೆ ಬರುತ್ತಿಲ್ಲ. ಅಷ್ಟೇ ಅಲ್ಲದೇ, ಹಿಂದಿನ ವರ್ಷಗಳಲ್ಲಿ ನೀಡುತ್ತಿದ್ದ ಅನುದಾನಕ್ಕೂ ಕತ್ತರಿ ಹಾಕಿದೆ. ಕೋವಿಡ್‌ಗಿಂತ ಮೊದಲು ₹ 12 ಲಕ್ಷದಿಂದ ₹ 15 ಲಕ್ಷ ಅನುದಾನ ಬರುತ್ತಿತ್ತು. ಈಗ ಕೇವಲ ₹ 2ಲಕ್ಷದಿಂದ ₹ 8 ಲಕ್ಷದವರೆಗೆ ಮಾತ್ರ ಬರುತ್ತಿದೆ. ಈ ಅನುದಾನದಲ್ಲಿ ಡಿಟಿಪಿ ಆಪರೇಟರ್, ವಾಚಮನ್, ಡಿ ಗ್ರೂಪ್ ಸಿಬ್ಬಂದಿಗೆ ಸಂಬಳ ನೀಡಿ ಉಳಿಯುವ ಹಣದಲ್ಲಿ ಕಾರ್ಯಕ್ರಮ ಮಾಡುವುದು ಕಷ್ಟವಾಗುತ್ತಿದೆ ಎನ್ನುವುದು ಬಹುತೇಕ ಟ್ರಸ್ಟ್‌ಗಳ ಸದಸ್ಯರ ಅಳಲು.

ಪ್ರಶಸ್ತಿ ನಿಲ್ಲಿಸಲು ಚಿಂತನೆ: ಅನುದಾನ ಕೊರತೆಯಿಂದಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆನಂದಕಂದ ಅವರ ಸಮಗ್ರ ಸಾಹಿತ್ಯ ಪ್ರಕಟಿಸಲು ಕಳೆದ 6–7 ವರ್ಷಗಳಿಂದ ವಿಶೇಷ ಅನುದಾನ ಕೋರಿದ್ದರೂ ಇದುವರೆಗೆ ಒಂದು ಪೈಸೆಯೂ ಬಂದಿಲ್ಲ. ಆನಂದಕಂದ ಕಾವ್ಯ– ಕಾವ್ಯಾರ್ಥ ಚಿಂತನ– ಎರಡು ದಿನ ಕಾರ್ಯಾಗಾರ ಮೂರು ವರ್ಷದ ನಂತರ ನಡೆದಿಲ್ಲ.

ಟ್ರಸ್ಟ್‌ಗಳು ಹೆಚ್ಚು ಕ್ರಿಯಾಶೀಲವಾಗಿಲ್ಲ. ಎಂ.ಎಂ. ಕಲಬುರ್ಗಿ ಅವರು ಬಸವರಾಜ ಕಟ್ಟಿಮನಿ ಟ್ರಸ್ಟ್ ಅಧ್ಯಕ್ಷರಾಗಿದ್ದಾಗ ಹಮ್ಮಿಕೊಂಡಂತಹ ಕಾರ್ಯಕ್ರಮಗಳು ಈಗ ಯಾವ ಟ್ರಸ್ಟ್‌ನಲ್ಲೂ ನಡೆಯುತ್ತಿಲ್ಲ. ಟ್ರಸ್ಟ್‌ಗಳು ನೀಡುವ ಪುರಸ್ಕಾರ, ಪ್ರಶಸ್ತಿಗಳಲ್ಲಿ ಪಾರದರ್ಶಕತೆ ಇಲ್ಲ. ಆಯ್ಕೆ ಮಾನದಂಡದ ಬಗ್ಗೆಯೇ ಅನುಮಾನವಿದೆ. ಕೆಲವು ಟ್ರಸ್ಟ್‌ಗಳಿಗೆ ಸಾಹಿತ್ಯದ ಗಂಧ–ಗಾಳಿ ಗೊತ್ತಿಲ್ಲದವರನ್ನು ಸದಸ್ಯರನ್ನಾಗಿ ಸರ್ಕಾರ ನೇಮಕ ಮಾಡಿದೆ. ಕೆಲವು ಟ್ರಸ್ಟ್‌ಗಳ ಸದಸ್ಯರು ಹಲವು ವರ್ಷಗಳಿಂದ ಮುಂದುವರಿದಿದ್ದಾರೆ. ಅವರೇನು ಆಜೀವ ಸದಸ್ಯರೇ? ಅವರನ್ನೇಕೆ ಸರ್ಕಾರ ಬದಲಾಯಿಸಲ್ಲ.

ಡಿ.ಎಸ್. ಚೌಗುಲೆ, ನಾಟಕಕಾರ

‘ಅನುದಾನ ಬಿಡುಗಡೆ ಮಾಡಲಿಲ್ಲ ವೆಂದರೆ ವಾರ್ಷಿಕ ಪ್ರಶಸ್ತಿ ಕೊಡುವುದನ್ನು ನಿಲ್ಲಿಸುವುದು ಅನಿವಾರ್ಯವಾಗಲಿದೆ’ ಎಂದು ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ ಪಾಟೀಲ ಪ್ರತಿಕ್ರಿಯಿಸಿದರು.

ಇದೇ ಸ್ಥಿತಿ ಹಾವೇರಿಯ ವಿ.ಕೃ.ಗೋಕಾಕ ಟ್ರಸ್ಟ್‌ದ್ದಾಗಿದೆ. ಗೋಕಾಕ ಅವರ ಸ್ವಗ್ರಾಮ ಸವಣೂರಿನಲ್ಲಿ ಸಭಾಭವನ, ಮ್ಯೂಸಿಯಂ ಹಾಗೂ ಗ್ರಂಥಾಲಯ ನಿರ್ಮಾಣ ಕಾರ್ಯ ನಿಧಾನಗತಿಯಲ್ಲಿ ಸಾಗಿದೆ ಎನ್ನುತಾರೆ ಟ್ರಸ್ಟ್ ಸದಸ್ಯ ಸತೀಶ ಕುಲಕರ್ಣಿ.


ಹಾವೇರಿಯ ವೀರಸೌಧ ಎದುರು ಸ್ವಾತಂತ್ರ್ಯಯೋಧರ ಮ್ಯೂಸಿಯಂ ಕಟ್ಟಡ ನಿರ್ಮಾಣವಾಗಿದ್ದು, ಒಳಾಂಗಣ ವಿನ್ಯಾಸ ಬಾಕಿ ಉಳಿದಿದೆ. ಇದಕ್ಕಾಗಿ ಬಂದಿದ್ದ ₹ 2.5 ಕೋಟಿ ಅನುದಾನ ಸರ್ಕಾರಕ್ಕೆ ವಾಪಸ್ ಹೋಗಿದೆ. ಇದನ್ನು ಮರಳಿಸುವಂತೆ ಸರ್ಕಾರಕ್ಕೆ ಕೋರಿದ್ದೇವೆ ಎಂದು ಮೈಲಾರ ಮಹದೇವ ಟ್ರಸ್ಟ್ ಸದಸ್ಯ ವಿ.ಎನ್. ತಿಪ್ಪಣ್ಣಗೌಡ ಹೇಳಿದರು.

ಬಾಕಿ ಹಣದಲ್ಲಿ ಕಾರ್ಯಕ್ರಮ: ಹಿಂದಿನ ವರ್ಷಗಳ ಅನುದಾನದಲ್ಲಿ ಉಳಿದಿದ್ದ ಹಣದಲ್ಲಿ ಕಾರ್ಯಕ್ರಮ ಮಾಡಿದ್ದೇವೆ. ಕೋವಿಡ್ ಸಂದರ್ಭದಲ್ಲಿ 2 ಆನ್‌ಲೈನ್ ಕಾರ್ಯಕ್ರಮ ಮಾಡಿದ್ದೇವೆ. ಅನುದಾನದ ಕೊರತೆಯಿಂದ ಸಂವಾದ, ವಿಚಾರ ಸಂಕಿರಣ, ಪುಸ್ತಕ ಪ್ರಕಟಿಸಲು ಸಾಧ್ಯವಾಗಿಲ್ಲ. ಕಿತ್ತೂರು ಸಂಸ್ಥಾನದ ದಾಖಲೆಗಳನ್ನು ಸಂಗ್ರಹಿಸುವ ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಾಗಿದೆ. ಮೊದಲ ಸಂಪುಟ ಪ್ರಕಟವಾಗಿದೆ. ಎರಡನೇ ಸಂಪುಟ ಮುದ್ರಣ ಹಂತದಲ್ಲಿದೆ ಎಂದು ಬಸವರಾಜ ಕಟ್ಟಿಮನಿ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಹೇಳಿದರು.

ಮಧುರ ಚೆನ್ನ, ಸಿಂಪಿ ಲಿಂಗಣ್ಣ, ಪಿ.ದುಲ್ಲಾಸಾಹೇಬ ಹಾಗೂ ಕಾಪಸೆ ರೇವಪ್ಪ ಸಾಹಿತ್ಯಗಳ ಕುರಿತು ಚಟುವಟಿಕೆ ನಡೆಸಲು ವಿಜಯಪುರದಲ್ಲಿ ಹಲಸಂಗಿ ಗೆಳೆಯರ ಪ್ರತಿಷ್ಠಾನವಿದೆ. ಅನುದಾನದ ಕೊರತೆಯಿಂದಾಗಿ ಪ್ರತ್ಯೇಕ ಕಟ್ಟಡ ನಿರ್ಮಾಣ ಇನ್ನೂ ಆಗಿಲ್ಲ. ಸರ್ಟಿಫಿಕೇಟ್ ಕೋರ್ಸ್/ ಡಿಪ್ಲೊಮಾ ಕೋರ್ಸ್ ಮಾಡುವ ಯೋಜನೆ ಇನ್ನೂ ಕಾರ್ಯಗತಗೊಂಡಿಲ್ಲ.

ಬಾಗಲಕೋಟೆಯ ಮುಧೋಳದ ಕವಿ ಚಕ್ರವರ್ತಿ ರನ್ನ ಫೌಂಡೇಷನ್ ಟ್ರಸ್ಟ್‌ನಲ್ಲಿಯೂ ಮೊದಲಿನಂತೆ ಚಟುವಟಿಕೆಗಳಾಗುತ್ತಿಲ್ಲ. ರನ್ನನ ಜನ್ಮಸ್ಥಳದ ಅಧ್ಯಯನ, ಸಾಹಿತ್ಯ ಸಂಗ್ರಹ, ನಾಟಕವಾಡಿಸುವ ಕಾರ್ಯಕ್ರಮಗಳು ಬಹುತೇಕ ನಿಂತೇಹೋಗಿವೆ ಎಂದು ಟ್ರಸ್ಟ್ ಮಾಜಿ ಸದಸ್ಯ ವೈ.ಎಚ್. ಕಾತರಕಿ ಹೇಳಿದರು.

ಪುಸ್ತಕ ಪ್ರಕಟಣೆಗೆ ಹಿನ್ನಡೆ: ಕೋವಿಡ್ ಸಂದರ್ಭದಲ್ಲಿಯೂ ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ ಸತತ ವೆಬಿನಾರ್‌ಗಳನ್ನು ಆಯೋಜಿಸಲಾಗಿತ್ತು. ಇದುವರೆಗೆ 17 ಸಂಶೋಧನಾ ಗ್ರಂಥಗಳನ್ನು ಹಾಗೂ ಶತಮಾನದ ಕವಿ ಬೇಂದ್ರೆ ಪುಸ್ತಕ ಪ್ರಕಟಿಸಲಾಗಿದೆ. ಬೇಂದ್ರೆ ನಾಟಕ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆ ರೂಪಿಸಲಾಗಿದ್ದು, ಅನುದಾನದ ಕೊರತೆಯಿಂದಾಗಿ ಸ್ಥಗಿತಗೊಂಡಿದೆ ಎಂದು ಟ್ರಸ್ಟ್ ಅಧ್ಯಕ್ಷ ಡಿ.ಎಂ. ಹಿರೇಮಠ ಹೇಳಿದರು.



ಉಡುಪಿ ಜಿಲ್ಲೆ ಕೋಟದಲ್ಲಿರುವ ಡಾ.ಶಿವರಾಮ ಕಾರಂತ ಥೀಮ್ ಪಾರ್ಕ್

ಕಾರಂತ ಟ್ರಸ್ಟ್: ಉಡುಪಿಯಲ್ಲಿ ಚುರುಕು

ಮಂಗಳೂರು: ಡಾ.ಶಿವರಾಮ ಕಾರಂತರ ಹೆಸರಿನಲ್ಲಿ ಪುತ್ತೂರಿನಲ್ಲಿ ಆರಂಭಿಸಿದ್ದ ‘ಡಾ. ಶಿವರಾಮ ಕಾರಂತ ಬಾಲವನ ಅಭಿವೃದ್ಧಿ ಸಮಿತಿ’ಯ ಇತ್ತೀಚಿನ ಕಾರ್ಯವೈಖರಿ ಬಗ್ಗೆ ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

ಸಮಿತಿಯ ಚಟುವಟಿಕೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬದಲು ಪುತ್ತೂರು ಉಪವಿಭಾಗಾಧಿಕಾರಿಯ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ. ಸಮಿತಿಯು ಒಂದಷ್ಟು ಜಾಗ, ಸ್ವಂತ ಕಟ್ಟಡ ಹಾಗೂ ಈಜುಕೊಳವನ್ನು ಹೊಂದಿರುವುದು ಮತ್ತು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದು ಇದಕ್ಕೆ ಕಾರಣ. ‘ಈ ಕಟ್ಟಡ ಹಾಗೂ ಈಜುಕೊಳದಿಂದ ಬರುವ ಆದಾಯದಿಂದ ಸಾಹಿತ್ಯಕ ಹಾಗೂ ರಂಗ ಚಟುವಟಿಕೆಗಳು ನಡೆಯುತ್ತಿವೆಯೇ ವಿನಾ ಇಲಾಖೆ ನೀಡುವ ಅನುದಾನವು ಸಿಬ್ಬಂದಿಯ ವೇತನ, ವಿದ್ಯುತ್ ಬಿಲ್, ಕಟ್ಟಡದ ನಿರ್ವಹಣೆಗೂ ಸಾಕಾಗಲಾರದು’ ಎಂಬುದನ್ನು ಅಧಿಕಾರಿಗಳೂ ಒಪ್ಪುತ್ತಾರೆ.

ಸಮಿತಿಯು ಈಚಿನ ದಿನಗಳಲ್ಲಿ ಜನರಿಂದ ದೂರವಾಗುತ್ತಿದೆ. ಇದಕ್ಕೆ ಆಡಳಿತ ಮಂಡಳಿ ಕೆಲವು ಸದಸ್ಯರ ನಡವಳಿಕೆ ಕಾರಣ ಎಂದು ಸ್ಥಳೀಯರು ದೂರುತ್ತಾರೆ. ಸಾಹಿತಿಗಳು, ಚಿಂತಕರು ಟ್ರಸ್ಟ್‌ನಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಚಟುವಟಿಕೆಗಳು ಕುಂಠಿತವಾಗುತ್ತಿವೆ ಎನ್ನುತ್ತಾರೆ ಸ್ಥಳೀಯರು.

‘ಈಜುಕೊಳ ಇರುವುದರಿಂದ ಸಮಿತಿಯ ಆವರಣಕ್ಕೆ ಜನರು ಬರುತ್ತಿದ್ದಾರೆ. ಬರೀ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮಿತಿಯು ಸೀಮಿತವಾಗಿದ್ದರೆ ಖಂಡಿತವಾಗಿಯೂ ಸ್ಥಳೀಯರ ನೆರವು ಸಿಗಲಾರದು’ ಎಂದು ಸಮಿತಿಯ ಸದಸ್ಯರೇ ಹೇಳುತ್ತಾರೆ.

ಇನ್ನೊಂದೆಡೆ, ಉಡುಪಿ ಜಿಲ್ಲೆಯ ಕೋಟದಲ್ಲಿರುವ ಶಿವರಾಮ ಕಾರಂತ ಟ್ರಸ್ಟ್, ಸತತವಾಗಿ ಚಟುವಟಿಕೆಗಳನ್ನು ನಡೆಸುತ್ತಿದೆ. ಕೋಟದ ಥೀಂ ಪಾರ್ಕ್‌ನಲ್ಲಿ ಪ್ರತಿ ತಿಂಗಳು ‘ಸಾಹಿತ್ಯ ಸಡಗರ’ ನಡೆಯುತ್ತಿವೆ.

2014ರಿಂದ ವಾರಾಂತ್ಯದ ಶಿಬಿರಗಳು ನಡೆಯುತ್ತಿದ್ದು ಮಕ್ಕಳಿಗೆ ಯಕ್ಷಗಾನ, ನೃತ್ಯ, ಭರತನಾಟ್ಯ, ಸಂಗೀತ ಹಾಗೂ ಯೋಗ ಕಲಿಸಲಾಗುತ್ತಿದೆ. ಕಾರಂತರ ಕುರಿತ ಪುಸ್ತಕಗಳನ್ನು ಮಕ್ಕಳಿಗೆ ಕೊಟ್ಟು ಚಿಣ್ಣರ ಚೇತನ, ಕಾರಂತ ಚೇತನ ಕಾರ್ಯಕ್ರಮಗಳ ಮೂಲಕ ಕಾರಂತಜ್ಜನನ್ನು ಪರಿಚಯಿಸುವ ಕಾರ್ಯ ನಡೆಯುತ್ತಿದೆ.

2005ರಿಂದ ಪ್ರತಿವರ್ಷ ಅ.1ರಿಂದ 10ವರೆಗೆ ಕಾರಂತ ಉತ್ಸವ ನಡೆಯುತ್ತದೆ. ಕಾರಂತರ ಜನ್ಮದಿನವಾದ ಅ.10ರಂದು ಸಾಧಕರಿಗೆ ರಾಜ್ಯಮಟ್ಟದ ಹುಟ್ಟೂರ ಪುರಸ್ಕಾರ ಪ್ರಶಸ್ತಿ ನೀಡಲಾಗುತ್ತಿದೆ. ಏಪ್ರಿಲ್ ಮೇ ತಿಂಗಳಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರ ನಡೆಯುತ್ತದೆ.

ಮಾಹಿತಿ: ಬಾಲಚಂದ್ರ ಎಚ್. (ಉಡುಪಿ), ಉದಯ ಯು. (ಮಂಗಳೂರು)

ಎಷ್ಟು ದಿನ ಆಗುತ್ತದೆಯೋ ಅಷ್ಟು ದಿನ ನಡೆಸುತ್ತೇವೆ: ಕಡಿದಾಳ್ ಪ್ರಕಾಶ್

‘ಎ’ ಗ್ರೇಡ್ ಮನ್ನಣೆ; ಅನುದಾನಕ್ಕೆ ಕಡೆಗಣನೆ

● ವೆಂಕಟೇಶ ಜಿ.ಎಚ್.

ಶಿವಮೊಗ್ಗ: ರಾಷ್ಟ್ರ ಕವಿ ಕುವೆಂಪು ಅವರ ವಿಶ್ವಮಾನವತೆ ಆಶಯಗಳನ್ನು ಪೋಷಿಸಿ ಬೆಳೆಸಲು ಕುಪ್ಪಳಿಯ ಕುವೆಂಪು ಪ್ರತಿಷ್ಠಾನ ರಚನೆಯಾಗಿದೆ. ಪ್ರತಿಷ್ಠಾನವು ಕುಪ್ಪಳಿಯ ಕವಿಮನೆ (ಮ್ಯೂಸಿಯಂ), ಶತಮಾನೋತ್ಸವ ಭವನ, ಕುವೆಂಪು ಸಮಾಧಿ ಸ್ಥಳ ಕವಿಶೈಲ, ಹಿರೇಕೂಡಿಗೆಯಲ್ಲಿರುವ ಕುವೆಂಪು ತಾಯಿ ಮನೆ (ಹುಟ್ಟಿದ ಮನೆ) ಹಾಗೂ ತೇಜಸ್ವಿ ಸ್ಮಾರಕಗಳ ನಿರ್ವಹಣೆ ಮಾಡುತ್ತಿದೆ.

ಸರ್ಕಾರದ ವಾರ್ಷಿಕ ನೆರವಿನ ಜೊತೆಗೆ ಪ್ರವೇಶ ಶುಲ್ಕ (ತಲಾ ₹ 10), ಕುವೆಂಪು ಪುಸ್ತಕಗಳ ಮಾರಾಟ, ದಾನಿಗಳ ನೆರವು ಪಡೆದು ದೈನಂದಿನ ಕಾರ್ಯಚಟುವಟಿಕೆ ನಿಭಾಯಿಸುತ್ತಿದೆ.

‘ಸರ್ಕಾರದ ಅನುದಾನದಲ್ಲಿ ಟ್ರಸ್ಟ್ ನಡೆಸಲು ಆಗದು. ಕಳೆದ ವರ್ಷ ನಮಗೆ ‘ಎ’ ಗ್ರೇಡ್ ನೀಡಿ ವಾರ್ಷಿಕ ₹ 15 ಲಕ್ಷ ಅನುದಾನ ಘೋಷಿಸಿದ್ದರು. ಮೊದಲ ಕಂತು ₹ 7.5 ಲಕ್ಷ ನೀಡಿದರು. ಎರಡನೇ ಕಂತನ್ನು ಕೊಡಲೇ ಇಲ್ಲ’ ಎಂದು ಪ್ರತಿಷ್ಠಾನದ ಅಧ್ಯಕ್ಷ ಕಡಿದಾಳ್ ಪ್ರಕಾಶ್ ಹೇಳುತ್ತಾರೆ.

‘ಇಲ್ಲಿರುವ 12 ಜನ ಸಿಬ್ಬಂದಿಯ ವೇತನಕ್ಕೆ ವಾರ್ಷಿಕ ₹ 16 ಲಕ್ಷ ಬೇಕಿದೆ. ಮೊದಲು ಮಾಡಿಕೊಂಡಿದ್ದ ಉಳಿತಾಯ ಈಗ ಖಾಲಿಯಾಗುತ್ತಾ ಬರುತ್ತಿದೆ. ಸರ್ಕಾರ ಕೊಡುವ ಹಣದಲ್ಲಿ ಮೂರು ತಿಂಗಳ ಅವಧಿಯ ನಿರ್ವಹಣೆಯೂ ಅಸಾಧ್ಯ. ಈ ವರ್ಷ (2022–23) ಏನೂ ಕೊಟ್ಟಿಲ್ಲ. ಎಷ್ಟು ದಿನ ಆಗುತ್ತದೋ ಅಷ್ಟು ದಿನ ನಡೆಸಿ ನಿಲ್ಲಿಸಬೇಕಾಗುತ್ತದೆ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಎಸ್.ನಿಜಲಿಂಗಪ್ಪ ಟ್ರಸ್ಟ್, ಚಿತ್ರದುರ್ಗ: ‘ಮೊದಲು ₹ 15 ಲಕ್ಷ, ನಂತರ ₹ 12 ಲಕ್ಷ, ಬಳಿಕ ₹ 10 ಲಕ್ಷ... ಹೀಗೆ ಒಂದೊಂದು ಪಕ್ಷದ ನೇತೃತ್ವದ ಸರ್ಕಾರ ಒಂದೊಂದು ರೀತಿ ಅನುದಾನ ಬಿಡುಗಡೆ ಮಾಡುತ್ತಿದೆ. ಈ ವರ್ಷ ಅದೂ ಇಲ್ಲ’ ಎಂದು ಚಿತ್ರದುರ್ಗದ ಎಸ್.ನಿಜಲಿಂಗಪ್ಪ ಟ್ರಸ್ಟ್‌ನ ಕಾರ್ಯದರ್ಶಿ ಷಣ್ಮುಖಪ್ಪ ಹೇಳುತ್ತಾರೆ.

‘ಈಗ ಟ್ರಸ್ಟ್‌ನ ನಿರ್ವಹಣೆ ಬಹಳ ಕಷ್ಟಕರವಾಗಿದೆ. ಐದು ಜನ ಸಿಬ್ಬಂದಿಗೆ ವೇತನ, ವಿದ್ಯುತ್ ಬಿಲ್ ಸೇರಿ ತಿಂಗಳಿಗೆ ಕನಿಷ್ಠ ₹ 50,000 ಬೇಕು. ರಾಜ್ಯದಲ್ಲಿ ಅತ್ಯಂತ ಚೆನ್ನಾಗಿ ನಡೆಯುತ್ತಿರುವ ಟ್ರಸ್ಟ್ ಎಂದು ಸರ್ಕಾರ ನಮಗೆ ಶಹಬ್ಬಾಸ್‌ಗಿರಿ ನೀಡಿದೆ. ಆದರೆ ನಾವು ಕೈಯಿಂದ ಖರ್ಚು ಮಾಡುತ್ತಿದ್ದೇವೆ’ ಎಂದು ಅವರು ತಿಳಿಸುತ್ತಾರೆ.



ಡಿವಿಜಿ ಪ್ರತಿಷ್ಠಾನ: ಕೋಲಾರದಲ್ಲಿರುವ ಡಿವಿಜಿ ಪ್ರತಿಷ್ಠಾನಕ್ಕೆ 2017–18ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿದ್ದೇ ಕೊನೆ. ಬಳಿಕ ಅನುದಾನ ಸಿಕ್ಕಿಲ್ಲ. ಪ್ರಸಕ್ತ ಸಾಲಿನಲ್ಲಿ ₹ 3 ಲಕ್ಷ ಬಿಡುಗಡೆ ಮಾಡುವುದಾಗಿ ಘೋಷಿಸಿದ್ದರೂ ಇದುವರೆಗೆ ಕೈಸೇರಿಲ್ಲ. 2013ರಲ್ಲಿ ಈ ಪ್ರತಿಷ್ಠಾನ ಆರಂಭಿಸಲಾಗಿದ್ದು, ಡಿ.ವಿ.ಗುಂಡಪ್ಪ ಅವರ ಸಾಹಿತ್ಯ ಪ್ರಚಾರ ಪಡಿಸುವುದು ಇದರ ಉದ್ದೇಶ.

ಡಾ.ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್: ಕೋಲಾರದಲ್ಲಿ ಡಾ.ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ ಸಕ್ರಿಯವಾಗಿದೆ. ಜೂನ್ 6ರಂದು ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಜಿಲ್ಲಾಡಳಿತದಿಂದ ಅದ್ದೂರಿಯಾಗಿ ಮಾಸ್ತಿ ಅವರ ಜನ್ಮದಿನ ಆಚರಿಸಲಾಯಿತು. 1997ರಲ್ಲಿ ಆರಂಭವಾದ ಟ್ರಸ್ಟ್‌ಗೆ ಈ ಬಾರಿ ₹ 4 ಲಕ್ಷ ಅನುದಾನ ಬಿಡುಗಡೆಯಾಗಿದೆ. ಯುವ ಕವಿ, ಮುದ್ರಕರು, ಪ್ರಕಾಶಕರನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ ‘ಮಾಸ್ತಿ ಪ್ರಶಸ್ತಿ’ ಕೊಡಮಾಡಲಾಗುತ್ತಿದೆ.

(ಪೂರಕ ಮಾಹಿತಿ: ಜಿ.ಬಿ.ನಾಗರಾಜ್, ಓಂಕಾರಮೂರ್ತಿ)

ರಾಜ್ಯದಲ್ಲಿರುವ ಸರ್ಕಾರಿ ಟ್ರಸ್ಟ್‌ಗಳು

ಟ್ರಸ್ಟ್	ಜಿಲ್ಲೆ	ಸ್ಥಾಪನೆಯಾದ ವರ್ಷ
ಡಾ.ದ.ರಾ.ಬೇಂದ್ರೆ ಸ್ಮಾರಕ ಟ್ರಸ್ಟ್	ಧಾರವಾಡ	1992
ಡಾ. ಮಲ್ಲಿಕಾರ್ಜುನ ಮನ್ಸೂರ ಟ್ರಸ್ಟ್	ಧಾರವಾಡ	1997
ಆಲೂರು ವೆಂಕಟರಾವ್ ಟ್ರಸ್ಟ್	ಧಾರವಾಡ	2009
ಡಾ. ಬಸವರಾಜ ರಾಜಗುರು ಟ್ರಸ್ಟ್	ಧಾರವಾಡ	2010
ಡಿ.ವಿ.ಹಾಲಭಾವಿ ಟ್ರಸ್ಟ್	ಧಾರವಾಡ	2013
ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್	ಕೋಲಾರ	1997
ಡಾ.ಡಿ.ವಿ.ಜಿ. ಪ್ರತಿಷ್ಠಾನ	ಕೋಲಾರ	2014
ಶಿವರಾಮ ಕಾರಂತರ ಬಾಲಭವನ ಅಭಿವೃದ್ಧಿ ಸಮಿತಿ	ದಕ್ಷಿಣ ಕನ್ನಡ	2002
ಶಿವರಾಮ ಕಾರಂತ ಟ್ರಸ್ಟ್	ಉಡುಪಿ	2002
ಬಸವರಾಜ ಕಟ್ಟಿಮನಿ ಪ್ರತಿಷ್ಠಾನ	ಬೆಳಗಾವಿ	2012
ಬೆಟಗೇರಿ ಕೃಷ್ಣ ಶರ್ಮ ಟ್ರಸ್ಟ್	ಬೆಳಗಾವಿ	2003
ವಿ.ಕೃ. ಗೋಕಾಕ ಪ್ರತಿಷ್ಠಾನ	ಹಾವೇರಿ	2008
ಮೈಲಾರ ಮಹಾದೇವ ಟ್ರಸ್ಟ್	ಹಾವೇರಿ	2011
ಗಳಗನಾಥ ಟ್ರಸ್ಟ್	ಹಾವೇರಿ	2015
ಡಾ.ಪು.ತಿ.ನ. ಟ್ರಸ್ಟ್	ಬೆಂಗಳೂರು	1997
ಡಾ. ಜಿ.ಎಸ್. ಶಿವರುದ್ರಪ್ಪ ಟ್ರಸ್ಟ್	ಬೆಂಗಳೂರು	2016
ನಿಜಲಿಂಗಪ್ಪ ಟ್ರಸ್ಟ್	ಚಿತ್ರದುರ್ಗ	2011
ಡಾ. ಗುಬ್ಬಿವೀರಣ್ಣ ಟ್ರಸ್ಟ್	ತುಮಕೂರು	2011
ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ	ಶಿವಮೊಗ್ಗ	1992
ಕವಿಚಕ್ರವರ್ತಿ ರನ್ನ ಪ್ರತಿಷ್ಠಾನ ಮುಧೋಳ,	ಬಾಗಲಕೋಟೆ	2017
ಪಿ.ಬಿ.ಧುತ್ತರಗಿ ಪ್ರತಿಷ್ಠಾನ	ಬಾಗಲಕೋಟೆ	2014
ಹಲಸಂಗಿ ಗೆಳೆಯರ ಬಳಗ ಟ್ರಸ್ಟ್	ವಿಜಯಪುರ	2013
ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್	ಮಂಡ್ಯ	2016
ಕೆ.ಪಿ. ಪೂರ್ಣಚಂದ್ರತೇಜಸ್ವಿ ಪ್ರತಿಷ್ಠಾನ	ಚಿಕ್ಕಮಗಳೂರು	2018

ನಾಮಬಲವೇ ಆಸ್ತಿ: ಕಾಯಕ ನಾಸ್ತಿ

ಒಂದನೇ ಪುಟದಿಂದ...

ತುಮಕೂರಿನಲ್ಲಿರುವ ಡಾ. ಗುಬ್ಬಿ ವೀರಣ್ಣ ಟ್ರಸ್ಟ್, ಕೋಲಾರದಲ್ಲಿರುವ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ಸೇರಿ ಕೆಲ ಟ್ರಸ್ಟ್‌ಗಳ ಅಧ್ಯಕ್ಷರು ಬೆಂಗಳೂರಿನಲ್ಲಿದ್ದುಕೊಂಡೇ ಕಾರ್ಯನಿರ್ವಹಿಸುತ್ತಿದ್ದಾರೆ. ಬಹುತೇಕ ಟ್ರಸ್ಟ್‌ಗಳ ಅಧ್ಯಕ್ಷರ ವಯಸ್ಸು 60 ದಾಟಿರುವುದರಿಂದ ಅನಾರೋಗ್ಯ ಸಮಸ್ಯೆಗಳು ಅವರನ್ನು ಕಾಡುತ್ತಿದ್ದು, ಪ್ರಯಾಣ ಕಷ್ಟಕರವಾಗಿದೆ. ಇದರಿಂದಾಗಿ ಟ್ರಸ್ಟ್‌ಗಳು ವರ್ಷಕ್ಕೆ ಒಂದೆರಡು ಕಾರ್ಯಕ್ರಮಗಳನ್ನು ಬೆಂಗಳೂರಿನಲ್ಲಿ ನಡೆಸಿ, ಕೈತೊಳೆದುಕೊಳ್ಳುತ್ತಿವೆ ಎಂಬ ಟೀಕೆಗಳೂ ಇದೆ.

ಕೆಲ ಟ್ರಸ್ಟ್‌ಗಳ ಪದಾಧಿಕಾರಿಗಳು ಖಾಸಗಿ ಸಂಘ–ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯರೂ ಆಗಿದ್ದಾರೆ. ಇದರಿಂದಾಗಿ ತಮ್ಮ ಅಥವಾ ಬೇರೆ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಿಗೆ ಸಹಯೋಗ ಕೊಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ ಎಂಬ ಆರೋಪಗಳೂ ಇವೆ.


ಪಾಲನೆಯಾಗದ ಆದೇಶ: ಟ್ರಸ್ಟ್, ಪ್ರತಿಷ್ಠಾನಗಳಿಗೆ ಅಧ್ಯಕ್ಷರು, ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ ಸರ್ಕಾರವು 2018ರಲ್ಲಿ ಮಾರ್ಗಸೂಚಿ ಹೊರಡಿಸಿತ್ತು. ಅಧ್ಯಕ್ಷರು ಹಾಗೂ ಸದಸ್ಯರ ಅಧಿಕಾರಾವಧಿ ಮೂರು ವರ್ಷ ಅಥವಾ ಮುಂದಿನ ಆದೇಶದವರೆಗೆ ನಿಗದಿಗೊಳಿಸುವುದು, ಯಾವುದು ಮೊದಲೋ ಅದನ್ನು ಪಾಲಿಸತಕ್ಕದ್ದು ಎಂದು ತಿಳಿಸಲಾಗಿತ್ತು. ಆದರೆ, ಈವರೆಗೂ ಯಾವುದೇ ಟ್ರಸ್ಟ್‌ನ ಅಧ್ಯಕ್ಷರನ್ನು ಸರ್ಕಾರ ಬದಲಾಯಿಸಿಲ್ಲ. ಆಜೀವ ಟ್ರಸ್ಟಿಗಳಂತೆ ಅವರನ್ನೇ ಮುಂದುವರಿಸಲಾಗಿದೆ.

ಪಠ್ಯಪುಸ್ತಕ ವಿಷಯದಲ್ಲಿ ಸರ್ಕಾರದ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನಕ್ಕೆ ಹಂ.ಪ. ನಾಗರಾಜಯ್ಯ ಹಾಗೂ ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನಕ್ಕೆ ಎಸ್.ಜಿ. ಸಿದ್ಧರಾಮಯ್ಯ ಅವರು ರಾಜೀನಾಮೆ ಘೋಷಿಸಿದ್ದರು. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷರಾಗಿದ್ದ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಐದು ವರ್ಷದ ಅವಧಿ ಪೂರ್ಣಗೊಂಡಿದ್ದರಿಂದ ಕಳೆದ ವರ್ಷ ರಾಜೀನಾಮೆ ನೀಡಿದ್ದರು. ಈ ರಾಜೀನಾಮೆಗಳು ಸರ್ಕಾರದ ಮಟ್ಟದಲ್ಲಿ ಅಂಗೀಕಾರವಾಗಿಲ್ಲ.

ಬಹುತೇಕ ಟ್ರಸ್ಟ್‌ಗಳು ಸ್ವಂತ ಕಚೇರಿ, ಭವನ ಹೊಂದಿಲ್ಲ. ಅನುದಾನಕ್ಕಾಗಿ ಸರ್ಕಾರವನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುವ ಗೋಜಿಗೂ ಟ್ರಸ್ಟ್‌ಗಳ ಪದಾಧಿಕಾರಿಗಳು ಹೋಗುತ್ತಿಲ್ಲ. ಸರ್ಕಾರಗಳು ಕೂಡ ಟ್ರಸ್ಟ್‌ಗಳಿಗೆ ಅನುದಾನ ನೀಡುವಲ್ಲಿ ಉದಾರತೆ ತೋರುತ್ತಿಲ್ಲ. ಇದಕ್ಕೆ ಅಪವಾದ ಎಂಬಂತೆ ಕುವೆಂಪು ಪ್ರತಿಷ್ಠಾನ, ದ.ರಾ.ಬೇಂದ್ರೆ ಸ್ಮಾರಕ ಟ್ರಸ್ಟ್ ಸೇರಿ ಕೆಲ ಟ್ರಸ್ಟ್‌ಗಳು ಸರ್ಕಾರದಿಂದ ಅನುದಾನ ಪಡೆದು ಭವನ ನಿರ್ಮಾಣದಂತಹ ಕಾರ್ಯ ಮಾಡಿವೆ.

ಕೋಲಾರದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್‌ಗೆ ಬೆಂಗಳೂರಿನಲ್ಲಿ ಮಾಸ್ತಿ ಭವನ ನಿರ್ಮಾಣಕ್ಕೆ ಜಾಗ ಗುರುತಿಸಿ, ಒಂಬತ್ತು ವರ್ಷಗಳಾದ ಬಳಿಕ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನ ಘೋಷಿಸಿದೆ.

‘ಕರಾವಳಿ ಭಾಗ ಕಡೆಗಣನೆ’



ಟ್ರಸ್ಟ್‌ಗಳ ಸ್ಥಾಪನೆಗೆ ಸಂಬಂಧಿಸಿದಂತೆ ಎಲ್ಲ ಸರ್ಕಾರಗಳು ಕರಾವಳಿ ಭಾಗವನ್ನು ಕಡೆಗಣಿಸುತ್ತಾ ಬಂದಿವೆ. ಮುದ್ದಣ, ಕಡೆಂಗೋಡ್ಲು ಶಂಕರ ಭಟ್ಟ, ಪಂಜೆ ಮಂಗೇಶರಾಯರು, ಗೋಪಾಲಕೃಷ್ಣ ಅಡಿಗ, ಮಂಜೇಶ್ವರ ಗೋವಿಂದ ಪೈ, ದಿನಕರ ದೇಸಾಯಿ ಹಾಗೂ ಗೌರೀಶ ಕಾಯ್ಕಿಣಿ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಬೇಕು. ಗಡಿ ಪ್ರದೇಶದಲ್ಲಿ ಕನ್ನಡಕ್ಕಾಗಿ ಹೋರಾಡಿದ ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರಿನಲ್ಲಿಯೂ ಟ್ರಸ್ಟ್ ಸ್ಥಾಪನೆಯಾಗಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಆಗ್ರಹಿಸುತ್ತಲೇ ಬರಲಾಗಿದೆ.

ನಾ. ಮೊಗಸಾಲೆ, ಸಾಹಿತಿ

ಬದಲಾವಣೆಗೆ ಪ್ರಸ್ತಾವ ಸಲ್ಲಿಕೆ

‘ಟ್ರಸ್ಟ್‌ಗಳ ಕಾರ್ಯಚಟುವಟಿಕೆ ಅನುಸಾರ ಇರುವ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ಹೆಚ್ಚಿನ ಅನುದಾನ ಒದಗಿಸುವಂತೆ ಆರ್ಥಿಕ ಇಲಾಖೆ ಮುಂದೆ ಪ್ರಸ್ತಾವನೆ ಇದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪ್ರಕಾಶ್ ಜಿ. ನಿಟ್ಟಾಲಿ ತಿಳಿಸಿದರು.

‘ಕೆಲ ಟ್ರಸ್ಟ್‌ಗಳಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿದ್ದಾರೆ. ಕೆಲವರು ರಾಜೀನಾಮೆ ನೀಡಿದ್ದಾರೆ. ಆದ್ದರಿಂದ ಎಲ್ಲ ಟ್ರಸ್ಟ್, ಪ್ರತಿಷ್ಠಾನಗಳ ಪದಾಧಿಕಾರಿಗಳ ಬದಲಾವಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಹೇಳಿದರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 14-8-1997

● **ಒಮ್ಮತ ಸಾಧಿಸದೆ ಮಹಿಳಾ ಮಸೂದೆ ಮಂಡನೆ ಇಲ್ಲ**

ನವದೆಹಲಿ, ಆಗಸ್ಟ್ 13– ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಸದಸ್ಯರಲ್ಲಿ ಒಮ್ಮತದ ಅಭಿಪ್ರಾಯ ವಿಲ್ಲದಿರುವುದರಿಂದ ಸರ್ಕಾರ ಈ ಮಸೂದೆಯನ್ನು ಮಂಡಿಸಲು ಮುಂದಾಗುವುದಿಲ್ಲ ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಲೋಕಸಭೆಯಲ್ಲಿ ಸ್ಪಷ್ಟಪಡಿಸಿದರು.

ಮಹಿಳೆಯರಿಗೆ ಲೋಕಸಭೆಯಲ್ಲಿ ಶೇಕಡ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಮಸೂದೆಯ ಬಗೆಗೆ ಎಡಪಕ್ಷಗಳನ್ನು ಹೊರತುಪಡಿಸಿ ಎಲ್ಲ ರಾಜಕೀಯ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಇರುವುದರಿಂದ ಮೊದಲು ಒಂದು ಒಮ್ಮತಾಭಿಪ್ರಾಯಕ್ಕೆ ಬರವುದು ಅವಶ್ಯ ಎಂದು ಪ್ರಧಾನಿ ಮನವಿ ಮಾಡಿದರು.

50 ವರ್ಷಗಳ ಹಿಂದೆ — ಸೋಮವಾರ, 14-8-1972

● **ಮೈಸೂರು ಮಾಜಿ ರಾಜರಿಗೆ ಅರಮನೆಯ ಪರಭಾರೆ ಅಧಿಕಾರ ನೀಡುವ ಸಂಭವ**

ಬೆಂಗಳೂರು, ಆಗಸ್ಟ್ 13– ಅರಮನೆಗಳನ್ನು ಪರಭಾರೆ ಮಾಡುವ ಅಧಿಕಾರವನ್ನು ಮೈಸೂರು ಮಾಜಿ ಮಹಾ ರಾಜರಿಗೆ ಕೇಂದ್ರವು ನೀಡುವ ನಿರೀಕ್ಷೆ ಇದೆ.

ಅರಮನೆ ವಿಷಯದ ಬಗ್ಗೆ ಕೇಂದ್ರದೊಂದಿಗೆ ಮಾತುಕತೆ ನಡೆಸಿದ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರು, ‘ಇಡೀ ವಿಷಯವನ್ನು ಕೇಂದ್ರಕ್ಕೆ ತಿಳಿಸಿದ್ದೇನೆ’ ಎಂದು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು. ಅರಸುರವರು ಇಂದು ದೆಹಲಿಯಿಂದ ಹಿಂತಿರುಗಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಆಗಸ್ಟ್ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ತೃತೀಯಾ ಗಂ. 22-36 ನಕ್ಷತ್ರ: ಪೂರ್ವಾಭಾದ್ರ ಗಂ. 21-56 ಯೋಗ: ಸುಕರ್ಮ ಗಂ. 25-37 ಕರಣ: ವಣಿಜ್ ಗಂ. 11-40, ಕರ್ಕಾಟಕ ಮಾಸದ 28 ನೇ ದಿನ.
ರಾಹುಕಾಲ : ಸಾಯಂಕಾಲ 04:30–06:00
ಸೂರ್ಯೋದಯ : 06-21 ಸೂರ್ಯಾಸ್ತ : 06-49 ಮುಸ್ಲಿಂ ದಿನಾಂಕ : 15 ಮೊಹರಮ್
ದಿನ ವಿಶೇಷ : ತೇಜ್ರಿ (ಸಿಂಧ್)
ಅದೃಷ್ಟ ಸಂಖ್ಯೆ : 3, 8

ಮೇಷ: ನೀವು ನೆಮ್ಮದಿಯುತವಾದ ಜೀವನವನ್ನು ಮುಂದುವರಿಸುವಿರಿ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ.

ವೃಷಭ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವುದು ಉತ್ತಮ. ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವುದರಿಂದ ಯಶಸ್ವಿಯಾಗುವಿರಿ ಹಾಗೂ ಋಣಬಾಧೆಯಿಂದ ಮುಕ್ತರಾಗಬಹುದು.

ಮಿಥುನ: ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ವಿದೇಶ ವ್ಯವಹಾರದಿಂದಾಗಿ ದಿನದ ಅಧಿಕ ಸಮಯವನ್ನು ವೃತ್ತಿ ಜೀವನಕ್ಕೆ ಮೀಸಲಿಡಬೇಕಾಗುತ್ತದೆ. ಫೈನಾನ್ಸ್ ವೃತ್ತಿಯವರಿಗೆ ಆದಾಯ ವೃದ್ಧಿ.

ಕರ್ಕಾಟಕ: ಇಂದು ನೆಮ್ಮದಿಯಿಂದ ಕುಟುಂಬದ ಸದಸ್ಯರೊಂದಿಗೆ ಕಾಲಕಳೆಯುವಿರಿ. ಗೃಹೋಪಕರಣಗಳ ಅಥವಾ ನೂತನ ವಸ್ತು ಖರೀದಿಯನ್ನು ನಡೆಸುವಿರಿ. ರುದ್ರಾಭಿಷೇಕ ಮಾಡಿಸುವುದರಿಂದ ಕಷ್ಟಗಳು ದೂರ.

ಸಿಂಹ: ಜನಗಳ ಕೆಟ್ಟ ದೃಷ್ಟಿಯ ಫಲವಾಗಿ ಜೊತೆಯಲ್ಲಿ ನಿಮ್ಮ ಸೋಮಾರಿತನವು ಸೇರಿಕೊಂಡು ಉದ್ಯೋಗ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ಎದುರಾಗಬಹುದು. ಒಪ್ಪಂದಗಳು ಹಾಗೂ ಹಣದ ಹೂಡಿಕೆ ಈ ದಿನ ಮಾಡದಿರುವುದು ಒಳ್ಳೆಯದು.

ಕನ್ಯಾ: ಕೆಲವು ಸ್ನೇಹಿತರಲ್ಲಿ ವೈಯಕ್ತಿಕ ವಿಚಾರವನ್ನು ಹಂಚಿಕೊಳ್ಳುವುದು ಸರಿಯಲ್ಲ. ಸೇವಕ ವರ್ಗದವರಲ್ಲಿ ಪ್ರೀತಿ ವಿಶ್ವಾಸದಿಂದ ವ್ಯವಹರಿಸಿ. ಸೇವಕ ವರ್ಗದವರ ಬಗ್ಗೆ ದೃಷ್ಟಿಕೋನ ಬದಲಾಯಿಸುವುದರಿಂದ ಹೆಚ್ಚಿನ ಅನುಕೂಲ.

ತುಲಾ: ಅನಿರೀಕ್ಷಿತ ಕೆಲಸಗಳಿಂದ ಸಂತಸ. ಸಾಧನೆಯ ಫಲವಾಗಿ ಆತ್ಮವಿಶ್ವಾಸ ಹೆಚ್ಚುವುದು. ವ್ಯವಹಾರದ ವಿಸ್ತರಣೆಗೆ ಸ್ನೇಹಿತರಿಂದ ಉತ್ತಮ ಸಲಹೆ ಸಹಾಯವಿರುವುದು. ಸ್ಥಗಿತಗೊಂಡಿದ್ದ ಗೃಹ ನಿರ್ಮಾಣ ಕಾರ್ಯಗಳಿಗೆ ಚಾಲನೆ.

ವೃಶ್ಚಿಕ: ಹೊಸದಾಗಿ ಉದ್ಯೋಗಕ್ಕೆ ಸೇರಲು ಸಿದ್ಧತೆ. ತಂದೆಯಾಗಲಿರುವ ಸುದ್ದಿ ಕೇಳಿ ಸಂಭ್ರಮ. ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ.

ಧನು: ಪ್ರಚಲಿತ ವಿದ್ಯಮಾನಗಳ ಬಗೆಗಿನ ಚರ್ಚಾ ವಿಷಯಗಳಲ್ಲಿ ಪಾಲ್ಗೊಳ್ಳುವಿರಿ. ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟದ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ.

ಮಕರ: ಹೂವು-ಹಣ್ಣು, ಹಾಲಿನ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರ. ಹೊಟ್ಟೆಗೆ ಸಂಬಂಧಿಸಿದ ರೋಗಗಳು ಬಾಧಿಸುವ ಸಂಭವವಿದೆ. ಅನೇಕ ಮೂಲಗಳಿಂದ ಧನಾರ್ಜನೆ ಇದ್ದರೂ ಕೈಯಲ್ಲಿ ಹಣ ಇಲ್ಲದಂತೆ ಅಥವಾ ಕೊರತೆ ಆಗುವುದು.


ಕುಂಭ: ನಿಮ್ಮ ಸರಳ ಸ್ವಭಾವವನ್ನು ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆವಹಿಸಿ. ಸಹೋದ್ಯೋಗಿಗಳಿಂದ ಅಥವಾ ಅಕ್ಕ ಪಕ್ಕದವರಿಂದ ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚೆಯೇ ಪರಿಹಾರ ಕಂಡುಕೊಳ್ಳುವುದು ಉತ್ತಮ.

ಮೀನ: ಮನಸ್ಸಿನಲ್ಲಿ ಹಲವು ದಿನಗಳಿಂದ ಕಾಡುತ್ತಿರುವ ಸಮಸ್ಯೆಗಳಿಗೆ ಇಂದು ಉತ್ತರ ಸಿಗುವುದು. ಇಂದು ಒಬ್ಬ ತಪಶ್ಶಕ್ತಿ ಹೊಂದಿರುವವರ ಅನುಗ್ರಹಕ್ಕೆ ಪಾತ್ರರಾಗುವಿರಿ. ನಿಮ್ಮ ಅಭಿವೃದ್ಧಿಗಾಗಿ ಲಕ್ಷ್ಮಿನಾರಾಯಣನನ್ನು ಆರಾಧಿಸಿ.

ಪದಬಂಧ 5049 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಂಗಳ ಕಾರ್ಯವಾದ ಮೇಲೆ ಮಾಡುವ ಜಳಕ (6)
4.ಬಾಣವನ್ನು ಗುರಿಯಿಟ್ಟು ಹೊಡೆಯುವುದರಲ್ಲಿ ನಿಪುಣ (4)
5.ಜಗಳಕ್ಕೆ ಸನ್ನದ್ಧನಾದವನು ತೋರಿಸಿದ ಅಧಿಕಾರ ಪತ್ರ (3)
7.ನೀರ ಮೇಲಣ ಗುಳ್ಳೆ (3)
10.ರೀತಿಯೊಡನೆ ಬರುವ ಸಂಪ್ರದಾಯ (3)
11.ಜಗಳಕ್ಕೊಂದು ಪರ್ಯಾಯ ಪದ (3)
13.ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನಿ (4)
15.ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ
1.ಆಗಸ ನೋಡುತ್ತಿರುವ ಮಡಿವಾಳ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3.ಇತರರಿಗೆ ವಹಿಸಿಕೊಡುವುದು (4)
6.ಈತ ಕೆಟ್ಟ ನಡತೆಯವನು (4)
7.ಕೋಟೆಯ ಮೇಲಿನ ಕೊತ್ತಳ (3)
8.ಸೇನಾಧಿಪತಿ ಇಲ್ಲಿದ್ದಾನೆ (4)
9.ತೆಳ್ಳಗಿನ ಸೊಂಟವಿದು (4)
12.ಹರನಿಗೆ ಸಲ್ಲಿಸಿದ ಮುಡಿಪು (3)
14.ಕವಿತೆ ಬರೆಯುವವನು (2)



5048ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಕಟಕವಿ 4.ಪಾಷಾಂಡಿ
5.ಧಾವಂತ 6.ಕಮಲ
8.ವನ 9.ಜಾಗ
10.ಒನಕೆ 14.ಲಘಂಗ
15.ಆಯಾಸ 16.ಮರುಕಳಿಸು

ಮೇಲಿಂದ ಕೆಳಕ್ಕೆ:
1.ವಿದುಷಿ 2.ಟಕ್ಕುತನ
3.ವಿಧಾತ 4.ಪಾತಕ
7.ಮಲಮಗ 8.ವರ್ಧಮಾನ
9.ಜಾಗತಿಕ 11.ಕೆಲಸ
12.ನಿಗಮ 13.ಮುನಿಸು

ಸುಡೊಕು 5435

4				2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5434 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಸಿದ್ಧಾರೂಢರ ಪುಣ್ಯಾರಾಧನೆ

ಹುಬ್ಬಳ್ಳಿಯ ಸಿದ್ಧಾರೂಢ ಮಠದ ಕೆರೆಯಲ್ಲಿ ಸಿದ್ಧಾರೂಢರ 93ನೇ ಪುಣ್ಯಾರಾಧನೆ ಅಂಗವಾಗಿ ಶನಿವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ತೆಪ್ಪೋತ್ಸವ ಜರುಗಿತು
–ಪ್ರಜಾವಾಣಿ ಚಿತ್ರ

‘ರಾಜ್ಯದಲ್ಲಿ 10 ಸಾವಿರ ಸಿಎಸ್‌ಸಿ ಗುರಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇಂದ್ರ ಸರ್ಕಾರ ತನ್ನ ಜನಕಲ್ಯಾಣ ಯೋಜನೆಗಳ ಬಗ್ಗೆ ಜನರಿಗೆ ತಿಳಿಸಲು ತೆರೆದಿರುವ ಜನಸಾಮಾನ್ಯರ ಸೇವಾ ಕೇಂದ್ರಗಳ (ಸಿಎಸ್‌ಸಿ) ಸಂಖ್ಯೆಯನ್ನು ರಾಜ್ಯದಲ್ಲಿ 6,000ದಿಂದ 10,000ಕ್ಕೆ ಏರಿಸಲು ಪ್ರಯತ್ನಿಸಲಾಗುವುದು ಎಂದು ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ನಗರದ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಪತ್ರಕರ್ತರ ಜೊತೆ ಶನಿವಾರ ಮಾತನಾಡಿದ ಅವರು, ಸಂಸತ್ತಿನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಮಿತಿಯಲ್ಲಿ ತಮ್ಮನ್ನು ಸೇರಿಸುವಂತೆ ಕೋರಿದ್ದು ಸಮಿತಿ ರಚನೆ ಆದ ನಂತರ ಈ ಎರಡು ಕ್ಷೇತ್ರಗಳ ಬಗ್ಗೆ ಹೆಚ್ಚು ಗಮನ ನೀಡಲಾಗುವುದು ಎಂದರು.



ವೀರೇಂದ್ರ ಹೆಗ್ಗಡೆ

‘ಕೇಂದ್ರ ಸರ್ಕಾರ ಅನೇಕ ಉತ್ತಮ ಯೋಜನೆಗಳನ್ನು ಜಾರಿಗೆ ತಂದಿದೆ. ಬಹು ತೇಕರಿಗೆ ಈ ಬಗ್ಗೆ ಅರಿವು ಇಲ್ಲ. ಯೋಜನೆಗಳ ಬಗ್ಗೆ ಅತಿ ಸುಲಭವಾಗಿ ತಿಳಿಸಬಹುದಾಗಿದೆ. ಅದು ಸಮಾಜಕ್ಕೆ ಮಾಡುವ ದೊಡ್ಡ ಸೇವೆಯೂ ಆಗಿದೆ. ರಾಜ್ಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲಕ ಮಾಹಿತಿ ನೀಡಲಾಗುತ್ತದೆ. ಈ ಸೌಲಭ್ಯವನ್ನು ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟಕ್ಕೂ ವಿಸ್ತರಿಸಲಾಗುವುದು’ ಎಂದು ಅವರು ಹೇಳಿದರು.

‘ತುಳು ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಕೆಲವು ತಾಂತ್ರಿಕ ಅಡಚಣೆಗಳು ಇವೆ. ಒಂದು ಭಾಷೆಯನ್ನು ಮಾತ್ರ ಸೇರಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯ. ಆದ್ದರಿಂದ ಇತರ ಕೆಲವು ಭಾಷೆಗಳ ಜೊತೆಗೆ ತುಳುವನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಪ್ರಯತ್ನಿಸಲಾಗುವುದು’ ಎಂದು ಅವರು ತಿಳಿಸಿದರು.

ವಿಚ್ಛೇದನಕ್ಕೆ ಬಂದು ಒಂದಾದ ಐದು ದಂಪತಿ

ತುಮಕೂರು: ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ಜಿಲ್ಲೆಯ ಐದು ದಂಪತಿ ಮತ್ತೆ ಒಂದಾಗಿದ್ದಾರೆ.

ಜಿಲ್ಲಾ ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ಹಿಂದಿನ ಎಲ್ಲಾ ಮನಸ್ತಾಪಗಳನ್ನು ಬದಿಗಿಟ್ಟು 5 ದಂಪತಿ ಮತ್ತೆ ಒಂದಾದರು. ಇದು ಎರಡೂ ಕಡೆಯ ಕುಟುಂಬದ ಸದಸ್ಯರು, ಸ್ನೇಹಿತರ ಸಂತಸಕ್ಕೆ ಕಾರಣವಾಯಿತು.

ನ್ಯಾಯಾಧೀಶರು, ವಕೀಲರ ಸಲಹೆಯಂತೆ ವಿಚ್ಛೇದನ ಅರ್ಜಿ ಹಿಂಪಡೆದು, ಪರಸ್ಪರ ಹಾರ ಬದಲಾಯಿಸಿಕೊಳ್ಳುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಜಿಲ್ಲಾ ನ್ಯಾಯಾಲಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಐವರು ದಂಪತಿ ಲೋಕ ಅದಾಲತ್‌ನಲ್ಲಿ ಒಂದಾಗಿದ್ದಾರೆ ಎಂದು ವಕೀಲರೊಬ್ಬರು ತಿಳಿಸಿದರು.

ಕೌಟುಂಬಿಕ ಜಿಲ್ಲಾ ನ್ಯಾಯಾಧೀಶ ಎನ್. ಮುನಿರಾಜು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನೂರುನ್ನೀಸ, ಆಡಳಿತಾಧಿಕಾರಿ ನರಸಿಂಹಪ್ಪ, ಆಡಳಿತ ಶಿರಸ್ತೇದಾರರಾದ ಎಂ.ಕೆ. ಜಗದೀಶ್, ನವೀನ್‌ಕುಮಾರ್, ಗೋವಿಂದರಾಜು ಉಪಸ್ಥಿತರಿದ್ದರು.

ಸಚಿವರ ಎದುರೇ ನಾಡಗೀತೆಗೆ ಅಪಮಾನ

ರಾಮನಗರ: ಹಾರೋಹಳ್ಳಿಯಲ್ಲಿ ನಡೆದ ಹರ್ ಘರ್ ತಿರಂಗಾ ಯಾತ್ರೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಜೈಶಂಕರ್ ಸಮ್ಮುಖದಲ್ಲೇ ನಾಡಗೀತೆಗೆ ಅಪಮಾನ ಮಾಡಿದ ಘಟನೆ ನಡೆಯಿತು.

ಯಾತ್ರೆ ಅಂಗವಾಗಿ ಸುಮಾರು 1 ಕಿ.ಮೀ ಪಾದಯಾತ್ರೆ ನಡೆಯಿತು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ನಾಡಗೀತೆ ಹಾಡುವ ವೇಳೆ ಕೇಂದ್ರ ಸಚಿವರ ಜೊತೆ ಸ್ಥಳೀಯ ಬಿಜೆಪಿ ಮುಖಂಡರು ಮಾತುಕತೆಯಲ್ಲಿ ತಲ್ಲೀನರಾಗಿದ್ದರು.

ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಹುಲುವಾಡಿ ದೇವರಾಜು, ರೇಷ್ಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೌತಮ್ ಗೌಡ ಜೊತೆಗಿದ್ದರು.

ಚನ್ನಡಲು ಸಂತ್ರಸ್ತರಿಂದ ಮನೆಯ ಅಡಿಪಾಯದಲ್ಲಿ ರಾಷ್ಟ್ರಧ್ವಜ ಹಾರಾಟ

ಕಳಸ (ಚಿಕ್ಕಮಗಳೂರು): ಚನ್ನಡಲು ಭೂಕುಸಿತದ ಸಂತ್ರಸ್ತರು ತಮ್ಮ ಮನೆಗಳ ಅಡಿಪಾಯದ ಮೇಲೆ ಶನಿವಾರ ರಾಷ್ಟ್ರಧ್ವಜ ಹಾರಿಸಿದರು.

ಇಡಕಿಣಿ ಗ್ರಾಮದ ಓಡಿನಕುಡಿಗೆಯಲ್ಲಿ ತಮಗೆ ಕಾದಿರಿಸಿರುವ ಜಮೀನಿನಲ್ಲಿ ತಾವು ನಿರ್ಮಿಸಿಕೊಂಡಿರುವ ಅಡಿಪಾಯದ ಬಳಿ ಬೆಳಿಗ್ಗೆ ಸಂತ್ರಸ್ತರು ಸೇರಿದರು. ತಮ್ಮ ಮನೆಗಳ ಅಡಿಪಾಯದ ಮೇಲೆ ಅವರು ಪ್ರತ್ಯೇಕವಾಗಿ ರಾಷ್ಟ್ರಧ್ವಜ ಹಾರಿಸಿದರು.

ಈ ಬಗ್ಗೆ ಮಾತನಾಡಿದ ಯುವಕ ಅವಿನಾಶ್, ‘ಹರ್ ಘರ್ ತಿರಂಗಾ’ ಘೋಷಣೆ ಮೂಲಕ ಮನೆಗಳ ಮೇಲೆ ಧ್ವಜ ಹಾರಿಸಲು ಕರೆ ನೀಡಲಾಗಿದೆ. ನಮಗೆ ಮನೆ ಇಲ್ಲದ ಕಾರಣ ನಾವು ಅಡಿಪಾಯದ ಮೇಲೆ ಬಾವುಟ ಹಾರಿಸಿದ್ದೇವೆ. ಇದು ಯಾರ ವಿರುದ್ಧ ಪ್ರತಿಭಟನೆ ಅಥವಾ ಧ್ವಜಕ್ಕೆ ಅಗೌರವ ಅಲ್ಲ. ನಮ್ಮ ದೇಶಭಕ್ತಿಯನ್ನು ನಾವು ತೋರಿಸುತ್ತಿದ್ದೇವೆ ಅಷ್ಟೇ’ ಎಂದರು.

ಚನ್ನಡಲಿನಲ್ಲಿ 2019ರಲ್ಲಿ ನಡೆದ ಭೂಕುಸಿತದಿಂದಾಗಿ ಮನೆ ಕಳೆದುಕೊಂಡ ಈ 16 ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಳ್ಳಲು ಅಧಿಕಾರಿಗಳು ನಿವೇಶನ ತೋರಿಸಿದ್ದಾರೆ. ಆದರೆ, ಈವರೆಗೂ ಅವರಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಹಕ್ಕುಪತ್ರ ಸಿಕ್ಕಿಲ್ಲ. ಇದರಿಂದ ಮನೆ ನಿರ್ಮಾಣಕ್ಕೆ ಅನುದಾನ ಕೂಡ ಸಿಗುತ್ತಿಲ್ಲ.



ಕಳಸ ತಾಲ್ಲೂಕಿನ ಇಡಕಿಣಿ ಗ್ರಾಮದಲ್ಲಿ ತಮ್ಮ ಮನೆಗಳ ಅಡಿಪಾಯದ ಮೇಲೆ ಚನ್ನಡಲು ಸಂತ್ರಸ್ತರು ರಾಷ್ಟ್ರಧ್ವಜ ಹಾರಿಸಿದರು

ಘರ್ಷಣೆ: 22 ಮಂದಿ ಬಂಧನ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಹುಲಿಹೈದರ ಗ್ರಾಮದಲ್ಲಿ ನಡೆದ ಗುಂಪು ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಮತ್ತೆ 12 ಆರೋಪಿಗಳನ್ನು ಬಂಧಿಸಲಾಗಿದ್ದು, ಬಂಧಿತರ ಒಟ್ಟು ಸಂಖ್ಯೆ 22ಕ್ಕೆ ಏರಿಕೆಯಾಗಿದೆ.

‘ಮೊಹರಂ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಅಲ್ಲಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಘಟನೆಯ ದೃಶ್ಯಗಳು ದಾಖಲಾಗಿವೆ. ಬಂಧನದ ಭೀತಿಯಿಂದ ಗ್ರಾಮವನ್ನು ತೊರೆದಿರುವ ಹಲವರ ಪತ್ತೆಗಾಗಿ ಅಕ್ಕಪಕ್ಕದ ಜಿಲ್ಲೆ ಮತ್ತು ರಾಜ್ಯಗಳಲ್ಲಿ ಶೋಧ ಮುಂದುವರೆದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ರೇವಾ ವಿಶ್ವವಿದ್ಯಾಲಯ: ಅಮೃತ ಮಹೋತ್ಸವದ ಜತೆ ವನಮಹೋತ್ಸವ

ರೇವಾ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ ಸ್ವಾತಂತ್ರ್ಯದ 75ನೇ ಅಮೃತಮಹೋತ್ಸವದ ಸಡಗರದ ಜತೆಗೆ ವನಮಹೋತ್ಸವ ವನ್ನು ಅದ್ದೂರಿಯಾಗಿ ನಡೆಸಲಾಯಿತು.

ಹೆಸರಾಂತ ನಟ, ನಿರ್ದೇಶಕ ರಮೇಶ್ ಅರವಿಂದ್ ಅವರು ಕಾರ್ಯಕ್ರಮದ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಭಾಗವಾಗಿ ರೇವಾ ವಿಶ್ವವಿದ್ಯಾಲಯವು ಪ್ರಕಟಿಸಿರುವ ‘ಸ್ವಧರ್ಮ’ ಎಂಬ ವಿಶೇಷ ನಿಯತಕಾಲಿಕೆಯನ್ನು ರಮೇಶ್ ಅವರು ಬಿಡುಗಡೆ ಮಾಡಿದರು. ನಂತರ ಮಾತನಾಡಿದ ರಮೇಶ್ ಅರವಿಂದ್, ಹಸಿರು ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ರೇವಾ ವಿಶ್ವವಿದ್ಯಾಲಯದ ಕೆಲಸವನ್ನು ಶ್ಲಾಘಿಸಿದರು.

‘ರೇವಾ ವನಮಹೋತ್ಸವದ ಬಗ್ಗೆ ನನಗೆ ತುಂಬ ಸಂತೋಷವಾಗಿದೆ. ವಿಶ್ವವಿದ್ಯಾಲಯವು ತನ್ನ ಕ್ಯಾಂಪಸ್ ಅನ್ನು ಹಸಿರಾಗಿಸುವುದಲ್ಲದೇ ಸಮಾಜ ವನ್ನು ಕೂಡ ಹಸಿರಾಗಲು ಪಣ ತೊಟ್ಟಿರುವುದು ಶ್ಲಾಘನೀಯ’ ಎಂದು ಹೇಳಿದರು.

ವಿವಿಯ ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಮಾತನಾಡಿ, ಆಜಾದಿ ಕಾ ಅಮೃತ ಮಹೋತ್ಸವವು ಸ್ವಾತಂತ್ರ್ಯದ 75ನೇ ವರ್ಷದ ಆಚರಣೆಯಾಗಿದ್ದು ಭಾರತದ ಹಲವು ಜನ ಸಂಸ್ಕೃತಿ, ಸಾಧನೆ, ಇತಿಹಾಸವನ್ನು ಅರಿಯುವ ಹಾಗೂ ಸ್ಮರಿಸುವ ವಿಶೇಷ ಅವಕಾಶವಾಗಿದೆ ಎಂದು ಹೇಳಿದರು.

ರೇವಾ ವನಮಹೋತ್ಸವ: ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಅವರ ದೂರದೃಷ್ಟಿಯಂತೆ ರೇವಾ ವನಮಹೋತ್ಸವವು ಆಗಸ್ಟ್ 2021ರಲ್ಲಿ ಪ್ರಾರಂಭವಾಯಿತು. ‘ಒಂದು ವಿದ್ಯಾರ್ಥಿ– ಒಂದು ಮರ’ ಎಂಬ ಧ್ಯೇಯದೊಂದಿಗೆ ಇದನ್ನು ಆರಂಭಿಸಲಾಯಿತು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ರೇವಾ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಆಜಾದಿ ಕಾ ಅಮೃತ ಮಹೋತ್ಸವ ಸಮಾರಂಭದಲ್ಲಿ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಅವರು ಅತಿಥಿ ರಮೇಶ್ ಅರವಿಂದ್ ಅವರನ್ನು ಸನ್ಮಾನಿಸಿದರು

ರೇವಾ ವಿಶ್ವವಿದ್ಯಾನಿಲಯದ ಬಗ್ಗೆ...

ವಿದ್ಯಾರ್ಥಿಯ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ರೇವಾ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 39 ಪದವಿ ಕಾರ್ಯಕ್ರಮಗಳು, 32 ಸ್ನಾತಕೋತ್ತರ ಕಾರ್ಯಕ್ರಮಗಳು, 18 ಪಿಎಚ್‌ಡಿ ಕಾರ್ಯಕ್ರಮಗಳು ಮತ್ತು ಸರ್ಟಿಫಿಕೇಟ್ ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ನೀಡುತ್ತಿದೆ.

ವಿಶ್ವವಿದ್ಯಾನಿಲಯವು ಎಂಜಿನಿಯರಿಂಗ್, ಆರ್ಕಿಟೆಕ್ಚರ್, ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ, ನಿರ್ವಹಣಾ ಅಧ್ಯಯನಗಳು, ಕಾನೂನು, ಕಲೆ ಮತ್ತು ಮಾನವಿಕ ಹಾಗೂ ಪ್ರದರ್ಶನ ಕಲೆಗಳಲ್ಲಿ ಕೋರ್ಸ್‌ಗಳನ್ನು ನೀಡುತ್ತಿದೆ. ವಿಶ್ವವಿದ್ಯಾಲಯದಲ್ಲಿ 43 ದೇಶಗಳು ಮತ್ತು 29 ರಾಜ್ಯಗಳಿಂದ 15,000 ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿವಿಯು ವಿವಿಧ ಕೈಗಾರಿಕೆಗಳು, ವಿದೇಶಿ ವಿಶ್ವವಿದ್ಯಾಲಯಗಳು, ಕಾರ್ಪೊರೇಟ್ ತರಬೇತಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಮತ್ತು ಎನ್‌ಎಸ್‌ಡಿಸಿ (ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ಸೇರಿದಂತೆ ಸರ್ಕಾರಿ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಿದೆ.

ಟಿಪಿಎಂಎಸ್ ಆಪ್‌ನ ವೈಶಿಷ್ಟ್ಯಗಳು

- ಪ್ರತಿ ಗಿಡ ಗುರುತಿಸಲು ಪ್ರತ್ಯೇಕ ಐ.ಡಿ ನೀಡುವ ಸೌಲಭ್ಯ ಇದೆ.
- ಮರದ ಪ್ರಗತಿಯನ್ನು ಗುರುತಿಸಲು ಕ್ಯೂಆರ್ ಕೋಡ್ ಅಳವಡಿಕೆ
- ಮರದ ಪ್ರಗತಿಯ ಫೋಟೊವನ್ನು ಅಪ್‌ಲೋಡ್ ಮಾಡಬಹುದು
- ಸಸಿ ನೆಟ್ಟವರ ಕೆಲಸವನ್ನು ಗುರುತಿಸಿ ಮೆಚ್ಚುಗೆಯ ಪ್ರಮಾಣ ಪತ್ರವನ್ನು ಆ್ಯಪ್ ಮೂಲಕ ನೀಡಬಹುದು
- ಅಧ್ಯಯನ ವಿಭಾಗ, ಸ್ಥಳ, ಸಸ್ಯದ ಆಧಾರದ ಮೇಲೆ ಟ್ರ್ಯಾಕ್ ಮಾಡುವುದು

ಆಜಾದಿ ಕಾ ಅಮೃತ್ ಮಹೋತ್ಸವದ ಭಾಗವಾಗಿ ರೇವಾ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ರೇವಾ ಟಿಪಿಎಂಎಸ್ (ಟ್ರೀ ಪ್ಲಾಂಟೇಶನ್ ಮಾನಿಟರಿಂಗ್ ಸಿಸ್ಟಮ್) ಎನ್ನುವ ಆಂಡ್ರಾಯ್ಡ್ ಆಧಾರಿತ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದ್ದು, ಇದರ ಮೂಲಕ ನೆಟ್ಟ ಗಿಡದ ಬೆಳವಣಿಗೆಯ ಮೇಲೆ ನಿಗಾ ಇಡಬಹುದಾಗಿದೆ.

ಕಾಫಿ ಡೇ ನಷ್ಟ ₹18 ಕೋಟಿಗೆ ಇಳಿಕೆ

ನವದೆಹಲಿ (ಪಿಟಿಐ): ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್‌ನ (ಸಿಡಿಇಎಲ್) ನಷ್ಟವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹18 ಕೋಟಿಗೆ ಇಳಿಕೆ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹117 ಕೋಟಿ ನಷ್ಟ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನ ₹81.52 ಕೋಟಿಯಿಂದ ₹210.49 ಕೋಟಿಗೆ ಎರಡು ಪಟ್ಟು ಏರಿಕೆ ಆಗಿದೆ ಎಂದು ಹೇಳಿದೆ.

ಕಾಫಿ ಡೇ ಗ್ಲೋಬಲ್‌ನ ಕಾರ್ಯಾಚರಣಾ ವರಮಾನ ₹189.63 ಕೋಟಿಗೆ ತಲುಪಿದೆ. ಹಿಂದಿನ ಬಾರಿ ₹67.16 ಕೋಟಿ ಇತ್ತು. ನಿವ್ವಳ ನಷ್ಟ ₹89.49 ಕೋಟಿ ಇದ್ದಿದ್ದು ₹11.72 ಕೋಟಿಗೆ ಇಳಿಕೆ ಆಗಿದೆ ಎಂದು ಸಿಡಿಇಎಲ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

13–8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1660)
ಒಂದು ವಾರದ ಡೆಲಿವರಿ	1655 (1655)
ಸೋಯಾ ಕಚ್ಚಾ	1250 (1240)
ಪಾಮ್ ವಾರದ ಡೆಲಿವರಿ	1258 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,550 (52,350)
ಬೆಳ್ಳಿ ಕೆ.ಜಿ 59,200 (58,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1650)
ಸೋಯಾ (ರಿಫೈನ್ಡ್)	₹1285 (1275)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1260 (1255)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹435
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹438

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹218-575
ದ್ವಿತಳಿ (ಬಿ.ವಿ) ₹322-790

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹164
ಆರ್‌ಎಸ್‌ಎಸ್-5 ₹154
ಗುಡ್ ಲಾಟ್ ₹146
(ಪ್ರತಿ ಕೆ.ಜಿಗೆ)

ಅಮೆರಿಕದಿಂದ ಕಳವಳ: ಆರ್‌ಬಿಐ ಡೆಪ್ಯುಟಿ ಗವರ್ನರ್ ಪಾತ್ರಾ ಹೇಳಿಕೆ

'ತೈಲದ ಮೂಲ ಮುಚ್ಚಿಟ್ಟ ಭಾರತ'



ನವದೆಹಲಿ (ರಾಯಿಟರ್ಸ್): 'ಅಮೆರಿಕಕ್ಕೆ ರಫ್ತು ಮಾಡಿದ ಇಂಧನವನ್ನು ರಷ್ಯಾದ ಕಚ್ಚಾ ತೈಲದಿಂದ ತಯಾರಿಸಿದ್ದು ಎನ್ನುವುದನ್ನು ಭಾರತ ಮುಚ್ಚಿಟ್ಟಿದೆ. ಇದು ಅಮೆರಿಕವು ರಷ್ಯಾದ ಮೇಲೆ ವಿಧಿಸಿರುವ ನಿರ್ಬಂಧದ ಉಲ್ಲಂಘನೆ ಎಂದು ಅಮೆರಿಕ ಕಳವಳ ವ್ಯಕ್ತಪಡಿಸಿದೆ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ ಶನಿವಾರ ಹೇಳಿದ್ದಾರೆ.

'ಭಾರತದ ಹಡಗೊಂದು ಸಮುದ್ರದಲ್ಲಿಯೇ ರಷ್ಯಾದ ಟ್ಯಾಂಕರ್‌ನಿಂದ ಕಚ್ಚಾ ತೈಲವನ್ನು ಪಡೆದುಕೊಂಡಿತು. ನಂತರ ಅದನ್ನು ಗುಜರಾತ್‌ನ ಬಂದರಿಗೆ ತಂದು ಅಲ್ಲಿ ಸಂಸ್ಕರಣೆ ಮಾಡಿ ರಫ್ತು ಮಾಡಲಾಯಿತು' ಎಂದು ಅಮೆರಿಕದ ಹಣಕಾಸು ಇಲಾಖೆಯು ಹೇಳಿದೆ ಎಂದು ಅವರು ತಿಳಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಸಂಸ್ಕರಿಸಿದ ಇಂಧನವನ್ನು ತುಂಬಿಕೊಂಡ ಹಡಗು ನಿರ್ದಿಷ್ಟ ಗಮ್ಯಸ್ಥಾನದ ಗುರಿ ಇಲ್ಲದೇ ಬಂದರಿನಿಂದ ಹೊರಟಿತು. ಸಮುದ್ರದಲ್ಲಿ ಇದ್ದಾಗ ಇಂಧನಕ್ಕೆ ಎಲ್ಲಿಂದ ಬೇಡಿಕೆ ಬಂದಿದೆ ಎಂಬ ಮಾಹಿತಿ ಸಿಕ್ಕಿತು. ಹೀಗಾಗಿ ಅದು ನ್ಯೂಯಾರ್ಕ್ ತಲುಪಿತು' ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಕುರಿತು ತಕ್ಷಣದ ಪ್ರತಿಕ್ರಿಯೆ ನೀಡಲು ದೆಹಲಿಯಲ್ಲಿನ ಅಮೆರಿಕದ ರಾಯಭಾರಿ ಕಚೇರಿ ನಿರಾಕರಿಸಿದೆ. ರಷ್ಯಾ ದೇಶವು ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ಬಳಿಕ ರಷ್ಯಾದ ಕಚ್ಚಾ ತೈಲ, ಸಂಸ್ಕರಿಸಿದ ಇಂಧನ, ತೈಲ ಮತ್ತು ಅನಿಲ ಸೇರಿದಂತೆ ಹಲವು ಉತ್ಪನ್ನಗಳ ಆಮದು ಮೇಲೆ ಅಮೆರಿಕವು ನಿರ್ಬಂಧ ವಿಧಿಸಿದೆ.

ನಯಾರಾ ಎನರ್ಜಿ ನಿವ್ವಳ ಲಾಭ ₹ 3,564 ಕೋಟಿ

ನವದೆಹಲಿ (ಪಿಟಿಐ): ರಷ್ಯಾದ ರೊಸ್ನೆಫ್ಟ್ ಕಂಪನಿಯ ಹೂಡಿಕೆ ಇರುವ ನಯಾರಾ ಎನರ್ಜಿ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 3,564 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹139 ಕೋಟಿ ನಷ್ಟ ಅನುಭವಿಸಿತ್ತು.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಲಾಭವು 2021–22ನೇ ಹಣಕಾಸು ವರ್ಷದಲ್ಲಿ ಕಂಪನಿಯು ಗಳಿಸಿದ್ದ ₹1,029 ಕೋಟಿಗಿಂತಲೂ ಹೆಚ್ಚು.

ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆದ ಬಳಿಕ ಮಾರ್ಚ್‌ನಿಂದ ರಷ್ಯಾ ದೇಶವು ಭಾರತಕ್ಕೆ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಪೂರೈಕೆ ಮಾಡಲು ಆರಂಭಿಸಿತು. ನಯಾರಾ ಎನರ್ಜಿ ಕಂಪನಿಯು ಈ ಅವಕಾಶವನ್ನು ಬಳಸಿಕೊಂಡು, ಕಚ್ಚಾ ತೈಲವನ್ನು ಸಂಸ್ಕರಣೆ ಮಾಡಿ ರಫ್ತು ಮಾಡುವ ಮೂಲಕ ಲಾಭ ಮಾಡಿಕೊಂಡಿದೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿದ್ದರೂ, ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ದರ ಪರಿಷ್ಕರಣೆ ಮಾಡದೇ ಇರುವುದರಿಂದ ಸರ್ಕಾರಿ ಸ್ವಾಮ್ಯದ ಭಾರತ್ ಪೆಟ್ರೋಲಿಯಂ, ಹಿಂದುಸ್ತಾನ್ ಪೆಟ್ರೋಲಿಯಂ ಮತ್ತು ಇಂಡಿಯನ್ ಆಯಿಲ್ ಕಂಪನಿಗಳಿಗೆ ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹18,480 ಕೋಟಿ ನಷ್ಟವಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	ಸಕಲೇಶಪುರ
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16000	15700	226.06 ಸೆಂಟ್ಸ್
ಎಸಿ	9100	8400	8750	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4900	4500	4625	2252 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಎಚ್‌ಡಿಎಫ್‌ಸಿ ವಿಲೀನಕ್ಕೆ ಸಿಸಿಐ ಒಪ್ಪಿಗೆ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್ ಅನ್ನು ವಿಲೀನಗೊಳಿಸುವ ಪ್ರಸ್ತಾವಕ್ಕೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಒಪ್ಪಿಗೆ ನೀಡಿದೆ.

ಮೊದಲ ಹಂತದಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್‌ನಲ್ಲಿ ಎಚ್‌ಡಿಎಫ್‌ಸಿ ಇನ್‌ವೆಸ್ಟ್‌ಮೆಂಟ್ಸ್ ಮತ್ತು ಎಚ್‌ಡಿಎಫ್‌ಸಿ ಹೋಲ್ಡಿಂಗ್ಸ್ ವಿಲೀನ ಆಗಲಿವೆ. ಆ ಬಳಿಕ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಎಚ್‌ಡಿಎಫ್‌ಸಿ ಲಿಮಿಟೆಡ್ ವಿಲೀನ ನಡೆಯಲಿದೆ. ವಿಲೀನ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿರುವುದಾಗಿ ಆಯೋಗವು ಶುಕ್ರವಾರ ಟ್ವೀಟರ್‌ನಲ್ಲಿ ತಿಳಿಸಿದೆ.

ಟಾಲ್ಕಮ್ ಬೇಬಿ ಪೌಡರ್ ಮಾರಾಟ ಇಲ್ಲ: ಜಾನ್ಸನ್

ವಾಷಿಂಗ್ಟನ್ (ಎಪಿ): ಜಾನ್ಸನ್ ಆ್ಯಂಡ್ ಜಾನ್ಸನ್ ಕಂಪನಿಯು ಮುಂದಿನ ವರ್ಷದಿಂದ ಟಾಲ್ಕ್ ಇರುವ ಬೇಬಿ ಪೌಡರ್‌ಗಳ ಮಾರಾಟವನ್ನು ನಿಲ್ಲಿಸುವುದಾಗಿ ತಿಳಿಸಿದೆ.

ಟಾಲ್ಕ್ ಬದಲಿಗೆ ಜೋಳದ ಹಿಟ್ಟನ್ನು (ಕಾರ್ನ್ ಸ್ಟಾರ್ಚ್) ಬಳಸಿದ ಬೇಬಿ ಪೌಡರ್ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿಯೂ ಕಂಪನಿ ಹೇಳಿದೆ.

ಅಮೆರಿಕ ಮತ್ತು ಕೆನಡಾದಲ್ಲಿ ಟಾಲ್ಕಮ್ ಬೇಬಿ ಪೌಡರ್ ಮಾರಾಟವನ್ನು ಈಗಾಗಲೇ ನಿಲ್ಲಿಸಲಾಗಿದೆ. ಟಾಲ್ಕಮ್ ಪೌಡರ್ ಬಳಕೆಯು ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ ಎಂದು ಆರೋಪಿಸಿ ಸಾವಿರಾರು ಪ್ರಕರಣಗಳು ದಾಖಲಾದ ಬೆನ್ನಲ್ಲೇ ಕಂಪನಿ ಈ ನಿರ್ಧಾರಕ್ಕೆ ಬಂದಿದೆ.

ಒಎನ್‌ಜಿಸಿ ಲಾಭ ₹ 15,206 ಕೋಟಿ


ಬೆಂಗಳೂರು: ತೈಲ ಮತ್ತು ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹15,206 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹4,334 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು 3 ಪಟ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲೆ ಕೇಂದ್ರವು ಆಕಸ್ಮಿಕ ಲಾಭ ತೆರಿಗೆ ವಿಧಿಸುವುದಕ್ಕೂ ಮುನ್ನ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಹೆಚ್ಚಾಗಿದ್ದರಿಂದ ಕಂಪನಿಯ ಗಳಿಕೆಯಲ್ಲಿ ಭಾರಿ ಏರಿಕೆ ಕಂಡಿದೆ.

ಎಚ್ಚರಿಕೆಯಿಂದ ನೀರು ಬಳಸಲು ಸಲಹೆ

ಇಂಗ್ಲೆಂಡ್: ವಿವಿಧೆಡೆ ಬರ, ಬಿಸಿ ಗಾಳಿ



ಇಂಗ್ಲೆಂಡ್‌ನ ಕೆಂಟ್‌ನಲ್ಲಿರುವ ಬೌಗ್ ಬೀಚ್ ಕೆರೆಯಲ್ಲಿ ಜಲಸಂಗ್ರಹ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿದೆ. ತಾಪಮಾನ ಏರಿಕೆ ಹಿಂದೆಯೇ ಕೆರೆಯ ದಡದಲ್ಲಿ ಹಕ್ಕಿಗಳು ವಿರಮಿಸಿರುವುದು —ಎಎಫ್‌ಪಿ

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಬಹುತೇಕ ಭಾಗಗಳಲ್ಲಿ ಬಿಸಿಗಾಳಿಯ ವಾತಾವರಣ ಇದ್ದು, ಬಹುತೇಕ ಪ್ರದೇಶಗಳನ್ನು ಬರಪೀಡಿತ ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಿದೆ. ಅಲ್ಲದೆ, ನೀರಿನ ಗೃಹ, ವಾಣಿಜ್ಯ ಬಳಕೆಗೆ ನಿರ್ಬಂಧ ಹೇರುವ ಸೂಚನೆ ನೀಡಿದೆ.

ಇಂಗ್ಲೆಂಡ್‌ನ ನೈರುತ್ಯ, ದಕ್ಷಿಣ ಮತ್ತು ಕೇಂದ್ರ ಭಾಗದ ಪ್ರದೇಶಗಳಲ್ಲಿ ಬರ ಪರಿಸ್ಥಿತಿಯ ಛಾಯೆಯು ತೀವ್ರವಾಗಿದೆ. ರಾಷ್ಟ್ರೀಯ ಬರಪೀಡಿತ ನಿರ್ವಹಣಾ ತಂಡವು ಒಟ್ಟು ಪರಿಸ್ಥಿತಿಯನ್ನು ಅವಲೋಕಿಸಿ ಬರಪೀಡಿತ ಪ್ರದೇಶಗಳನ್ನು ಘೋಷಿಸಿದೆ.

ಬಿಸಿಗಾಳಿಯ ಎರಡನೇ ಅಲೆಯೂ ಆರಂಭವಾಗಿದೆ. ದಾಖಲೆ ಪ್ರಕಾರ, ಇತ್ತೀಚಿನ ವರ್ಷಗಳಲ್ಲಿಯೇ ಜುಲೈ ತಿಂಗಳು ಒಣ ತಿಂಗಳು ಎಂದು ಭಾವಿಸಲಾಗಿದೆ ಎಂದು ಇಂಗ್ಲೆಂಡ್‌ನ ಸಚಿವ ಸ್ಟೀವ್ ಡಬಲ್ ಹೇಳಿದದರು.

ಗೃಹ ಮತ್ತು ವಾಣಿಜ್ಯ ಉದ್ದೇಶಗಳಿಗೆ ನಾಗರಿಕರು ಎಚ್ಚರಿಕೆಯಿಂದ ನೀರು ಬಳಸಬೇಕು. ಸಂಪನ್ಮೂಲಗಳ ಬಳಕೆ ಕುರಿತಂತೆ ನಿರ್ದೇಶನಗಳನ್ನು ಪಾಲಿಸಬೇಕು ಎಂದು ನಿವಾಸಿಗಳು, ವಾಣಿಜ್ಯ ಬಳಕೆಯ ಗ್ರಾಹಕರಿಗೆ ಸರ್ಕಾರ ಸೂಚಿಸಿದೆ.

ಬಹತೇಕ ಭಾಗದಲ್ಲಿ ಉಷ್ಣಾಂಶ ತೀವ್ರವಾಗಿದೆ. ಮಳೆ ಪ್ರಮಾಣವು ಕಡಿಮೆ ಇದೆ. ಇನ್ನೊಂದೆಡೆ, ಬಿಸಿಗಾಳಿ ಗಣನೀಯವಾಗಿ ಏರುತ್ತಿದೆ. ನೈರುತ್ಯ ಭಾಗದಲ್ಲಿ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ವರೆಗೂ ಏರಿಕೆಯಾಗಿದೆ.

ಬ್ರಿಟನ್‌ನ ಪರಿಸರ ನಿರ್ವಹಣಾ ಸಂಸ್ಥೆಯ ಪ್ರಕಾರ, ಸತತ ಐದು ತಿಂಗಳು ವಾಡಿಕೆಗಿಂತಲೂ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ. ಇನ್ನೊಂದೆಡೆ, ಉಷ್ಣಾಂಶ ಸರಾಸರಿಗಿಂತಲೂ ತೀವ್ರಗತಿಯಲ್ಲಿ ಏರಿದೆ. ಕೃಷಿಭೂಮಿ ಒಣಗುತ್ತಿವೆ. ನೀರಿನ ಪೂರೈಕೆ ವ್ಯತ್ಯಯವಾಗಿದೆ. ವನ್ಯಜೀವಿಗಳ ವಿಷಯದಲ್ಲಿ ಒಂದೆಡೆ ನೀರಿನ ಕೊರತೆ ಇದ್ದರೆ, ಇನ್ನೊಂದೆಡೆ ಕಾಳ್ಗಿಚ್ಚು ಆವರಿಸುವ ಭೀತಿ ಅಧಿಕಾರಿಗಳಿಗೆ ಕಾಡುತ್ತಿದೆ.

ಈ ಹಿಂದೆ ಇಂಗ್ಲೆಂಡ್‌ನಲ್ಲಿ 2018 ಮತ್ತು 2011ರಲ್ಲಿ ಬರ ಪರಿಸ್ಥಿತಿ ಕಾಣಿಸಿಕೊಂಡಿತ್ತು. ತಾಪಮಾನ ಪರಿಣತರು, ಬರುವ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಲಿದೆ ಎಂದು ಎಚ್ಚರಿಸಿದ್ದಾರೆ.

ಟ್ರಂಪ್ ರೆಸಾರ್ಟ್‌ನಿಂದ ದಾಖಲೆ ವಶ ರಾಷ್ಟ್ರೀಯ ಭದ್ರತೆ– ಹೆಚ್ಚಿದ ಕಳವಳ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಮರ್ ಎ ಲಗೊ' ರೆಸಾರ್ಟ್‌ನಿಂದ ಅಧಿಕೃತ ದಾಖಲೆಗಳನ್ನು ಸರ್ಕಾರ ಜಪ್ತಿ ಮಾಡಿರುವುದರ ಹಿಂದೆಯೇ, 'ರಾಷ್ಟ್ರೀಯ ಭದ್ರತೆಗೆ ಧಕ್ಕೆ ಬಂದಿದೆ' ಅವರ ಹಿಂದಿನ ಹೇಳಿಕೆಯು ಮುನ್ನೆಲೆಗೆ ಬಂದಿದೆ ಎಂದು ಭದ್ರತಾ ವಲಯದ ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದು ದೇಶದ ಮೇಲೆ ನಿಯಮ ಬಾಹಿರವಾಗಿ ಕಣ್ಗಾವಲು ಇರಿಸಿದ್ದ ಆರೋಪವು ಟ್ರಂಪ್ ಮೇಲಿದೆ. ಸರಿಯಾಗಿ ರಕ್ಷಣಾ ಮಾಹಿತಿ ನಿರ್ವಹಿಸಿಲ್ಲ, ಅಧಿಕೃತವಲ್ಲದವರಿಗೆ ಮಾಹಿತಿ ನೀಡಿದ್ದಾರೆ ಎಂದು ಅವರ ವಿರುದ್ಧದ ಸರ್ಚ್ ವಾರಂಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಅಧ್ಯಕ್ಷರಾಗಿದ್ದಾಗ ಟ್ರಂಪ್ ಅವರು ಸೂಕ್ಷ್ಮತೆಯನ್ನು ಮರೆತು ಮಾಹಿತಿ ಹಂಚಿಕೊಂಡಿದ್ದಾರೆ. ತುಂಬ ಗೋಪ್ಯವಾಗಿದ್ದ ಮಾಹಿತಿಯನ್ನು ರಷ್ಯಾದ ವಿದೇಶಾಂಗ ಸಚಿವರ ಜೊತೆಗೆ ಹಂಚಿಕೊಂಡಿದ್ದರು ಎಂದೂ ಉಲ್ಲೇಖಿಸಲಾಗಿದೆ.

ಕಾನೂನು ಇಲಾಖೆಯು ನೀಡಿರುವ ಸರ್ಚ್ ವಾರಂಟ್ ಮತ್ತೆ ಈಗ ರಾಷ್ಟ್ರೀಯ ಭದ್ರತೆ ಕುರಿತ ಆತಂಕವನ್ನು ಹೆಚ್ಚಿಸಿದೆ ಎಂದು ನಿವೃತ್ತ ಅಧಿಕಾರಿ ಮೇರಿ ಮೆಕಾರ್ಡ್ ಅವರು ಪ್ರತಿಕ್ರಿಯಿಸಿದರು. ಈ ಸಂಬಂಧ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಟ್ರಂಪ್ ಅವರು, ಎಲ್ಲ ದಾಖಲೆಗಳನ್ನು ಸಮರ್ಪಕವಾಗಿ ವರ್ಗೀಕರಿಸಲಾಗಿತ್ತು. ಹೆಚ್ಚಿನ ಭದ್ರತೆಯಲ್ಲಿ ಇಡಲಾಗಿತ್ತು ಎಂದು ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ರಿಷಿ ಸುನಕ್‌ಗೆ ನೀಡಿದ್ದ ಬೆಂಬಲ ವಾಪಸ್

ಲಂಡನ್ (ಇಂಗ್ಲೆಂಡ್): ಬ್ರಿಟನ್ ಪ್ರಧಾನಿ ಸ್ಥಾನದ ಸ್ಪರ್ಧೆಯಲ್ಲಿ ಭಾರತ ಮೂಲದ ಅಭ್ಯರ್ಥಿ ರಿಷಿ ಸುನಕ್ ಅವರಿಗೆ ಬೆಂಬಲ ನೀಡಿದ್ದ ಹಿರಿಯ ಸಚಿವ ರಾಬರ್ಟ್ ಬಕ್‌ಲ್ಯಾಂಡ್, ಈಗ ಲಿಜ್ ಟ್ರಸ್ ಅವರಿಗೆ ಬೆಂಬಲ ಘೋಷಿಸಿದ್ದಾರೆ.

ಭಯೋತ್ಪಾದನಾ ನಿಗ್ರಹ ಕವಾಯತಿನಲ್ಲಿ ಪಾಕ್ ಭಾಗಿ?

ಇಸ್ಲಾಮಾಬಾದ್ (ಪಿಟಿಐ): ಶಾಂಘೈ ಸಹಕಾರ ಸಂಘಟನೆಯಡಿ (ಎಸ್‌ಸಿಒ) ಅಕ್ಟೋಬರ್‌ನಲ್ಲಿ ಭಾರತ ಆಯೋಜಿಸಲಿರುವ ಭಯೋತ್ಪಾದನಾ ನಿಗ್ರಹ ಕವಾಯತಿನಲ್ಲಿ ಪಾಕಿಸ್ತಾನ ಭಾಗಿಯಾಗಲಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಭಾರತದಲ್ಲಿ ನಡೆಯುತ್ತಿರುವ ಇಂಥ ಕವಾಯತಿನಲ್ಲಿ ಇದೇ ಮೊದಲ ಬಾರಿಗೆ ಪಾಕಿಸ್ತಾನ ಭಾಗವಹಿಸುತ್ತಿದೆ ಎಂದು ಸ್ಥಳೀಯ ಪತ್ರಿಕೆ ವರದಿ ಮಾಡಿದೆ.

ಎಸ್‌ಸಿಒದ ಪ್ರಾದೇಶಿಕ ಭಯೋತ್ಪಾದನೆ ನಿಗ್ರಹ ವ್ಯವಸ್ಥೆ (ಆರ್‌ಟಿಎಸ್) ಅನ್ವಯ ಇದು ನಡೆಯಲಿದೆ ಎಂದು ಪಾಕಿಸ್ತಾನದ ವಿದೇಶಾಂಗ ಇಲಾಖೆ ವಕ್ತಾರ ಆಸಿಂ ಇಫ್ತಿಖರ್ ಅವರನ್ನು ಉಲ್ಲೇಖಿಸಿ ಪತ್ರಿಕೆ ಈ ವರದಿ ಮಾಡಿದೆ.

ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್: ಶಿವಾ ಡಬಲ್ ಸಾಧನೆ

ಸಂಭವ್, ನೀನಾ ಪ್ರಶಸ್ತಿ ಟ್ರಿಪಲ್

ಪ್ರಜಾವಾಣಿ ವಾರ್ತೆ



ಆರ್. ಸಂಭವ್

ಬೆಂಗಳೂರು: ಡಾಲ್ಫಿನ್ ಅಕ್ವೆಟಿಕ್ ಸೆಂಟರ್‌ನ ಆರ್. ಸಂಭವ್ ಮತ್ತು ನೀನಾ ವೆಂಕಟೇಶ್ ಇಲ್ಲಿ ನಡೆಯುತ್ತಿರುವ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಚಿನ್ನ ಟ್ರಿಪಲ್ ಸಾಧನೆ ಮಾಡಿದರು.

ಪಡುಕೋಣೆ-ದ್ರಾವಿಡ್ ಅಕಾಡೆಮಿ ಈಜುಗೊಳದಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ಡಾಲ್ಫಿನ್ ಕೇಂದ್ರದ ಈಜುಪಟುಗಳು ಸಾಮರ್ಥ್ಯ ಮೆರೆದರು. ಎರಡನೇ ದಿನ ನಡೆದ ಪುರುಷರ 50 ಮೀ ಫ್ರೀಸ್ಟೈಲ್, 100 ಮೀ ಬಟರ್‌ಫ್ಲೈ ಹಾಗೂ 100 ಮೀ ಫ್ರೀಸ್ಟೈಲ್ ವಿಭಾಗಗಳಲ್ಲಿ ಸಂಭವ್ ಪ್ರಥಮ ಸ್ಥಾನ ಗಳಿಸಿದರು.

ಮಹಿಳೆಯರ 50 ಮೀ ಫ್ರೀಸ್ಟೈಲ್, 100 ಮೀ ಫ್ರೀಸ್ಟೈಲ್ ಹಾಗೂ 100 ಮೀ ಬಟರ್‌ಫ್ಲೈ ಸ್ಪರ್ಧೆಗಳಲ್ಲಿ ನೀನಾ ವೆಂಕಟೇಶ್ ಮೊದಲಿಗರಾದರು.

ಬಸವನಗುಡಿ ಈಜು ಕೇಂದ್ರದ ಎಸ್. ಶಿವಾ ಅವರು 200 ಮೀ ಮೆಡ್ಲೆ ಹಾಗೂ 100 ಮೀ ಬ್ಯಾಕ್‌ಸ್ಟ್ರೋಕ್ ವಿಭಾಗಗಳಲ್ಲಿ ಚಿನ್ನದ ಸಾಧನೆ ಮಾಡಿದರು.

ಫಲಿತಾಂಶಗಳು: ಪುರುಷರು: 50 ಮೀ ಫ್ರೀಸ್ಟೈಲ್: ಆರ್. ಸಂಭವ್ (ಡಾಲ್ಫಿನ್; 24.57ಸೆ)-1, ಎಂ. ಪೃಥ್ವಿ (ಬಸವನಗುಡಿ)-2, ಅನಿರುದ್ಧ ಎಚ್ ಮುರಳಿ (ಬಸವನಗುಡಿ)-3

50 ಮೀ ಬ್ರೆಸ್ಟ್‌ಸ್ಟ್ರೋಕ್: ಡಿ.ಎಸ್. ಪೃಥ್ವಿಕ್ (ಬಸವನಗುಡಿ; 30.26ಸೆ)-1, ವಿದಿತ್ ಎಸ್.ಶಂಕರ್ (ಡಾಲ್ಫಿನ್)-2, ಪ್ರಣವ್ ಭಾರತಿ ಎಂ (ಬಸವನಗುಡಿ)-3

100 ಮೀ ಬಟರ್‌ಫ್ಲೈ: ಆರ್. ಸಂಭವ್ (ಡಾಲ್ಫಿನ್; 56.80ಸೆ)-1, ಎಂ. ಪೃಥ್ವಿ (ಬಸವನಗುಡಿ)-2, ನಯನ್ ವಿಘ್ನೇಷ್ ಪಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)-3

100 ಮೀ ಬ್ಯಾಕ್‌ಸ್ಟ್ರೋಕ್: ಎಸ್. ಶಿವಾ (ಬಸವನಗುಡಿ; 58.08ಸೆ)-1, ಉತ್ಕರ್ಷ್ ಸಂತೋಷ್ ಪಾಟೀಲ (ಬಸವನಗುಡಿ)-2, ಆಕಾಶ್ ಮಣಿ (ಬಸವನಗುಡಿ)-3.

100 ಮೀ ಫ್ರೀಸ್ಟೈಲ್: ಆರ್. ಸಂಭವ್ (ಡಾಲ್ಫಿನ್; 52.20ಸೆ)-1, ಎಂ. ಪೃಥ್ವಿ (ಬಸವನಗುಡಿ)-2, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)-3.

200 ಮೀ ಬ್ರೆಸ್ಟ್‌ಸ್ಟ್ರೋಕ್: ಕಲ್ಪ ಎಸ್ ಬೊಹ್ರಾ (ಬಸವನಗುಡಿ; 2ನಿ,27.15ಸೆ)-1, ವಿದಿತ್ ಎಸ್ ಶಂಕರ್ (ಡಾಲ್ಫಿನ್)-2, ಅದಿತಿ ಸ್ಮರಣ ಒಲೇಟಿ (ಬಸವನಗುಡಿ)-3

200 ಮೀ ಮೆಡ್ಲೆ: ಎಸ್. ಶಿವಾ (ಬಸವನಗುಡಿ; ದಾಖಲೆ 2ನಿ, 6.77ಸೆ)-1, ನಯನ್ ವಿಘ್ನೇಷ್ ಪಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)-2, ಶಿವಾಂಕ್ ವಿಶ್ವನಾಥ (ಗಾಫ್ರೆ)-3.

1500 ಮೀ ಫ್ರೀಸ್ಟೈಲ್: ಅನಿಷ್ ಎಸ್ ಗೌಡ (ಬಸವನಗುಡಿ ಈಜುಕೇಂದ್ರ; 16ನಿ,23.33ಸೆ)-1, ಶಿವಾಂಕ್ ವಿಶ್ವನಾಥ್ (ಗಾಫ್ರೆ ಈಜು ಯೋಜನೆ)-2, ಪವನ್ ಧನಂಜಯ (ಬಸವನಗುಡಿ)-3.

ಮಹಿಳಾ ವಿಭಾಗದ ಫಲಿತಾಂಶ

50 ಮೀ ಫ್ರೀಸ್ಟೈಲ್: ನೀನಾ ವೆಂಕಟೇಶ್ (ಡಾಲ್ಫಿನ್; 27.98ಸೆ)-1, ರಿಧಿಮಾ ವೀರೇಂದ್ರ ಕುಮಾರ್ (ಬಸವನಗುಡಿ)-ರುಜುಲಾ ಎಸ್ (ಡಾಲ್ಫಿನ್)- ಲತೀಷಾ ಮಂದಣ್ಣ (ಗಾಫ್ರೆ) -2 (ಮೂವರ ಸಮಯ: 28.33ಸೆ).

50 ಮೀ ಬ್ರೆಸ್ಟ್‌ಸ್ಟ್ರೋಕ್: ವಿನಿತಾ ನಯನಾ (ಬಸವನಗುಡಿ; 34.96ಸೆ)-1, ಮಾನವಿ ವರ್ಮಾ (ಡಾಲ್ಫಿನ್)-2, ಎ.ಕೆ. ಲಿನೆಷಾ (ಗ್ಲೋಬಲ್)-3.

100 ಮೀ ಫ್ರೀಸ್ಟೈಲ್: ನೀನಾ ವೆಂಕಟೇಶ್ (ಡಾಲ್ಫಿನ್; 1ನಿ,0.12ಸೆ)-1, ಎಸ್. ರುಜುಲಾ(ಡಾಲ್ಫಿನ್)-2, ರಿಧಿಮಾ ವೀರೇಂದ್ರಕುಮಾರ್ (ಬಸವನಗುಡಿ)-3

100 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಡಾಲ್ಫಿನ್; 1ನಿ,04.38ಸೆ)-1, ತನಿಷಿ ಗುಪ್ತಾ (ಡಾಲ್ಫಿನ್)-2, ಎ. ಜೆಡಿಡಾ (ಡಿಕೆವಿ ಅಕ್ವೆಟಿಕ್ ಸೆಂಟರ್)-3.

100 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ್ (ಬಸವನಗುಡಿ; 1ನಿ,05.81ಸೆ)-1, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್ ಅಕ್ವೆಟಿಕ್ಸ್)-2, ರಿತು ಭರಮರೆಡ್ಡಿ (ಬಸವನಗುಡಿ)-3.

200 ಮೀ ಬ್ರೆಸ್ಟ್‌ಸ್ಟ್ರೋಕ್: ಎಸ್. ಲಕ್ಷ್ಯಾ (ಬಸವನಗುಡಿ; 2ನಿ,46.78ಸೆ)-1, ಎ.ಕೆ. ಲಿನೆಶಾ (ಗ್ಲೋಬಲ್ ಸ್ವಿಮ್ ಸೆಂಟರ್)-2, ಮಾನವಿ ವರ್ಮಾ (ಡಾಲ್ಫಿನ್)-3

200 ಮೀ ಮೆಡ್ಲೆ: ಮಾನವಿ ವರ್ಮಾ (ಡಾಲ್ಫಿನ್; 2ನಿ,29.77ಸೆ)-1, ಎ. ಜೆಡಿಡಾ (ಡೆಕೆವಿ)-2, ತನಿಷಿ ಗುಪ್ತಾ (ಡಾಲ್ಫಿನ್)-3

1500 ಮೀ ಫ್ರೀಸ್ಟೈಲ್: ಶಿರಿನ್ (ಬಸವನಗುಡಿ; 18ನಿ, 29.98ಸೆ)-1, ಅಸ್ಮಿತಾ ಚಂದ್ರ (ಗಾಫ್ರೆ)-2, ಅದಿನಿ ಎನ್. ಮೂಲ್ಯ (ಬಸವನಗುಡಿ)-3.

ಟಿಟಿ: ಗೌರವ್, ಆಯುಷಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವ್ ಗೌಡ ಮತ್ತು ಆಯುಷಿ ಬಿ. ಗೋಡ್ಸೆ ಅವರು ಬಳ್ಳಾರಿಯಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷ-ದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಗೌರವ್ 11-8, 11-5, 11-5, 11-13, 11-7ರಿಂದ ಶಶಾಂಕ್ ಕೇಶವರಾವ್ ಅವರನ್ನು ಸೋಲಿಸಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಆಯುಷಿ 11-5, 11-7, 5-11, 10-12, 11-8, 11-7ರಿಂದ ಹಿಯಾ ಸಿಂಗ್ ಅವರನ್ನು ಮಣಿಸಿದರು.

ಕ್ರೀಡಾ ಸುವರ್ಣಯುಗದತ್ತ ಭಾರತ

ಕಾಮನ್‌ವೆಲ್ತ್ ಕೂಟ: ಅಥ್ಲೀಟ್‌ಗಳಿಗೆ ಅಭಿನಂದಿಸಿ ಪ್ರಧಾನಿ ಮೋದಿ



ಸಮಾರಂಭದಲ್ಲಿ ಭಾಗವಹಿಸಿದ್ದ ಅಥ್ಲೀಟ್‌ಗಳು– ಪಿಟಿಐ ಚಿತ್ರಗಳು

ನವದೆಹಲಿ (ಪಿಟಿಐ): ಭಾರತವು ಕ್ರೀಡಾಕ್ಷೇತ್ರದ ಸುವರ್ಣಯುಗದ ಸನಿಹದಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ದೇಶದ ಅಥ್ಲೀಟ್‌ಗಳಿಗೆ ಶನಿವಾರ ತಮ್ಮ ನಿವಾಸದಲ್ಲಿ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ಒಟ್ಟು 61 ಪದಕಗಳನ್ನು ಜಯಿಸಿತ್ತು. ಅದರಲ್ಲಿ 22 ಚಿನ್ನ, 16 ಬೆಳ್ಳಿ ಮತ್ತು 23 ಕಂಚಿನ ಪದಕಗಳಿದ್ದವು.

'ಕೇವಲ ಪದಕ ಗಳಿಕೆಯ ಆಧಾರದ ಮೇಲೆ ಅಥ್ಲೀಟ್‌ಗಳ ಸಾಮರ್ಥ್ಯವನ್ನು ಅಳೆಯಲು ಸಾಧ್ಯವಿಲ್ಲ. ನಮ್ಮ ಕ್ರೀಡಾಪಟುಗಳು ತೀವ್ರ ಪೈಪೋಟಿ ನಡೆಸಿದರು. ಒಂದು ಸೆಕೆಂಡ್ ಅಥವಾ ಒಂದು ಸೆಂಟಿಮೀಟರ್ ವ್ಯತ್ಯಾಸ ಆಗಿರಬಹುದು. ಅವರ ಪ್ರದರ್ಶನಮಟ್ಟದಲ್ಲಿ ಇನ್ನಷ್ಟು ಸುಧಾರಣೆ ಕಂಡುಬರುವ ವಿಶ್ವಾಸ ನನಗಿದೆ' ಎಂದು ಮೋದಿ ಹೇಳಿದ್ದಾರೆ.

'ಇದು ಆರಂಭ ಮಾತ್ರ. ನಾವು ಸುಮ್ಮನೆ ಕೂರುವುದಿಲ್ಲ. ಭಾರತ ಕ್ರೀಡಾಕ್ಷೇತ್ರದ ಸುವರ್ಣಯುಗವು ಬಾಗಿಲು ಬಡಿಯುತ್ತಿದೆ. ಜಗತ್ತಿನ ಶ್ರೇಷ್ಠ ಕ್ರೀಡಾವ್ಯವಸ್ಥೆ ರೂಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ಯಾವ ಪ್ರತಿಭೆಗಳೂ ಹೊರಗುಳಿಯಬಾರದು' ಎಂದು ಮೋದಿ ನುಡಿದರು.

ಕಾಮನ್‌ವೆಲ್ತ್ ಕೂಟದ ಬ್ಯಾಡ್ಮಿಂಟನ್, ಕುಸ್ತಿ ಮತ್ತು ವೇಟ್‌ಲಿಫ್ಟಿಂಗ್‌ನಲ್ಲಿ ಭಾರತ, ಉತ್ತಮ ಸಾಮರ್ಥ್ಯ ತೋರಿತ್ತು. ಅಥ್ಲೆಟಿಕ್ಸ್, ಜೂಡೊ ಮತ್ತು ಲಾನ್‌ಬಾಲ್ಸ್‌ಗಳಲ್ಲೂ ಪದಕಗಳು ಬಂದಿದ್ದವು.

ಈ ಕುರಿತು ಮಾತನಾಡಿದ ಮೋದಿ 'ಈ ಬಾರಿ ಹೊಸ ಕ್ರೀಡೆಗಳಲ್ಲೂ ನಾವು ಪದಕ ಜಯಿಸಿದೆವು. ಈ ರೀತಿಯ ಪ್ರದರ್ಶನವು ಹೊಸ ಕ್ರೀಡೆಗಳಲ್ಲಿ ಯುವಜನರ ಆಸಕ್ತಿಯನ್ನು ಹೆಚ್ಚಿಸಲಿದೆ' ಎಂದರು.

ಐಒಎ ನಗದು ಬಹುಮಾನ: ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಕ್ರೀಡಾಕೂಟದಲ್ಲಿ ಚಿನ್ನದ ಪದಕ ವಿಜೇತರಿಗೆ ₹ 20 ಲಕ್ಷ, ಬೆಳ್ಳಿ ಗೆದ್ದವರಿಗೆ ₹ 10 ಲಕ್ಷ ಮತ್ತು ಕಂಚು ವಿಜೇತರಿಗೆ ₹ 7.5 ಲಕ್ಷ ನಗದು ಬಹುಮಾನ ನೀಡಿದೆ.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೈಗವಸು ನೀಡಿದ ಬಾಕ್ಸರ್ ನಿಖತ್ ಜರೀನ್. ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಇದ್ದಾರೆ

ಹಾಕಿ: ಚಿನ್ಮಯ ವಿದ್ಯಾಲಯಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸೆಂಟಿನರಿ ಶೀಲ್ಡ್ ಅಂತರ ಶಾಲಾ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆದ ಚಿನ್ಮಯ ವಿದ್ಯಾಲಯ ತಂಡ. ಕುಳಿತವರು: (ಎಡದಿಂದ) ಮಹೇಂದ್ರ, ಅಮೋಘ್, ಎಂ.ಗೌಸ್, ಧ್ರುವ್ ತೇಜ್, ಆದಿತ್ಯ, ಮಿಥುನ್, ಭುವನ್. ನಿಂತವರು: ತೇಜಸ್, ಯಶ್ವಂತ್, ಸಿದ್ದಾರ್ಥ್, ಚೇತನ್, ಕುಶಾಲ್ ರೆಡ್ಡಿ, ಗಿರೀಶ್ (ಕೋಚ್), ಮನೀಷ್, ಶ್ರೀಕರನ್, ಪರಾಗ್, ಆದವ್ಯ –ಪ್ರಜಾವಾಣಿ ಚಿತ್ರ

ಬೆಂಗಳೂರು: ಪ್ರಬಲ ಪೈಪೋಟಿ ನಡೆದ ಪಂದ್ಯದಲ್ಲಿ ಸೇಂಟ್ ಜೋಸೆಫ್ಸ್ ಬಾಲಕರ ಹೈಸ್ಕೂಲ್ ತಂಡವನ್ನು 2–1 ರಲ್ಲಿ ಮಣಿಸಿದ ಚಿನ್ಮಯ ವಿದ್ಯಾಲಯ ತಂಡ, 17 ವರ್ಷದೊಳಗಿನವರ ಸೆಂಟಿನರಿ ಶೀಲ್ಡ್ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಸಾಯಿ ಶ್ರೀಕರನ್ ಅವರು 27ನೇ ನಿಮಿಷದಲ್ಲಿ ಚಿನ್ಮಯ ತಂಡದ ಮೊದಲ ಗೋಲು ಗಳಿಸಿದರೆ, ಕೆ.ಚೇತನ್ ಅವರು 35ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮರುಹೋರಾಟ ನಡೆಸಿದ ಸೇಂಟ್ ಜೋಸೆಫ್ಸ್ ತಂಡದ ಡಿ.ಎಸ್.ಆಶೀಶ್ 39ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿದರು. ಒಂದು ಗೋಲಿನ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಂಡ ಚಿನ್ಮಯ ವಿದ್ಯಾಲಯ ಪಂದ್ಯ ಜಯಿಸಿತು.

ವಿದ್ಯಾಶಿಲ್ಪ ತಂಡಕ್ಕೆ ಪ್ರಶಸ್ತಿ: ವಿದ್ಯಾಶಿಲ್ಪ ಅಕಾಡೆಮಿ ತಂಡದವರು ಫಾ. ಎರಿಕ್ ವಾಜ್ ಸ್ಮಾರಕ 14 ವರ್ಷದೊಳಗಿನವರ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಫೈನಲ್‌ನಲ್ಲಿ ವಿದ್ಯಾಶಿಲ್ಪ, ಪೆನಾಲ್ಟಿ ಶೂಟೌಟ್‌ನಲ್ಲಿ ಸೇಂಟ್ ಜೋಸೆಫ್ಸ್ ಬಾಲಕರ ತಂಡವನ್ನು ಸೋಲಿಸಿತು. ನಿಗದಿತ ಅವಧಿಯಲ್ಲಿ ಪಂದ್ಯ 1-1ರಲ್ಲಿ ಡ್ರಾದಲ್ಲಿ ಕೊನೆಗೊಂಡಿತು.

ಸ್ಕಂದ ಕೌಶಿಕ್, 5ನೇ ನಿಮಿಷದಲ್ಲಿ ವಿದ್ಯಾಶಿಲ್ಪ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರೆ, ಜೊಯೆಲ್ ಪೌಲ್ ಅವರು 36ನೇ ನಿಮಿಷದಲ್ಲಿ ಜೋಸೆಫ್ಸ್ ತಂಡಕ್ಕೆ ಸಮಬಲದ ಗೋಲು ಗಳಿಸಿದರು. ಪೆನಾಲ್ಟಿ ಶೂಟೌಟ್‌ನಲ್ಲಿ ಹರ್ಷ ಮತ್ತು ಆರ್ನವ್ ವಿಘ್ನೇಶ್ ಅವರು ವಿದ್ಯಾಶಿಲ್ಪ ಪರ ಹಾಗೂ ಎನ್.ವಿ.ಬ್ರೆಂಡನ್ ಮತ್ತು ಬ್ರೆಂಡನ್ ಜೋ ಅವರು ಜೋಸೆಫ್ಸ್ ಪರವೂ ಗೋಲು ತಂದಿತ್ತರು. ಆ ಬಳಿಕ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ ಹರ್ಷ, ವಿದ್ಯಾಶಿಲ್ಪಕ್ಕೆ ಜಯದ ಗೋಲು ಗಳಿಸಿಕೊಟ್ಟರು.

ಫುಟ್‌ಬಾಲ್: ಶರತ್ ಮಿಂಚು

ಬೆಂಗಳೂರು: ಶರತ್ ರಾಜ್‌ಕುಮಾರ್ ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಸಿ. ಪುಟ್ಟಯ್ಯ ಸ್ಮಾರಕ ಟ್ರೋಫಿ ಬಿಡಿಎಫ್‌ಎ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 3–1ರಿಂದ ಕೊಡಗು ಎಫ್‌ಸಿ ತಂಡವನ್ನು ಮಣಿಸಿತು. ಶರತ್ ಏಳು ಮತ್ತು 37ನೇ ನಿಮಿಷಗಳಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು. ವಿಜೇತ ತಂಡದ ಇನ್ನೊಂದು ಗೋಲು ಅಭಿಷೇಕ್ ಶಂಕರ್ ಪೊವಾರ್ (13ನೇ ನಿ.) ಮೂಲಕ ಬಂದಿತು.

ಕೊಡಗು ಎಫ್‌ಸಿಗಾಗಿ ಗಗನದೀಪ್ ಮೇವಾ ಸಿಂಗ್ (65ನೇ ನಿ. ಪೆನಾಲ್ಟಿ) ಅವರು ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬಿಎಫ್‌ಸಿ 1–0ಯಿಂದ ರೂಟ್ಸ್ ಎಫ್‌ಸಿ ಎದುರು ಜಯ ಸಾಧಿಸಿತು.



ಹೌದು, ನಮ್ಮ ಸ್ವತಂತ್ರ ಭಾರತಕ್ಕೆ ಈಗ ಭರ್ತಿ 75 ವರ್ಷ! ಅಮೃತ ಮಹೋತ್ಸವದ ತಿಟ್ಹತ್ತಿ ತಿರುಗಿ ನೋಡಿದರೆ ಸಂಭ್ರಮ, ವಿಷಾದ ಒಟ್ಟೊಟ್ಟಿಗೇ ಆಗುತ್ತವೆ. ಏಳೂವರೆ ದಶಕಗಳ ಪಯಣದ ಹಿನ್ನೋಟದ ಜತೆಗೆ ದೇಶದ ಭವಿಷ್ಯದ ಚಿಂತನೆಗಳು ಪುರವಣಿಯ ಈ ವಾರದ ವಿಶೇಷ...

ಅಮೃತದ ಹೊನಲು...

ಕಲೆ: ಸೂರ್ಯ ಶೆಟ್ಟಿ

ನೈಜ ಸ್ವಾತಂತ್ರ್ಯ ಎಂದರೇನು? ಅದರ ಅರ್ಥ ಹೇಳಲೇನು?

ಸುಂದರ್ ಸರುಕ್ಕೈ



ಸಾಮಾನ್ಯವಾಗಿ ಸ್ವಾವಲಂಬನೆಯನ್ನು (Independence) ಸ್ವಾತಂತ್ರ್ಯದೊಂದಿಗೆ (Freedom) ಸಮೀಕರಿಸುತ್ತಾ ಜನ ಗೊಂದಲಕ್ಕೆ ಬೀಳುತ್ತಾರೆ. ಭಾರತವು 1947ರಲ್ಲಿ ಸ್ವಾವಲಂಬನೆಯನ್ನೇನೋ ಸಾಧಿಸಿದೆ. ಆದರೆ, ಅದು ಸ್ವತಂತ್ರಗೊಂಡಿದೆಯೇ? ಸ್ವಾವಲಂಬನೆ ಮತ್ತು ಸ್ವಾತಂತ್ರ್ಯದ ನಡುವೆ ಬಹು ಸೂಕ್ಷ್ಮ ಹಾಗೂ ಅಷ್ಟೇ ಮುಖ್ಯ ವ್ಯತ್ಯಾಸವಿದೆ. ಸ್ವಾವಲಂಬನೆ ಎನ್ನುವುದು ಇನ್ನೊಬ್ಬರ ಅವಲಂಬನೆಯಿಂದ ಸಂಪೂರ್ಣವಾಗಿ ಮುಕ್ತರಾಗುವುದು. ಆದರೆ, ಸ್ವಾತಂತ್ರ್ಯದ ಅರ್ಥ ಇನ್ನೂ ವಿಶಾಲವಾಗಿದೆ. ಮುಕ್ತ ಅಥವಾ ಸ್ವತಂತ್ರರಾಗುವುದರಲ್ಲಿ ಎರಡು ವಿಧ: ಒಂದು, ನಿರ್ಬಂಧಗಳು ಮತ್ತು ಅವಲಂಬನೆಯಿಂದ ಮುಕ್ತರಾಗುವುದು (freedom-from). ಇನ್ನೊಂದು, ನಾವು ಬಯಸಿದ್ದನ್ನು ಮಾಡಲು ಸ್ವತಂತ್ರರಾಗುವುದು (freedom-towards). ನಿರ್ಬಂಧಗಳಿಂದ ಬಿಡುಗಡೆ ಹೊಂದಿದ ಮಾತ್ರಕ್ಕೆ ನಾವು ಪರಿಪೂರ್ಣ ಸ್ವಾತಂತ್ರ್ಯ ಪಡೆದಂತಲ್ಲ. ಬಯಸಿದ್ದನ್ನು ಮಾಡುವ ಮುಕ್ತ ಅವಕಾಶದ ಪರಿಕಲ್ಪನೆಯನ್ನು ಸರಿಯಾಗಿ ಅರ್ಥೈಸಿಕೊಂಡರಷ್ಟೇ ನಾವು ನೈಜ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯ.

ಇಷ್ಟಾಗಿಯೂ, ರಾಷ್ಟ್ರದ ಸ್ವಾತಂತ್ರ್ಯವು ವ್ಯಕ್ತಿಗತ ಸ್ವಾತಂತ್ರ್ಯಕ್ಕಿಂತ ಭಿನ್ನ ಎನ್ನುವುದನ್ನು ಇಲ್ಲಿ ಒತ್ತಿ ಹೇಳಬೇಕು. ಯಾವುದೇ ವ್ಯಕ್ತಿಯೊಬ್ಬ ಸ್ವತಂತ್ರಗೊಂಡ ಮಾತ್ರಕ್ಕೆ ಆತ/ಅವಳು ಮನಬಂದಂತೆ ನಡೆದುಕೊಳ್ಳುವಂತಿಲ್ಲ. ಉದಾಹರಣೆಗೆ, ನಾವು ಕರ ಪಾವತಿಸುವುದನ್ನು ನಿರಾಕರಿಸುವಂತಿಲ್ಲ ಅಥವಾ ಯಾರದ್ದೋ ಹಣವನ್ನು ದೋಚುವಂತೆಯೂ ಇಲ್ಲ. ಆದರೆ, ಅದೇ ಕಾಲಕ್ಕೆ ನಾವು ಹಲವು ಕ್ರಿಯೆಗಳನ್ನು ಮುಕ್ತರಾಗಿ ಮಾಡಬಹುದು. ಸ್ವಾತಂತ್ರ್ಯವೆಂದರೆ ಆಯ್ಕೆಯ ಅವಕಾಶ ಎಂದು ಹೆಚ್ಚಿನವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಇದನ್ನು ಶಾಪಿಂಗ್ ಉದಾಹರಣೆ ಮೂಲಕ ನೋಡಬಹುದು. ಅಲ್ಲಿ ಖರೀದಿಸಲು ಹೆಚ್ಚಿನ ಆಯ್ಕೆಗಳಿವೆ ಎಂದರೆ, ನಾವು ಬಯಸಿದ್ದನ್ನು ಕೊಳ್ಳುವ ಸ್ವಾತಂತ್ರ್ಯ ನಮಗಿದೆ ಎಂದು ನಾವು ಪರಿಭಾವಿಸುತ್ತೇವೆ.

ಆದರೆ, ಸ್ವತಂತ್ರರಾಗುವುದೆಂದರೆ ಗ್ರಾಹಕನ ಆಯ್ಕೆಯ ಅವಕಾಶಕ್ಕಿಂತ ಹೆಚ್ಚಿನದು. ನೀವು ಬಯಸಿದ್ದನ್ನು ಯಾವುದೇ ಭಯವಿಲ್ಲದೆ ಮಾಡುವ ಸಾಮರ್ಥ್ಯ ಅದು. ಯಾವ ದೇಶದ ಬೀದಿಗಳಲ್ಲಿ ಮಹಿಳೆಯು ಒಬ್ಬಂಟಿಯಾಗಿ ಮಧ್ಯರಾತ್ರಿಯೂ ಓಡಾಡಲು ಸಾಧ್ಯವೋ, ಯಾವ ದೇಶದ ಮಗುವೊಂದು ಯಾವುದೇ ಭಯವಿಲ್ಲದೆ ರಸ್ತೆ ದಾಟಲು ಸಾಧ್ಯವೋ, ಯಾವ ದೇಶದಲ್ಲಿ ಪ್ರಜೆಗಳು ಆಹಾರ ಮತ್ತು ಶುದ್ಧ ಕುಡಿಯುವ ನೀರಿನ ಕೊರತೆಯ ಆತಂಕವನ್ನು ಅನುಭವಿಸುವುದಿಲ್ಲವೋ ಅದೇ ಮುಕ್ತ ರಾಷ್ಟ್ರ. ಭಯ ಮುಕ್ತ ಎನ್ನುವುದು ಹೆಚ್ಚಾಗಿ ರಾಜಕೀಯ ಸ್ವಾತಂತ್ರ್ಯದ ವ್ಯಾಖ್ಯಾನ. ನೆಲದ ಕಾನೂನು ಉಲ್ಲಂಘನೆ ಆಗದಂತೆ ಎಚ್ಚರಿಕೆ ವಹಿಸಿ ಯಾವುದೇ ಕ್ರಿಯೆಯನ್ನು ನಡೆಸಲು ಪ್ರಜೆಗಳು ಮುಕ್ತರಾಗಿರುವ ವಾತಾವರಣ ನಿರ್ಮಾಣವಾದರೆ ಆಗ ದೇಶ ನಿಜವಾಗಿಯೂ ಸ್ವತಂತ್ರವಾದಂತೆ.

ರಾಷ್ಟ್ರದ ಸ್ವಾವಲಂಬನೆಯನ್ನು, ಅದರ ಆಯ್ಕೆಯ ಸ್ವಾತಂತ್ರ್ಯ ಎಂದು ಪರಿಭಾವಿಸಬೇಕಿಲ್ಲ. ಇದೇನು ದೇಶ ತನ್ನ ಮನಬಂದಂತೆ ನಡೆದುಕೊಳ್ಳಲು ಸಿಕ್ಕ ಮುಕ್ತ ಅವಕಾಶವೂ ಅಲ್ಲ. ಸಾಮಾನ್ಯವಾಗಿ ದೇಶ ಮತ್ತು ಅಧಿಕಾರದಲ್ಲಿರುವ ಸರ್ಕಾರ ಎರಡನ್ನೂ ಸಮೀಕರಿಸುವ ತಪ್ಪನ್ನು ನಾವು ಮಾಡುತ್ತೇವೆ. ದೇಶದ ಸ್ವಾತಂತ್ರ್ಯವು ಅಧಿಕಾರ ನಡೆಸುವ ಸರ್ಕಾರಕ್ಕೆ ಸ್ವೇಚ್ಛಾಚಾರದಿಂದ ನಡೆದುಕೊಳ್ಳಲು ಕೊಟ್ಟ ಅಧಿಕಾರವೇನಲ್ಲ. ಹಾಗಾದರೆ ದೇಶದ ಸ್ವಾತಂತ್ರ್ಯದ ನಿಜವಾದ ಸ್ವರೂಪ ಏನು?

ಸ್ವತಂತ್ರ ರಾಷ್ಟ್ರದಲ್ಲಿ ಸರ್ಕಾರದ ಮೂಲಭೂತ ಕಾರ್ಯವೇನೆಂದರೆ ತನ್ನ ನಾಗರಿಕರಿಗೆ ನೈಜ ಸ್ವಾತಂತ್ರ್ಯವನ್ನು ಒದಗಿಸುವುದು. ಹೌದು, ಮುಕ್ತ ಸಮಾಜ ನಿರ್ಮಾಣದ ಆಶಯ ಈಡೇರಿಸಲು ಅದೊಂದೇ ದಾರಿ. ಹಾಗಾದರೆ ಸರ್ಕಾರವೊಂದು ತನ್ನ ಪ್ರಜೆಗಳಿಗೆ ಯಾವ ರೀತಿಯ ಸ್ವಾತಂತ್ರ್ಯವನ್ನು ಒದಗಿಸಬಲ್ಲದು? ಬಡತನದ ರೇಖೆಗಿಂತ ಕೆಳಗಿರುವ ಕೋಟ್ಯಂತರ ಜನರನ್ನು ಬಡತನದಿಂದ ಮುಕ್ತರನ್ನಾಗಿ ಮಾಡುವುದು, ಅವರಿಗೆ ಹೊಟ್ಟೆತುಂಬಾ ಊಟ, ಕುಡಿಯಲು ಶುದ್ಧ ನೀರು ಸಿಗುವಂತೆ ನೋಡಿಕೊಳ್ಳುವುದು, ಮಕ್ಕಳು ಶಾಲೆಗೆ ಹೋಗಿ, ಕಲಿಕೆಯ ಆನಂದವನ್ನು ಆಸ್ವಾದಿಸುವ ಅವಕಾಶ ನೀಡುವುದು, ಪ್ರತಿಯೊಬ್ಬ ಪ್ರಜೆಗೆ ಸಕಲ ಆರೋಗ್ಯ ಸೇವೆಗಳು ಲಭ್ಯವಾಗುವಂತೆ ಮಾಡುವುದು ಮತ್ತು ಎಲ್ಲರೂ ಭಯಮುಕ್ತರಾಗಿ ಬದುಕುವಂತಹ ವಾತಾವರಣ ನಿರ್ಮಿಸುವುದು – ಇವು ಸರ್ಕಾರವೊಂದು ತನ್ನ ಪ್ರಜೆಗಳಿಗೆ ನೀಡಬೇಕಾದ ಮೂಲಭೂತ ಸ್ವಾತಂತ್ರ್ಯಗಳು. ಬ್ರಿಟಿಷ್ ಆಡಳಿತದಿಂದ ಮುಕ್ತವಾಗಿದ್ದೊಂದೇ ಸ್ವಾತಂತ್ರ್ಯ ಎಂದು ವ್ಯಾಖ್ಯಾನಿಸುವುದಲ್ಲ.

ಕಳೆದ 75 ವರ್ಷಗಳಲ್ಲಿ ನಾವು ಸ್ವಾತಂತ್ರ್ಯವನ್ನು ಹೇಗೆ ಅನುಭವಿಸಿದ್ದೇವೆ ಮತ್ತು ಯಾವೆಲ್ಲ ಸ್ವಾತಂತ್ರ್ಯವನ್ನು ನಮ್ಮ ಜನ ಹೊಂದಿದ್ದಾರೆ? ತುಲನಾತ್ಮಕವಾಗಿ ಹೇಳುವುದಾದರೆ, ನಮ್ಮ ರಾಜಕೀಯ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವೇನೋ ನಮಗೀಗ ಇದೆ. ಆ ಅರ್ಥದಲ್ಲಿ, ಪ್ರಜಾಪ್ರಭುತ್ವದ ಉಳಿವು ನಮ್ಮಲ್ಲಿರುವ ಒಂದು ಸಕಾರಾತ್ಮಕವಾದ ಸ್ವಾತಂತ್ರ್ಯವಾಗಿದೆ. ಇನ್ನೊಂದು ನಿಟ್ಟಿನಲ್ಲಿ, ಸಮಾಜದ ಪ್ರಬಲರ ಲಾಭಕ್ಕಾಗಿಯೇ ಸ್ವಾತಂತ್ರ್ಯ ಬಳಕೆಯಾಗುತ್ತಿರುವಂತೆ ತೋರುತ್ತಿದೆ. ರಾಷ್ಟ್ರದ ಸ್ವಾತಂತ್ರ್ಯ ಎನ್ನುವುದು ಅಂಥವರ ಪಾಲಿಗೆ ವೈಯಕ್ತಿಕವಾಗಿ ದಕ್ಕಿದ ವಿಶೇಷಾಧಿಕಾರ ಎನಿಸಿಬಿಟ್ಟಿದೆ.

1922 ಮತ್ತು 2022


ನಿಜಕ್ಕೂ 75 ವರ್ಷಗಳ ಈ ಸ್ವಾತಂತ್ರ್ಯವನ್ನು ಹೇಗೆ ಅರ್ಥೈಸುವುದು? ಒಂದು ಕಲ್ಪನೆಯ ಮೂಲಕ ಇದನ್ನು ತುಂಬಾ ಸೊಗಸಾಗಿ ಅರ್ಥೈಸಿಕೊಳ್ಳಬಹುದು. ಬ್ರಿಟಿಷ್ ಆಳ್ವಿಕೆಯ ಭಾರತದ ಭಾಗವಾಗಿದ್ದ ಕರ್ನಾಟಕದಲ್ಲಿ ನೀವು 1922ರಲ್ಲಿ ಜೀವಿಸಿದ್ದಿರಿ ಎಂದು ಕಲ್ಪಿಸಿಕೊಳ್ಳಿ. 1922ರ ನಿಮ್ಮ ದೈನಂದಿನ ಜೀವನವು 2022ರ ದೈನಂದಿನ ಬದುಕಿಗಿಂತ ಹೆಚ್ಚಿನ ವ್ಯತ್ಯಾಸವೇನೂ ಇದ್ದಿರಲಾರದು. ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ನೀವು ಈಗ ಮಾಡುತ್ತಿರುವ ಹಲವು ಕ್ರಿಯೆಗಳನ್ನು ಆಗಲು ಮಾಡಿರುತ್ತಿದ್ದಿರಿ. ನಿಮ್ಮ ದೈನಂದಿನ ಆಹಾರ ಕ್ರಮವಾಗಲಿ, ಮಾತನಾಡುವ ಭಾಷೆಯಾಗಲಿ ಅಥವಾ ನಿಮ್ಮ ಆಸೆ–ಆಕಾಂಕ್ಷೆಗಳಾಗಲಿ ಈಗಿನಕ್ಕಿಂತ ಆಗ ಅಷ್ಟೊಂದು ಬದಲಾವಣೆಗಳು ಇರುತ್ತಿರಲಿಲ್ಲ. ಹಲವು ಹಬ್ಬಗಳನ್ನು ಆಗಲೂ ಈಗಿನಂತೆಯೇ ಆಚರಿಸುತ್ತಿದ್ದಿರಿ. ಆಗಿನ ಸಂದರ್ಭಕ್ಕೂ ಈಗಿನ ಸನ್ನಿವೇಶಕ್ಕೂ ನಡುವೆ ಇರುವ ಮಹತ್ತರ ಬದಲಾವಣೆಯೆಂದರೆ ತಂತ್ರಜ್ಞಾನದ ಗ್ಯಾಜೆಟ್‌ಗಳಿಗೆ ನೀವು ಈಗಿನಂತೆ ಆಗ ಆತುಕೊಂಡಿರುತ್ತಿರಲಿಲ್ಲ.

ಈ ರೀತಿಯಾಗಿ 1922ರಲ್ಲಿ ನೀವು ಕಾಲ ಕಳೆಯುತ್ತಿದ್ದಿರಿ. ದೇಶದ ಬೇರೆ ಬೇರೆ ಭಾಗದಲ್ಲಿ ವಾಸಿಸುತ್ತಿದ್ದ ಜನ ಸಹ ಹೀಗೇ ಕಾಲ ಕಳೆಯುತ್ತಿದ್ದರು. ಪ್ರಾಯಶಃ ಭಾರತವನ್ನು ಆಗ ಯಾರು 'ಆಳುತ್ತಿದ್ದಾರೆ' ಎಂದು ತಲೆಕೆಡಿಸಿಕೊಳ್ಳುವ ಗೋಜಿಗೂ ಅವರು ಹೋಗಿರುತ್ತಿರಲಿಲ್ಲ. ಒಂದುವೇಳೆ ಬ್ರಿಟಿಷರ ಆಳ್ವಿಕೆಯಿದೆ ಎಂದು ಅವರಿಗೆ ಗೊತ್ತಾಗಿದ್ದರೂ ಅಷ್ಟು ಮಾಹಿತಿಯಿಂದ ಅವರಿಗೆ ಏನು ಅರ್ಥವಾಗಿರುತ್ತಿತ್ತು? ಪ್ರಜೆಗಳ ದೈನಂದಿನ ಸಾಂಸ್ಕೃತಿಕ ಜೀವನದ ಮೇಲೆ ಆಡಳಿತದ ಪ್ರಭಾವ ಏನೂ ಇಲ್ಲದಿದ್ದರೆ ನಿಜಕ್ಕೂ ತಮ್ಮನ್ನು ಆಳುತ್ತಿರುವುದು ಯಾರು ಎಂದು ಅವರು ತಲೆ ಕೆಡಿಸಿಕೊಳ್ಳಲು ಸಾಧ್ಯವೇ? ಈ ವಿಷಯ ಚೆನ್ನಾಗಿ ಗೊತ್ತಿದ್ದಿದ್ದರಿಂದಲೇ ಬ್ರಿಟಿಷರು ಇಲ್ಲಿನ ಜನರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೈ ಹಾಕಲಿಲ್ಲ. ದೈನಂದಿನ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಜನರನ್ನು ಒತ್ತಾಯಿಸುವ ಗೋಜಿಗೂ ಅವರು ಹೋಗಲಿಲ್ಲ.

11ನೇ ಪುಟಕ್ಕೆ...

1947ರ ಸ್ವಾತಂತ್ರ್ಯ ಕೊಟ್ಟ ಭರವಸೆ ಇದಲ್ಲ

ಎ.ವಿ.ಎಸ್. ನಂಬೂದಿರಿ




ಸರಿಯಾಗಿ ಮುಕ್ಕಾಲು ಶತಮಾನ ಹಿಂದೆ ನಮ್ಮ ಮುತ್ತಾತಂದಿರು ಈ ದೇಶದಲ್ಲಿ ಹೊಸ ವ್ಯವಸ್ಥೆಯೊಂದನ್ನು ತಂದರು, ಸ್ವಾತಂತ್ರ್ಯವನ್ನು ಬಿತ್ತಿದರು ಮತ್ತು ಎಲ್ಲರೂ ಸಮಾನರು ಎಂಬ ಪ್ರತಿಪಾದನೆಯು ದೃಢವಾಗಿ ನೆಲೆಯೂರುವಂತೆ ಮಾಡಿದರು ಎಂದು ಹೇಳಿದರೆ ಅದು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿದಂತೇನೂ ಅಲ್ಲ. ಅಮೆರಿಕವು ಸ್ಥಾಪನೆಗೊಂಡು ಹಲವು ವರ್ಷಗಳ ಬಳಿಕ, ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರು ಗೆಟಿಸ್‌ಬರ್ಗ್‌ನಲ್ಲಿ ಮಾಡಿದ ಭಾಷಣದಲ್ಲಿ, ಈ ರೀತಿಯಲ್ಲಿ ಸೃಷ್ಟಿಯಾದ ದೇಶವು ಬಹು ಕಾಲ ಬಾಳೀತೇ ಎಂಬ ಪ್ರಶ್ನೆಯನ್ನು ಕೇಳಿಕೊಂಡಿದ್ದರು. ಸ್ವಾತಂತ್ರ್ಯ ಮತ್ತು ಸಮಾನತೆಯ ಆಧಾರದಲ್ಲಿ ಸ್ಥಾಪನೆಯಾದ ದೇಶವೊಂದು ಬಹುಕಾಲ ಉಳಿದೀತೇ ಎಂಬ ಪ್ರಶ್ನೆಯನ್ನು ನಾವೂ ಕೇಳಿಕೊಳ್ಳಬೇಕಾಗಿದೆ. ಅಂದು ಮಧ್ಯರಾತ್ರಿ ಭಾರತವು ಸ್ವಾತಂತ್ರ್ಯಗೊಂಡಾಗ, ದೇಶದ ವಿಧಿಯೊಂದಿಗಿನ ಮುಖಾಮುಖಿಯ ಕುರಿತು ಹಲವು ಪ್ರಶ್ನೆಗಳು ಎದ್ದಿದ್ದವು. ಸ್ವತಂತ್ರಗೊಳ್ಳುವ ಮೂಲಕ ಆ ಪ್ರತಿಜ್ಞೆಯನ್ನು ಹೇಗೆ ಜಾರಿಗೊಳಿಸಬೇಕು, ಯಾವುದೇ ಧರ್ಮಕ್ಕೆ ಸೇರಿರಲಿ ಭಾರತ ಮಾತೆಯ ಎಲ್ಲ ಮಕ್ಕಳಿಗೂ ಹಕ್ಕುಗಳು, ಸೌಲಭ್ಯಗಳು, ಬದ್ಧತೆಗಳು ಸಮಾನ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂಬ ಮಾತುಗಳು ಅಂದು ಕೇಳಿಸಿದ್ದವು. 75 ವರ್ಷಗಳ ಬಳಿಕ, ಸ್ವಾತಂತ್ರ್ಯ ಪಡೆದಾಗ ಮಾಡಿಕೊಂಡ ಪ್ರತಿಜ್ಞೆಯು ಉಳಿದಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಆ ಪ್ರತಿಜ್ಞೆಯನ್ನು ನವೀಕರಿಸಿ ರಕ್ಷಿಸಬೇಕಾದ ಅಗತ್ಯವೂ ಉಂಟಾಗಿದೆ.

1947ರ ಆಗಸ್ಟ್ 15 ಎಂಬುದು ಸ್ವಾತಂತ್ರ್ಯಕ್ಕೆ, ದೇಶದ ಸ್ವಾತಂತ್ರ್ಯಕ್ಕೆ ಮತ್ತು ಅಷ್ಟೇ ಮುಖ್ಯವಾಗಿ ದೇಶದ ಜನರ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ದಿನ. 1950ರ ಜನವರಿ 26ರಂದು ದೇಶವು ಗಣರಾಜ್ಯವಾಗಿ ಘೋಷಣೆಯಾಯಿತು. ಆ ಸಂದರ್ಭದಲ್ಲಿ ಈ ಸ್ವಾತಂತ್ರ್ಯಗಳನ್ನು ವ್ಯಾಖ್ಯಾನಿಸಿ, ಅವು ಎಲ್ಲ ಪೌರರ ಹಕ್ಕು ಎಂದು ಘೋಷಿಸಲಾಯಿತು. ಈ ಸ್ವಾತಂತ್ರ್ಯಗಳು ಕ್ರಮೇಣ ಕುಗ್ಗುತ್ತಾ ಸಾಗಿವೆ. ಪ್ರತಿಯೊಬ್ಬ ಪೌರನೂ ತನ್ನ ಹಕ್ಕುಗಳ ರಕ್ಷಣೆಗಾಗಿ ತಮ್ಮ ಸ್ವಾತಂತ್ರ್ಯದ ಒಂದು ಭಾಗವನ್ನು ಸರ್ಕಾರಕ್ಕೆ ಒಪ್ಪಿಸಿಬಿಟ್ಟಿದ್ದಾನೆ. ಸಂವಿಧಾನವು ಪೌರರಿಗೆ ನೀಡಿರುವ ಹಕ್ಕುಗಳನ್ನು ನುಂಗಿ, ಸ್ವಾತಂತ್ರ್ಯವನ್ನು ಕುಗ್ಗಿಸಿ ಸರ್ಕಾರವು ಎಷ್ಟು ಪ್ರಬಲವಾಗಿ ಇರಬೇಕೋ ಅದಕ್ಕಿಂತಲೂ ಹೆಚ್ಚು ಶಕ್ತಿ ಪಡೆದುಕೊಂಡಿದೆ. ಮಾತನಾಡುವ ಹಕ್ಕು, ಬೇಕಾದುದನ್ನು ತಿನ್ನುವ ಹಕ್ಕು, ಇಷ್ಟಪಟ್ಟ ದಿರಿಸನ್ನು ಧರಿಸುವ ಹಕ್ಕು ಮತ್ತು ಇತರ ಹಕ್ಕುಗಳಿಗೆ ಈಗ ಕುತ್ತು ಎದುರಾಗಿದೆ. ಈ ಕುತ್ತು ಎದುರಾಗಿರುವುದು ಸರ್ಕಾರದಿಂದ ಮಾತ್ರವಲ್ಲ, ಸಮಾಜದಲ್ಲಿರುವ ಗುಂಪುಗಳು, ಸಂಘಟನೆಗಳು ಮತ್ತು ಪಕ್ಷಗಳು ಕೂಡ ಇದಕ್ಕೆ ಕಾರಣವಾಗಿವೆ. ಆಗಸ್ಟ್ 15 ಜನರಿಗೆ ನೀಡಿದ್ದ ಭರವಸೆ ಇದಲ್ಲ.

ಬಹುಸಂಖ್ಯಾತವಾದವು ಮುನ್ನೆಲೆಗೆ ಬಂದಿದ್ದರಿಂದಾಗಿ ಮತ್ತು ಸರ್ಕಾರಗಳು ಜಾರಿಗೊಳಿಸಿದ ಅಸಮಾನ ನೀತಿಗಳಿಂದಾಗಿ ಎಲ್ಲ ಪೌರರೂ ಸಮಾನರು ಎಂಬ ಯೋಚನೆಯೇ ಹಿನ್ನೆಲೆಗೆ ಸರಿದಿದೆ. ಪಾಕಿಸ್ತಾನವು ಮುಸ್ಲಿಮರ ತಾಯಿ ನಾಡಾಯಿತು. ಆದರೆ, ಧರ್ಮ, ಜನಾಂಗ, ಭಾಷೆ ಮತ್ತು ಇತರ ಯಾವುದೇ ಭಿನ್ನತೆಯನ್ನೂ ಗಣನೆಗೆ ತೆಗೆದುಕೊಳ್ಳದೆ ಎಲ್ಲ ಪೌರರನ್ನು ಸಮಾನವಾಗಿ ನೋಡುವುದಾಗಿ ಭಾರತವು ಭರವಸೆ ಕೊಟ್ಟಿತು. ಆದರೆ, ಆ ಭರವಸೆಗೆ ಈಗ ಸಂಚಕಾರ ಬಂದಿದೆ. ತ್ರಿವಳಿ ತಲಾಖ್ ಅಪರಾಧ ಎಂದು ಪರಿಗಣಿಸುವ ಕಾನೂನು, ಪೌರತ್ವಕ್ಕೆ ಧಾರ್ಮಿಕ ಆಯಾಮ ಕೊಟ್ಟಿದೆ; ಬುಲ್ಡೋಜರ್ ಬಳಸಿ ಮನೆಗಳನ್ನು ಧ್ವಂಸ ಮಾಡುವಂತಹ ಕಾನೂನುಬಾಹಿರ ಕೃತ್ಯಗಳು ಅಲ್ಪಸಂಖ್ಯಾತರ ಬದುಕನ್ನು ಕಾಡುತ್ತಿವೆ; ಅಲ್ಪಸಂಖ್ಯಾತರ ವಿರುದ್ಧ ಅಭಿಯಾನಗಳು ಇತ್ತೀಚಿನ ವರ್ಷಗಳಲ್ಲಿ ನಡೆಯುತ್ತಿವೆ. ಅಲ್ಪಸಂಖ್ಯಾತರನ್ನು ಅನ್ಯ ಎಂದು ಪರಿಗಣಿಸಿ, ಮೂಲೆಗುಂಪು ಮಾಡಲಾಗಿದೆ. ಅವರಿಗೆ ಆಗಸ್ಟ್ 15 ಕೊಟ್ಟ ಭರವಸೆ ಇದಲ್ಲ.


ಸ್ವಾತಂತ್ರ್ಯಗೊಂಡಾಗ ಈ ದೇಶವು ರಾಜಾಡಳಿತದ ಹಲವು ರಾಜ್ಯಗಳು ಮತ್ತು ಬ್ರಿಟಿಷ್ ಪ್ರೆಸಿಡೆನ್ಸಿಗಳ ಗುಂಪಾಗಿತ್ತು.

9ನೇ ಪುಟಕ್ಕೆ...



ನನ್ನ ಭಾರತ

ಮತ ಮಾರಿಕೊಳ್ಳುವಷ್ಟು ಕೀಳಾದರೇ ಜನ?




ಪರತಂತ್ರದಿಂದ ಸ್ವಾತಂತ್ರ್ಯದತ್ತ ಹೆಜ್ಜೆ ಇಟ್ಟಾಗ ದೇಶ ಆರ್ಥಿಕವಾಗಿ ಹಿಂದುಳಿದಿದ್ದರೂ ಸೌಹಾರ್ದ, ಸಮನ್ವಯ, ಸಮರಸ ತತ್ವಗಳಿಗೆ ಕೊರತೆ ಇರಲಿಲ್ಲ. ಬಡತನ, ಅಸಮಾನತೆ, ಅನಕ್ಷರತೆ ನಿರ್ಮೂಲನೆ ನಮ್ಮೆಲ್ಲರ ಗುರಿಯಾಗಿತ್ತು. ಶಿಕ್ಷಣದಿಂದ ಮಾತ್ರ ಸಮಸಮಾಜ ನಿರ್ಮಿಸಲು ಸಾಧ್ಯ ಎಂಬುದು ಎಲ್ಲರ ನಂಬಿಕೆಯಾಗಿತ್ತು. ಈ ಉದ್ದೇಶ ಸಾಧನೆಗಾಗಿಯೇ ಭಾರತೀಯ ಸಂವಿಧಾನ ರಚನೆಯಾಗಿತ್ತು. ಈ ನೆಲದ ಕಾನೂನಿಗೆ ನಾವೆಲ್ಲರೂ ಒಪ್ಪಿ ಹೆಜ್ಜೆ ಆರಂಭಿಸಿದ್ದೆವು.

ಆದರೆ, ವಾಸ್ತವದಲ್ಲಿ ಈಗೇನಾಗಿದೆ? ಆರ್ಥಿಕವಾಗಿ ನಾವು ಶಕ್ತಿಯುತವಾಗಿದ್ದೇವೆ ನಿಜ. ಆದರೆ ಸೌಹಾರ್ದ, ಸಮನ್ವಯತೆಗೆ ಪೆಟ್ಟು ಬಿದ್ದಿದೆ. ಚುನಾವಣಾ ವ್ಯವಸ್ಥೆ ಸರಿಪಡಿಸಲಾಗದಷ್ಟು ಅಧೋಗತಿಗೆ ಕುಸಿದಿದೆ. ಜನರು ಮತ ಮಾರಿಕೊಳ್ಳುವಷ್ಟು ಹೀನ ಸ್ಥಿತಿಗೆ ತಲುಪಲು ಕಾರಣಕರ್ತರು ಯಾರು ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತದೆ.

ಸ್ವಾತಂತ್ರ್ಯ ಬಂದಾಗ ಚುನಾವಣೆಗಳು ಶುದ್ಧವಾಗಿದ್ದವು. ಜನರ ಖರ್ಚಿನಿಂದಲೇ ಜನಪ್ರತಿನಿಧಿಗಳು ಆರಿಸಿ ಬರುತ್ತಿದ್ದರು. ಆದರೆ ಈಗ ಮೌಲ್ಯಗಳ ಕುಸಿತ, ನೈತಿಕ ಅಧಃಪತನ ರಾರಾಜಿಸುತ್ತಿದೆ. ಕೇವಲ 75 ವರ್ಷಗಳಲ್ಲಿ ಸ್ವಾತಂತ್ರ್ಯ ತನ್ನ ಅರ್ಥ ಕಳೆದುಕೊಂಡಿದೆ. ಆಳ್ವಿಕೆಯ ಮಾರ್ಗ ಖಂಡಿತಾ ಸರಿ ಇಲ್ಲ, ದಾರಿ ಸುಧಾರಣೆಯಾಗದಿದ್ದರೆ ನಡಿಗೆ ಸುಸ್ಥಿತಿಗೆ ಬರಲಾರದು.

ಕೆ.ಟಿ.ಚಂದು, ಸ್ವಾತಂತ್ರ್ಯ ಹೋರಾಟಗಾರ, ಮದ್ದೂರು (ಮಂಡ್ಯ)

ಸಮಾನತೆಯ ಆಶಯ ಈಡೇರಲಿ



ಸ್ವಾತಂತ್ರ್ಯ ದೊರೆತು ಅಮೃತ ಮಹೋತ್ಸವ ಆಚರಿಸುತ್ತಿರುವುದು ಸಂತಸಕರವಾದದ್ದೇ. ಬಹುತ್ವದ ಭಾರತದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನೂ ಒಳಗೊಂಡಂತೆ ಹಲವರಿಗೆ ತಮ್ಮಿಷ್ಟದಂತೆ ಬದುಕುವ ಸ್ವಾತಂತ್ರ್ಯವಿದೆಯಾದರೂ ಅದಿನ್ನೂ ಪರಿಪೂರ್ಣವಾಗಿ ದಕ್ಕಿಲ್ಲ. ಎಲ್ಲೆಡೆ, ಎಲ್ಲ ರಂಗದಲ್ಲೂ ಸಮಾನತೆಯ ಹಾದಿ ಇನ್ನೂ ದೂರವಿದೆ.

ಲಿಂಗತ್ವ ಅಲ್ಪಸಂಖ್ಯಾತೆಯಾಗಿರುವ ನನ್ನನ್ನೂ ಒಳಗೊಂಡು ಅನೇಕರಿಗೆ ಸರ್ಕಾರ ಉನ್ನತ ಸ್ಥಾನಮಾನ ನೀಡಿರುವುದು ಶ್ಲಾಘನೀಯ. ಆದರೆ, ಸಮಾಜ ಮಾತ್ರ ನಮ್ಮನ್ನು ಇನ್ನೂ ಮುಕ್ತವಾಗಿ ಒಪ್ಪಿಕೊಂಡಿಲ್ಲ. ಅದರಲ್ಲೂ ಪೋಷಕರು ತಮ್ಮ ಮಗ ಸುಳ್ಳ, ಕಳ್ಳ, ಕೊಲೆಗಡುಕ ಏನೇ ಆಗಿರಲಿ ಒಪ್ಪಿಕೊಂಡು ಬಿಡುತ್ತಾರೆ. ಅದೇ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವ ಅಂದರೆ ಸಾಕು ಏನೋ ಆಗಬಾರದ್ದು ಆಗಿದೆ ಎಂಬಂತೆ ವರ್ತಿಸುತ್ತಾರೆ.

ನನ್ನ ಭಾರತದಲ್ಲಿ ಮುಂದಿನ ದಿನಗಳಲ್ಲಿ ನಮ್ಮನ್ನೂ ಪೋಷಕರು ಒಪ್ಪಿಕೊಳ್ಳುವ ವಾತಾವರಣ ನಿರ್ಮಾಣವಾಗಲಿ ಅನ್ನುವ ಆಶಯ ನನ್ನದು. ಮುಖ್ಯವಾಗಿ ನಮ್ಮ ಸಮುದಾಯದಕ್ಕೆ ಶಿಕ್ಷಣದ ಅಗತ್ಯವಿದೆ. ಶಾಲಾ–ಕಾಲೇಜುಗಳಲ್ಲಿ ಉಚಿತ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವ ಅಗತ್ಯವಿದೆ. ಇಂದು ಹೆಣ್ಣು ಗಂಡಿಗೆ ಸರಿಸಮಾನವಾಗಿ ಎಲ್ಲ ರಂಗಗಳಲ್ಲೂ ಜೊತೆಯಾಗಿ ಸಾಗುತ್ತಿದ್ದಾಳೆ. ಅಂತೆಯೇ ಇವರಿಬ್ಬರಿಗೆ ಸಮನಾಗಿ ಲಿಂಗತ್ವ ಅಲ್ಪಸಂಖ್ಯಾತರು ಜತೆಯಾಗಿ ಸಾಗುವ ದಿನಗಳು ಬರಬೇಕಿದೆ. ಈ ಬಗ್ಗೆ ನಾನಂತೂ ಆಶಾವಾದಿಯಾಗಿದ್ದೇನೆ. ಮಧ್ಯರಾತ್ರಿಯಲ್ಲಿ ಒಂಟಿ ಮಹಿಳೆಯಷ್ಟೇ ಅಲ್ಲ, ನಮ್ಮ ಸಮುದಾಯದವರೂ ನಿರ್ಭೀತಿಯಿಂದ ಓಡಾಡುವ ದಿನಗಳು ಬರಲಿ. ಬಸವಣ್ಣ, ಅಂಬೇಡ್ಕರ್ ಅವರ ಸಮಾನತೆಯ ಕನಸು ನನಸಾಗಲಿ.

ಮಂಜಮ್ಮ ಜೋಗತಿ, ಜಾನಪದ ಕಲಾವಿದೆ, ಬಳ್ಳಾರಿ

ನಿಜದ ಭಾರತ ಎನ್ನುವಂತೆ ಬಿಂಬಿಸುವ ಯತ್ನ



'ಭಾರತಕ್ಕೆ ಸ್ವಾತಂತ್ರ್ಯ' ಎನ್ನುವ ಪರಿಕಲ್ಪನೆ ಶಾಲೆಯಲ್ಲಿ ಮೊದಲು ಕಲಿತಾಗ ಕಣ್ಣಮುಂದೆ ಬರುತ್ತಿದ್ದುದು ನಾಡಗೀತೆಯ 'ಸರ್ವ ಜನಾಂಗದ ಶಾಂತಿಯ ತೋಟ'. ಒಬ್ಬರ ಪಕ್ಕ ಇನ್ನೊಬ್ಬರು ಕೂತು ಉಣ್ಣುವ, ಆಡುವ, ದೊಡ್ಡವರಾಗುವ ಕನಸಲ್ಲಿ ಧರ್ಮ ರಾಜಕಾರಣವಿರಲಿಲ್ಲ, ಕುತ್ಸಿತ ಮನೋಭಾವ ಇರಲಿಲ್ಲ. ಮುಂದೆಂದೂ ನಾವೆಲ್ಲರೂ ಒಂದೇ ಎನ್ನುವ ಭಾವವೊಂದೇ ಇತ್ತು. ಆದರೆ 75ರ ಸ್ವಾತಂತ್ರ್ಯದ ಹೊಸ್ತಿಲಲ್ಲಿ ನಿಂತು ನೋಡುವಾಗ ಒಂದೇ ತಟ್ಟೆಯಲ್ಲಿ ಅನ್ನ ಹಂಚಿಕೊಂಡು ಉಣ್ಣುತ್ತಿದ್ದವರು ದೂರಾಗಿರುವ ಸತ್ಯ ಕಣ್ಣಿಗೆ ರಾಚುತ್ತದೆ. ಈಗೀಗ ಪರಸ್ಪರ ಅಪನಂಬಿಕೆ ಎಷ್ಟರ ಮಟ್ಟಿಗೆ ಇದೆಯೆಂದರೆ ಅಪರಿಚಿತರನ್ನು ಕ್ಷಣಮಾತ್ರಕ್ಕೆ ದಿಟ್ಟಿಸಿದರೂ ಸಣ್ಣದೊಂದು ಆತಂಕ ಮೂಡುತ್ತದೆ. ನಿಜ, ದೇಶದ ಬಹುಪಾಲು ಜನ ಹೀಗಿಲ್ಲ. ಈ ನೆಲ ಹೊಟ್ಟನ್ನೆಲ್ಲಾ ತೂರಿ ಗಟ್ಟಿ ಕಾಳನ್ನು ಹಿಡಿದಿಟ್ಟುಕೊಳ್ಳುವಷ್ಟು ಶಕ್ತ ಮತ್ತು ಸತ್ವಯುತ. ಆದರೆ ಮುಖ್ಯವಾಹಿನಿಯಲ್ಲಿ ಸೌಹಾರ್ದ, ಶಾಂತಿ ಬಯಸದ ಕೆಲವೇ ಕೆಲವು ಮಂದಿ ರಾರಾಜಿಸುತ್ತಿದ್ದಾರೆ. ಅದೇ 'ನಿಜದ ಭಾರತ' ಎನ್ನುವಂತೆ ಬಿಂಬಿಸುವ ಪ್ರಯತ್ನ ನಡೆಯುತ್ತಿದೆ.

ಈ ದೇಶದಲ್ಲಿ ಶಿಕ್ಷಣದ ಪ್ರಮಾಣ ಹೆಚ್ಚಾದರೆ ಸಾಂಸ್ಕೃತಿಕ ವೈವಿಧ್ಯ ಮತ್ತು ಕೊಡುಕೊಳ್ಳುವಿಕೆ ಹೆಚ್ಚಾಗುತ್ತದೆ ಎಂದು ನಾವು ನಂಬಿಕೊಂಡಿದ್ದೆವು. ಹೆಚ್ಚು ಶಿಕ್ಷಿತರಾದಂತೆ ಹೆಚ್ಚು ವಿಚಾರವಂತರಾಗಬೇಕಿತ್ತು, ಹೆಚ್ಚು ಪ್ರಜ್ಞಾವಂತರಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಅದರ ಬದಲು ಅಶಿಕ್ಷಿತ ಅಥವಾ ಕಡಿಮೆ ಶಿಕ್ಷಣವಿದ್ದ ನಮ್ಮ ಹಿಂದಿನ ತಲೆಮಾರು ಅತ್ಯಂತ ಜತನದಿಂದ ಕಾಯ್ದುಕೊಂಡು ಬಂದಿದ್ದ ಸೌಹಾರ್ದವನ್ನು ಹಾಳು ಮಾಡಿದ್ದೇವೆ.

ಫಾತಿಮಾ ರಲಿಯಾ, ಕಥೆಗಾರ್ತಿ, ಹೆಜಮಾಡಿ, ಉಡುಪಿ

'ನನ್ನ ಕನಸಿನ ಭಾರತ ಎಂತಹದ್ದು, ವಾಸ್ತವಿಕ ಭಾರತ ಹೇಗಿದೆ' ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಮೂರು ತಲೆಮಾರಿನವರು (25 +, 50 + ಮತ್ತು 75 +) ನಡೆಸಿದ ವಿಶ್ಲೇಷಣೆಗಳು ಪುರವಣಿಯ ಪುಟಗಳಲ್ಲಿ ಹರಡಿವೆ. ಈ ವಿಶ್ಲೇಷಣೆಗಳಲ್ಲಿ ಭಾರತದ ಕುರಿತು ಹಲವು ಕನಸುಗಳು ಬಿಚ್ಚಿಕೊಂಡಿವೆ. ವಾಸ್ತವದ ಬಿಕ್ಕಟ್ಟುಗಳಿಗೆ ಮರುಕವೂ ಇದೆ. ಮೈಕೊಡವಿ ಎದ್ದು ನಿಲ್ಲುವ ಉತ್ಸಾಹವೂ ಈ ಸಾಲುಗಳಲ್ಲಿ ತುಂಬಿಕೊಂಡಿದೆ.

ನಿರ್ವಹಣೆ: ಮಂಜುಶ್ರೀ ಕಡಕೋಳ, ಶರತ್ ಹೆಗ್ಡೆ, ಯೋಗೇಶ್ ಎಂ.ಎನ್., ಪ್ರಮೋದ್, ಅಭಿಲಾಷ್ ಪಿ.ಎಸ್.

ತೆಟ್ಟತ್ತಿ ತಿರುಗಿ ಯಾರ್‍ಯಾರ ನೆನೆಯಲಿ

ದು.ಸರಸ್ವತಿ



ಸ್ವಾತಂತ್ರ್ಯದ ಆಂದೋಲನದಲ್ಲಿ ದಲಿತರು, ಆದಿವಾಸಿಗಳು, ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು, ಧಾರ್ಮಿಕ ಅಲ್ಪಸಂಖ್ಯಾತರ ಹೋರಾಟ ಅಸಾಧಾರಣವಾದರೂ ಚರಿತ್ರೆಯಲ್ಲಿ ಅದು ಅದೃಶ್ಯವೇ ಆಗಿದೆ. ಜನರಿಲ್ಲದೆ ಧರಣಿ, ಮೆರವಣಿಗೆ, ಚಳವಳಿ, ಹೋರಾಟಗಳಿಗೆ ಅರ್ಥವೇ ಇಲ್ಲ. ಮುಖಂಡರ ಕರೆಗಳಿಗೆ ಜನರು ಓಗೊಡದೆ, ಅವರ ವಿಚಾರಕ್ಕೆ ತಕ್ಕಂತೆ ನಡೆದುಕೊಳ್ಳದೆ ಇದ್ದಿದ್ದರೆ ಸ್ವಾತಂತ್ರ್ಯ ಸಾಧ್ಯವಾಗಿರುತ್ತಿತ್ತೇ? ದುಡಿದು ಕಟ್ಟದಿದ್ದರೆ ನಾಡು ಹುಟ್ಟುವುದು ಸಾಧ್ಯವಿತ್ತೇ? ಹಾಗಾದರೆ ಈ ಜನ, ಅದರಲ್ಲೂ ಮಹಿಳೆಯರು, ಹೇಗೆ ಕಾಣೆಯಾಗುತ್ತಾರೆ ಇತಿಹಾಸದ ಪುಟಗಳಿಂದ?

ರಸ್ತೆ, ಕಟ್ಟಡ, ಫ್ಲೈಓವರ್, ಮೆಟ್ರೊ ಕಟ್ಟಿದವರು ಲಾಕ್‌ಡೌನ್ ಸಂದರ್ಭದಲ್ಲಿ ಕಾಲನ್ನೇ ನಂಬಿ ತಮ್ಮ ನೆಲೆಯತ್ತ ಸಾಗಿದ ನಡಿಗೆಯಲ್ಲಿ, ಚಳಿಯಲ್ಲಿಯೂ ನಡುಗದೆ ಕೂತ ಅಮ್ಮಿಯರ ಬಿಸುಪಿನಲ್ಲಿ, ಇಡೀ ವರ್ಷ ಧರಣಿ ಕೂತ ರೈತರ ಹಸಿವೆಗೆ ಅವ್ವಂದಿರು ಬಡಿದ ರೊಟ್ಟಿ ಘಮಲಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಸಂಖ್ಯ ಹೋರಾಟಗಾರ್ತಿಯರ ಪರಂಪರೆಯೇ ಕಾಣುತ್ತದೆ. ಗಾಂಧೀಜಿಯವರು ಕರೆ ನೀಡಿದ್ದ ಕರ ನಿರಾಕರಣ ಚಳವಳಿ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ, ಪಾನ ನಿಷೇಧ ಚಳವಳಿ ಮುಂತಾದವುಗಳಲ್ಲಿ ಭಾಗವಹಿಸಿದ ಮಹಿಳೆಯರ ಹೋರಾಟ, ಅನನ್ಯ ಇತಿಹಾಸವಾಗಿದೆ.

ಸ್ವಾತಂತ್ರ್ಯ ಹೋರಾಟಕ್ಕಾಗಿ ಎರಡು ವರ್ಷ ಜೈಲು ಶಿಕ್ಷೆಗೂ ಒಳಗಾಗಿದ್ದ ದೇವದಾಸಿ ಬಳ್ಳಾರಿಯ ಬಸಕ್ಕ ಕರನಿರಾಕರಣೆ ಚಳವಳಿಯನ್ನು ಪ್ರಚಾರ ಮಾಡಲು 'ನೂತನ ಕತೆಯೊಂದ ಹೇಳ್ತೀವಿ ಕೇಳಿರಣ್ಣಾ ಗೀ ಗೀ ಗೀ...' ಎಂಬ 'ಗೀಗೀ' ಪದ ಕಟ್ಟಿ ಹಾಡಿ ಜನ ಜಾಗೃತಿ ಮೂಡಿಸಿದ್ದರು. ಹಂಪಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಬಸಕ್ಕನ ಪ್ರಾರ್ಥನೆಯಿಂದಲೇ ಸಭೆ ಪ್ರಾರಂಭವಾಗಿತ್ತು. ಆ ದಿನದಿಂದಲೇ ಆಕೆ ವಂದೇ ಮಾತರಂ ಬಸಕ್ಕನೆಂದು ಖ್ಯಾತರಾಗಿದ್ದರು. ಬಳ್ಳಾರಿಯ ಕೆಂಪಿ ಎಂಬ ಹರಿಜನ ಹುಡುಗಿ ಹರಪನಹಳ್ಳಿಯ ಕುಂಚೀ ಕೆರೆಯಲ್ಲಿ ಈಚಲು ಮರವನ್ನು ಕಡಿದು ಹಾಕಿ ಜೈಲು ಸೇರಿದ್ದಳು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಹಸಲರ ದೇವಿಯ ಪ್ರಾಮಾಣಿಕತೆ ಮರೆಯಲಾಗದ್ದು. ಸ್ವಾತಂತ್ರ್ಯ ಹೋರಾಟಗಾರರಾದ ನಾಗೇಶ ಹೆಗಡೆ ಮತ್ತು ಸುಬ್ರಾಯ ಸೋದರರು ತಮ್ಮ ಬಂಧನವಾಗಬಹುದೆಂದು ಅಡಿಕೆ ತೋಟದಲ್ಲಿ ಹುಗಿದಿಟ್ಟಿದ್ದ ಒಡವೆ, ಹಣದ ತಪ್ಪಲೆಯ ವಿಷಯ ತಿಳಿದ ಗೂಢಚಾರರು ತೋಟವನ್ನೆಲ್ಲ ಜಾಲಾಡಿದರೂ ನಿಧಿ ಸಿಗಲಿಲ್ಲ. ತೋಟದ ಹತ್ತಿರವೇ ಇದ್ದ ದೇವಿಯ ಗಂಡ ಶಿವಪ್ಪನೇ ಅದನ್ನು ಕದ್ದಿದ್ದಾನೆಂದು ಆತನಿಗೆ ಚಿತ್ರಹಿಂಸೆ ಕೊಟ್ಟರೂ ಗುಟ್ಟು ಹೊರಬರಲಿಲ್ಲ. ಶಿಕ್ಷೆ ಮುಗಿಸಿ ಬಂದ ನಾಗೇಶರ ಮುಂದೆ ತಪ್ಪಲೆಯನ್ನಿಟ್ಟ ದೇವಿ 'ತಂದೆ, ಇದನ್ನು ಕಾದು ಸಾಕಾಗಿದೆ. ನಿನಗೆ ಒಪ್ಪಿಸಿ



ನೆಮ್ಮದಿಯಾಗಿ ನಿದ್ದೆ ಮಾಡುವೆ' ಎಂದರಂತೆ.

ವಿಪರೀತ ಮಳೆಯಾಗಿದ್ದ ಒಂದುದಿನ ಸೊಪ್ಪು ತರಲು ತೋಟಕ್ಕೆ ಹೋಗಿದ್ದಾಗ ಸಿಕ್ಕ ತಪ್ಪಲೆಯನ್ನು, ಕುಡುಕ ಗಂಡ ಮತ್ತು ಪೊಲೀಸರ ಕಣ್ಣು ತಪ್ಪಿಸಿ ಅಡುಗೆ ಮನೆಯ ಮುಂದೆ ಗುಂಡಿ ತೋಡಿ ಮುಚ್ಚಿ, ಮೇಲೆ ಹಾಸುಗಲ್ಲನ್ನಿಟ್ಟು ಕಾಪಾಡಿದ್ದಳು ಆಕೆ. ಮುಂದೆ ದೇವಿಯನ್ನು ಸನ್ಮಾನಿಸಿದ ಗಾಂಧೀಜಿಯವರು 'ದೇವಿಯಂಥ ಪುಣ್ಯಾತ್ಮರು ಭೂತಲದಲ್ಲಿ ಇನ್ನೂ ಇರುವರೆಂದೇ ಜಗತ್ತು ನಡೆದಿದೆ' ಎಂದು ಭಾವುಕರಾದರಂತೆ.

ವಿಜಯಪುರದ ರಬಿನಾಳ ಗ್ರಾಮದ ನಿಂಗಮ್ಮ, ಮಾಸನ್ ಎಂಬ ಬ್ರಿಟಿಷ್ ಅಧಿಕಾರಿಯ ಕ್ರೂರ ದೃಷ್ಟಿಗೆ ಬಿದ್ದು ನಾಲ್ಕು ವರ್ಷಗಳ ಗೃಹಬಂಧನದಲ್ಲಿದ್ದು ನಿರಂತರ ಅತ್ಯಾಚಾರಕ್ಕೆ ಒಳಗಾಗಿದ್ದಳು. ಅಲ್ಲಿ ಆಕೆಗೆ ಜನಿಸಿದ ಎರಡು ಮಕ್ಕಳೊಂದಿಗೆ ಹೇಗೋ ತಪ್ಪಿಸಿಕೊಂಡು ಕರಿಬಂಟನಾಳದ ಗಂಗಾಧರ ಸ್ವಾಮೀಜಿಯವರ ಬಳಿ ಬಂದು ತಾನು ಎದುರಿಸಿದ ದೌರ್ಜನ್ಯದ ಕತೆಯನ್ನು ಹೇಳಿದ್ದಳು. ಸ್ವಾತಂತ್ರ್ಯ ಹೋರಾಟದಲ್ಲೂ ಪಾಲ್ಗೊಂಡಿದ್ದಳು. ಕೊನೆಗೆ ತನಗೂ ತನ್ನ ಮಕ್ಕಳಿಗೂ ಅಪಾಯ ತಪ್ಪಿದ್ದಲ್ಲವೆಂದು ಮಕ್ಕಳನ್ನು ಕೊಂದು, ತಾನೂ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಳು. ಅವಳ ಗೌರವಾರ್ಥ ಸ್ವಾಮೀಜಿ ತಮ್ಮ ಮಠದ ಬಳಿಯಲ್ಲೇ ಸಮಾಧಿ ಮಾಡಿ ಕಟ್ಟಿರುವ ಗುಡಿಯಲ್ಲಿ ಈಗಲೂ ಪೂಜೆ ಸಲ್ಲಿಕೆಯಾಗುತ್ತಿದೆ. ಲಾವಣಿಯಾಗಿ ಅಲ್ಲಿನ ಜನರ ಮನದಲ್ಲಿ ನಿಂಗಮ್ಮನ ನೆನಪಿನ್ನೂ ಹಸಿರಾಗಿದೆ.

ಅಕ್ಕಂಜಿ ಗ್ರಾಮದ ಕರನಿರಾಕರಣೆ ಹೋರಾಟದಲ್ಲಿ ಗೌರಮ್ಮನವರು ಪೊಲೀಸರ ಹಿಂಸೆಗೊಳಗಾಗಿ ಬಂಧನಕ್ಕೆ ಒಳಗಾಗಿದ್ದರು. ಜೈಲಿನಲ್ಲಿದ್ದ ಮೇಟ್ರನ್ ಬೀಗದ ಕೀಗಳ ಗೊಂಚಲಿನಿಂದ ಮತ್ತೊಬ್ಬ ಸತ್ಯಾಗ್ರಹಿ ವಿಧವೆ ಭವಾನಮ್ಮನವರ ನೆತ್ತಿಗೆ ಹೊಡೆದಾಗ ಗೌರಮ್ಮನವರು ಜೈಲಿನಲ್ಲಿದ್ದ ಇತರರನ್ನು ಸಂಘಟಿಸಿ ಮೂರು ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದ್ದರಿಂದ ಮೇಟ್ರನ್ ಕ್ಷಮೆ ಕೇಳುವಂತಾಯಿತು. ಸಿದ್ದಾಪುರದ ಚಂದ್ರಘಟ್ಟೆಯ ಸೀತಾಬಾಯಿಯವರು ಒಬ್ಬರೇ ರಾತ್ರಿ ಕಾಡಿನಲ್ಲಿ 24 ಮೈಲು ನಡೆದು ತಮ್ಮ ತಂಡದವರು ಬಿಟ್ಟು ಬಂದಿದ್ದ ಸ್ಫೋಟಕಗಳು ತುಂಬಿದ ಚೀಲವನ್ನು ತಂದಿದ್ದರು.

ತಮಿಳುನಾಡಿನ ಕುಂಡಚವಾಡಿಯ ಅರುಂಧತಿ ಎಂಬ ತಳಜಾತಿಗೆ ಸೇರಿದ ಕುಯಿಲಿ 'ಬೆಂಕಿ ಚೆಂಡು' ಎಂದೇ ಪ್ರಸಿದ್ಧ. ಕುಯಿಲಿಯ ತಾಯಿ ರಾಕು ತೀರಿಕೊಂಡಾಗ ತಂದೆ ಪೆರಿಯಮುತ್ತನ್, ಶಿವಗಂಗೈನ ರಾಜ ಮನೆತನಕ್ಕೆ ಮದುವೆಯಾಗಿ ಹೋಗಿದ್ದ ವೇಲುನಾಚಿಯಾರ್ ಬಳಿಯಲ್ಲಿ ಮಗಳನ್ನು ಬಿಟ್ಟಿದ್ದರು. ಅರ್ಕಾಟ್ ನವಾಬ ಮತ್ತು ಬ್ರಿಟಿಷರು ದಾಳಿಮಾಡಿ ಪತಿ ಹಾಗೂ ಮಗಳನ್ನು ಕೊಂದು ಹಾಕಿದಾಗ ವೇಲುನಾಚಿಯಾರ್ ತನ್ನ ಬೆಂಬಲಿಗರೊಂದಿಗೆ ಐದು ಸಾವಿರ ಕುದುರೆಗಳ ಸೇನೆ ಕಟ್ಟಿ ಭಾರತದ ಪ್ರಥಮ ಭೂಗತ ಸೇನೆ ಕಟ್ಟಿದ ನಾಯಕಿಯಾಗಿದ್ದಳು. ಆಕೆಯಿಂದ ಪ್ರೇರಿತಳಾಗುವ ಕುಯಿಲಿ, ಯುದ್ಧ ವಿದ್ಯೆ ಕಲಿತು ಅವರ ಮಹಿಳಾ ಸೇನೆಗೆ ಅಧಿಪತಿಯಾಗಿದ್ದಳು.

ಶಿವಗಂಗೈ ಕೋಟೆಯಲ್ಲಿದ್ದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಅಡಗಿಸಿದ್ದ ಶಸ್ತ್ರಾಸ್ತ್ರಗಳ ನಾಶಮಾಡದೆ ಬ್ರಿಟಿಷರನ್ನು ಮಟ್ಟಹಾಕಲು ಸಾಧ್ಯವಿಲ್ಲವೆಂದು ತಿಳಿದು ಉಪಾಯ ಹುಡುಕುವ ಕುಯಿಲಿ, ವಿಜಯದಶಮಿಯಂದು ದೇವಿಯ ಪೂಜೆಗಾಗಿ ದೇವಸ್ಥಾನದೊಳಗೆ ಹೋಗಲು ಮಹಿಳೆಯರಿಗೆ ಇದ್ದ ಅವಕಾಶವನ್ನು ಬಳಸಿಕೊಂಡಿದ್ದಳು. ಪೂಜೆಯ ಹೆಸರಿನಲ್ಲಿ ದೇವಸ್ಥಾನದೊಳಗೆ ಹೋಗಿ, ದೇವಿಯ ಅಭಿಷೇಕಕ್ಕೆಂದು ತಂದಿದ್ದ ತುಪ್ಪವನ್ನು ಮೈಮೇಲೆ ಸುರಿದುಕೊಂಡು ಬೆಂಕಿ ಹಚ್ಚಿ ಶಸ್ತ್ರಾಸ್ತ್ರಗಳ ಗೋದಾಮಿಗೆ ಹಾರಿ ಅದನ್ನು ಆಸ್ಫೋಟಿಸಿದ್ದಳು.

ಕಾನ್ಪುರದ ನಾನಾಸಾಹೇಬರ ಸ್ವತಂತ್ರ ಸಂಗ್ರಾಮದ ಕಾವಿನಿಂದ ಪ್ರೇರಿತಳಾದ ತವಾಯಿಫ್ ಸಮುದಾಯದ ಪ್ರಸಿದ್ಧ ನರ್ತಕಿ ಅಜೀಜ್ ಉನ್ನಿಸಾ ತನ್ನ ಮಹಲನ್ನೇ ಹೋರಾಟಗಾರರ ಅಡ್ಡವಾಗಿಯೂ, ಮದ್ದುಗುಂಡುಗಳ ತಯಾರಿಕೆಯ ಕೇಂದ್ರವಾಗಿಯೂ ಮಾಡಿದ್ದಳು. ಹೋರಾಟ ತೀವ್ರವಾಗಿ ಅಜೀಜ್‌ಳನ್ನು ಬಂಧಿಸಿ ಜೊತೆಗಾರರ ಹೆಸರು ಹೇಳಿದರೆ ಜೀವದಾನ ನೀಡುತ್ತೇವೆಂದು ಒತ್ತಾಯಿಸಿದಾಗ ಜಗ್ಗದ ಅವಳನ್ನು ಸಾರ್ವಜನಿಕವಾಗಿ ನೇಣುಹಾಕಲಾಗಿತ್ತು. ಬ್ರಿಟಿಷರ ವಿರುದ್ಧ ಹೋರಾಡಿದ್ದಕ್ಕೆ ಉತ್ತರಪ್ರದೇಶದ ಅಗ್ಸರಿಬಾಯಿಯನ್ನು ಜೀವಂತವಾಗಿ ಬ್ರಿಟಿಷರು ದಹನ ಮಾಡಿದಾಗ ಅವಳಿಗೆ 25 ವರ್ಷ.

ತಾನು ಆಯೋಜಿಸಿದ್ದ ಬೃಹತ್ ಮೆರವಣಿಗೆಯ ಮೇಲೆ ಪೊಲೀಸರು ಗುಂಡು ಹಾರಿಸಲು ಬಂದಾಗ 'ನಾನೇ ನಾಯಕಿ, ಮೊದಲು ನನಗೆ ಗುಂಡು ಹಾರಿಸಿ, ನಂತರ ಜನರ ಮೇಲೆ ಹಾರಿಸಿ' ಎಂದು ಧೈರ್ಯದಿಂದ ಮುಂದೆ ಬಂದು ನರಮೇಧ ತಡೆದ ಕೇರಳದ ಅಕ್ಕಮ್ಮ ಚೆರಿಯನ್ 'ತಿರುವಾಂಕೂರಿನ ಝಾನ್ಸಿರಾಣಿ' ಎಂದೇ ಪ್ರಸಿದ್ಧರು.

ಬಂಗಾಲದ ಮಿಡ್ನಾಪುರದಲ್ಲಿನ ಪೊಲೀಸ್ ಠಾಣೆಯನ್ನು ಆಕ್ರಮಿಸಿಕೊಳ್ಳಲು 6000 ಜನರ ಮೆರವಣಿಗೆಯನ್ನು ಮುನ್ನಡೆಸಿದ್ದು 73 ವರ್ಷದ ಮಾತಂಗಿನಿ ಹಾಜ್ರಾ. ಆಕೆ ಪೊಲೀಸ್ ಫೈರಿಂಗ್ ಆದೇಶ ಲೆಕ್ಕಿಸದೆ 'ಈ ಬೆಂಕಿಯ ಮಳೆ ಸಾಕು, ನಿಮ್ಮ ದಾಸ್ಯದ ದುಡಿಮೆ ಬಿಟ್ಟು ಸ್ವತಂತ್ರ್ಯ ಯುದ್ಧದಲ್ಲಿ ಸೈನಿಕರಾಗಿರಿ' ಎನ್ನುತ್ತಾ ಧ್ವಜ ಹಿಡಿದು ಮುನ್ನಡೆವಾಗ ಗುಂಡು ಬಿದ್ದು ಜೀವ ಹೋದರೂ ಧ್ವಜವನ್ನು ಬೀಳಿಸಲಿಲ್ಲ.

ಪಿಸ್ತೂಲುಗಳನ್ನು ಕ್ರಾಂತಿಕಾರಿಗಳಿಗೆ ತಲುಪಿಸುತ್ತಿದ್ದ ಬಂಗಾಲದ ಬ್ರಾಹ್ಮಣ ವಿಧವೆ ನಾನಿಬಾಲದೇವಿ ಸಿಕ್ಕಿಬಿದ್ದು ಕಠಿಣ ಶಿಕ್ಷೆಯನ್ನು ಅನುಭವಿಸುವಂತಾದರೂ ಕ್ರಾಂತಿಕಾರಿಗಳ ಸುಳಿವು ಬಿಟ್ಟುಕೊಡಲಿಲ್ಲ. ಪೊಲೀಸರ ಕಣ್ಣುತಪ್ಪಿಸಲು ಅವರು ಬಂಧಿಯೊಬ್ಬರ ಹೆಂಡತಿಯಂತೆ ಮಾರುವೇಷವನ್ನು ಸಹ ಧರಿಸಿದ್ದರು.

ಬ್ರಿಟಿಷರ ವಿರುದ್ಧ ಒಡಿಶಾದ ಆದಿವಾಸಿಗಳು ನಡೆಸಿದ ಹತ್ತು ವರ್ಷಗಳ ಉಗ್ರ ಹೋರಾಟವನ್ನು ಮುನ್ನಡೆಸಿ ಎದುರಾಳಿಗಳನ್ನು ಅಕ್ಷರಶಃ ಸುಸ್ತು ಹೊಡೆಸಿದ್ದವಳು ಹೀರಾಮಣಿ ಬಿಶೋಮಿ. ಬ್ರಿಟಿಷರಿಗೆ ತಲೆಬೇನೆಯಾಗಿದ್ದ ಮಣಿಪುರದ ರಾಣಿ ಗಿಡಾಲ್ಯೋಳನ್ನು ಹಿಡಿದುಕೊಟ್ಟವರಿಗೆ ಬಹುಮಾನ ಘೋಷಿಸಲಾಗಿತ್ತು. 1932ರ ಅಕ್ಟೋಬರ್ 13ರಂದು ಎರಡು ಸೇನಾ ತುಕಡಿಗಳೊಂದಿಗೆ ಆಕೆಯನ್ನು ಬಂಧಿಸಿ ಜೀವಾವಧಿ ಶಿಕ್ಷೆ ನೀಡಲಾಗಿತ್ತು.

ಅಸ್ಸಾಮಿನಲ್ಲಿ ಠಾಣೆಯನ್ನು ವಶಪಡಿಸಿಕೊಳ್ಳಲು ಹೊರಟ 500 ಜನರ ಮೆರವಣಿಗೆಯ ಮುಂಚೂಣಿಯಲ್ಲಿದ್ದ 15 ವರ್ಷ ವಯಸ್ಸಿನ ಕನಕಲತಾ ಬಾರು 'ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ಜನತೆಯ ದಾಸರೆಂದು ತಿಳಿದು ವರ್ತಿಸಬೇಕು, ಇಲ್ಲವಾದರೆ ಹೊರಗೆ ಹೋಗಬೇಕು' ಎಂದು ಮುನ್ನುಗ್ಗಿದಾಗ ಹಾರಿದ ಗುಂಡು ಆಕೆಯ ಎದೆ ಸೀಳಿತ್ತು.

ಯಾವ ಹೋರಾಟ, ಚಳವಳಿಯೇ ಆಗಲಿ ಹಲವಾರು ರೀತಿಯಲ್ಲಿ ಮಹಿಳೆಯರೂ ದುಡಿದಿದ್ದಾರೆ. ಹೋರಾಟ, ಚಳವಳಿಯ ಫಲವಾಗಿ ಬರುವ ಅಧಿಕಾರ, ಸ್ಥಾನಮಾನಗಳ ಸಂದರ್ಭದಲ್ಲಿ ಮಾತ್ರ ಅವರನ್ನು ಹಿಂದಿಡಲಾಗಿದೆ, ಬದಿಗೆ ಸರಿಸಲಾಗಿದೆ. ಅವರ ನಡಿಗೆ ಮಾತ್ರ ಮುಂದುವರಿದೇ ಇದೆ. ಅವರು ನಡೆದ ದಾರಿ ಇನ್ನೂ ಸಾಗಬೇಕಾದ ನಮ್ಮ ಬಿಡುಗಡೆಯ ನಡೆಗೆ ದೊಂದಿಯಾಗಲೆಂದು ಪಣತೊಡುವುದು ಸ್ವಾತಂತ್ರ್ಯ-75ರ ಸಂದರ್ಭದಲ್ಲಿ ಅವರಿಗೆ ಹೇಳುವ ನಿಜ ಸಲಾಮು.

...ಕೊಟ್ಟ ಭರವಸೆ ಇದಲ್ಲ

8ನೇ ಪುಟದಿಂದ...

ಅವುಗಳು ರಾಜ್ಯಗಳ ಒಕ್ಕೂಟವಾಗಿ ಮಿಳಿತಗೊಂಡು ತಮ್ಮದೇ ಅನನ್ಯತೆಗಳನ್ನು ಪಡೆದುಕೊಂಡವು ಮತ್ತು ಈ ರಾಜ್ಯಗಳಿಗೆ ಅವುಗಳ ವ್ಯಾಪ್ತಿಯಲ್ಲಿ ಗಮನಾರ್ಹವಾದ ಅಧಿಕಾರಗಳನ್ನು ಸಂವಿಧಾನವು ನೀಡಿತು. ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರರಿಗೆ ಪೂರಕವಾಗಿರುವ, ಪರಸ್ಪರರನ್ನು ಬಲಪಡಿಸುವ, ಯಾವುದೇ ಸಂದರ್ಭದಲ್ಲಿ ಎದುರಾಗಬಹುದಾದ ಬಿಕ್ಕಟ್ಟನ್ನು ಪರಿಹರಿಸಲು ವ್ಯವಸ್ಥೆಗಳಿರುವ ಅತ್ಯಂತ ಸಮತೋಲಿತ ಒಕ್ಕೂಟ ವ್ಯವಸ್ಥೆ ನಮ್ಮ ಕನಸಾಗಿತ್ತು. ನಮ್ಮಲ್ಲಿ ಇರುವಷ್ಟು ವೈವಿಧ್ಯಗಳಿರುವ ದೇಶವೊಂದಕ್ಕೆ ಇದೊಂದು ಅತ್ಯುತ್ತಮ ಆಡಳಿತ ವ್ಯವಸ್ಥೆ. ಒಕ್ಕೂಟ ಸರ್ಕಾರದ ಕೈ ಮೇಲಾಗಿ, ಅದು ರಾಜ್ಯಗಳ ಮೇಲೆ ಸವಾರಿ ಮಾಡುವ ಸ್ಥಿತಿಯು ಸಮತೋಲಿತ ವ್ಯವಸ್ಥೆಗೆ ಅಡ್ಡಿ ಉಂಟು ಮಾಡಿದೆ. ರಾಜಕಾರಣ, ಹಣಕಾಸು ಪದ್ಧತಿ, ಶಿಕ್ಷಣ, ಸಂಸ್ಕೃತಿ ಅಷ್ಟೇ ಅಲ್ಲ, ಭೂತಕಾಲವನ್ನು ಹೇಗೆ ನೋಡಬೇಕು, ಭವಿಷ್ಯವನ್ನು ಹೇಗೆ ಕಲ್ಪಿಸಿಕೊಳ್ಳಬೇಕು ಎಂಬುದನ್ನು ಏಕರೂಪಗೊಳಿಸಬೇಕು ಎಂಬ ಒತ್ತಡ ಹೆಚ್ಚಾಗಿದೆ. 'ಒಂದು ದೇಶ, ಒಂದು ಇದು', 'ಒಂದು ದೇಶ, ಒಂದು ಅದು' ಎಂಬಂತಹವುಗಳು ನಮ್ಮಲ್ಲಿ ಒಂದೆರಡಲ್ಲ, ಹೆಚ್ಚೇ ಇವೆ. 1947ರ ಆಗಸ್ಟ್ 15 ನೀಡಿದ ಭರವಸೆ ಇದು ಅಲ್ಲವೇ ಅಲ್ಲ.

ಪ್ರಜಾಪ್ರಭುತ್ವದ ಪಾಲನೆಯೇ ಆಳ್ವಿಕೆಯ ನುಡಿಗಟ್ಟು ಎಂಬುದು 1947 ಕೊಟ್ಟ ಅತ್ಯಂತ ದೊಡ್ಡ ಭರವಸೆ. ಬಡವರು ಮತ್ತು ಅನಕ್ಷರಸ್ಥರೇ ಹೆಚ್ಚಾಗಿರುವ ಈ ದೇಶವನ್ನು ಉದಾರವಾದ ಮತ್ತು ಸಮಾನತಾವಾದದಿಂದ ಸ್ಫೂರ್ತಿಗೊಂಡು ಪ್ರಜಾಪ್ರಭುತ್ವವಾಗಿ ಪರಿವರ್ತಿಸುವ ಪ್ರಯೋಗಕ್ಕೆ ಕೆಚ್ಚೆದೆಯೇ ಬೇಕು. ಈ ಪ್ರಯೋಗ ಯಶಸ್ವಿಯಾಯಿತು ಮತ್ತು ಪ್ರಜಾಪ್ರಭುತ್ವವು ವ್ಯಾಪಕವೂ ಗಾಢವೂ ಆಯಿತು. ಕೆಲವೊಮ್ಮೆ ಲೋಪಗಳಾಗಿವೆ ಮತ್ತು ಕೆಲವೊಮ್ಮೆ ಹಿನ್ನಡೆಯಾಗಿದೆ- ಹಾಗಿದ್ದರೂ ದೇಶವು ಜನತಂತ್ರವಾಗಿಯೇ ಉಳಿದಿದೆ. ಆದರೆ, ಈಗ ಸವಾಲುಗಳು ಹೆಚ್ಚೇ ಇವೆ. ಪ್ರಜಾಸತ್ತಾತ್ಮಕ ಸಂಸ್ಥೆಗಳು ಒತ್ತಡದಲ್ಲಿ ಇವೆ, ಜನಾದೇಶವನ್ನು ಬುಡಮೇಲು ಮಾಡಲಾಗುತ್ತಿದೆ, ವಿರೋಧ ಪಕ್ಷಗಳ ನಾಯಕರನ್ನು ಬಂಧಿಸಿ, ಸೆರೆಯಲ್ಲಿ ಇರಿಸಲಾಗುತ್ತಿದೆ; ಅವರ ಪಕ್ಷಗಳನ್ನು ಮುರಿಯಲಾಗುತ್ತಿದೆ. ಸರ್ಕಾರದ ಅತ್ಯಂತ ಮುಖ್ಯ ಅಂಗವಾದ ಶಾಸಕಾಂಗವನ್ನು ದುರ್ಬಲಗೊಳಿಸಲಾಗಿದೆ ಮತ್ತು ಕಾರ್ಯಾಂಗಕ್ಕೇ ಹೆಚ್ಚಿನ ಮಹತ್ವ ಕೊಡಲಾಗಿದೆ. ಸಹಿಷ್ಣುತೆಯೇ ಪ್ರಜಾಪ್ರಭುತ್ವದ ತಿರುಳು. ಆದರೆ ಈಗ ರಾಜಕಾರಣ ಮತ್ತು ಸಮಾಜದಲ್ಲಿ ಅಸಹಿಷ್ಣುತೆಯದ್ದೇ ಪಾರಮ್ಯವಿದೆ. ಬಹುಸಂಖ್ಯಾತವಾದ ಮತ್ತು ಪ್ರಜಾಪ್ರಭುತ್ವ ಜತೆ ಸಾಗಲು ಸಾಧ್ಯವೇ ಇಲ್ಲ.


ಪ್ರಭುತ್ವ ಎಂಬುದರ ಸ್ವರೂಪವೇ ದಮನಕಾರಿ. ಆದರೆ, ಪೌರರಿಗೆ ಮೂಲಭೂತ ಹಕ್ಕುಗಳನ್ನು ನೀಡುವ ಮೂಲಕ ಪ್ರಭುತ್ವವನ್ನು ಸೌಮ್ಯಗೊಳಿಸಲು ಸಂವಿಧಾನವು ಯತ್ನಿಸಿದೆ. ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯ ಮೂಲಕ ಪೌರರ ನಾಗರಿಕ ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಬೇಕು ಎಂದೂ ಹೇಳಿದೆ. ಇಂತಹ ವ್ಯವಸ್ಥೆಯಲ್ಲಿ ಸ್ವೇಚ್ಛೆಯ ಬದಲು ಕಾನೂನಿನ ಆಳ್ವಿಕೆ ಇರುತ್ತದೆ. ಅಧಿಕಾರದ ಹಂಚಿಕೆಯು ಸರ್ಕಾರದ ವಿವಿಧ ಅಂಗಗಳ ನಡುವೆ ಸಮತೋಲನ ಸೃಷ್ಟಿಸುತ್ತದೆ; ಸಾಂಸ್ಥಿಕ ವ್ಯವಸ್ಥೆಗಳು ಅಧಿಕಾರ ದುರ್ಬಳಕೆಗೆ ಕಡಿವಾಣ ಹಾಕುತ್ತವೆ. ಆದರೆ, ಈಗಿನ ವ್ಯವಸ್ಥೆಯಲ್ಲಿ ಕಾಣಿಸುತ್ತಿರುವ ಅಂಶಗಳು ಹೀಗಿವೆ: ಸರ್ಕಾರವು ಪೌರರ ಮೇಲೆ ಸವಾರಿ ಮಾಡಬಹುದಾಗಿದೆ; ಹಕ್ಕುಗಳಿಗಿಂತ ಕರ್ತವ್ಯದ ಕೈ ಮೇಲಾಗಿದೆ; ಅತಿ ರಾಷ್ಟ್ರೀಯವಾದ ಮುನ್ನೆಲೆಗೆ ಬಂದಿದೆ ಮತ್ತು ಅದಕ್ಕೆ ಮಾನ್ಯತೆಯನ್ನೂ ನೀಡಲಾಗಿದೆ. ಆದರೆ, 1947ರಲ್ಲಿ ಹುಟ್ಟಿದ ದೇಶದ ಯೋಚನೆ ಖಂಡಿತಾ ಹೀಗೆ ಇರಲಿಲ್ಲ. ಮಾನವೀಯವಾದ ಸಮನ್ವಯದ ಮತ್ತು ಎಲ್ಲರನ್ನೂ ಒಳಗೊಂಡ ಭಾರತದ ಪರಿಕಲ್ಪನೆಯೇ ಸ್ವಾತಂತ್ರ್ಯ ಹೋರಾಟವನ್ನು ರೂಪುಗೊಳಿಸಿತ್ತು ಮತ್ತು ಸ್ವಾತಂತ್ರ್ಯ ಬಂದಾಗ ಅದುವೇ ದೇಶಕ್ಕೊಂದು ಸ್ವರೂಪವನ್ನೂ ಕೊಟ್ಟಿತು. ಆದರೆ, ಈಗ ದೇಶವನ್ನು ಸಂಘರ್ಷಾತ್ಮಕ, ಬಹಿಷ್ಕೃತವಾದಿ, ಬಹುಸಂಖ್ಯಾತವಾದಿ ಭಾರತವನ್ನಾಗಿ ಪರಿವರ್ತಿಸಲಾಗಿದೆ.

1947ರ ಬಳಿಕ, ಕೆಲ ಸಮಯದಲ್ಲಿಯೇ ಭಾರತದ ಆ ಚಿಂತನೆಯು ಪಲ್ಲಟಗೊಂಡಿತು ಮತ್ತು ದುರ್ಬಲಗೊಳ್ಳತೊಡಗಿತು. ದೇಶ ಸ್ಥಾಪನೆಯಾದಾಗ ಈ ಚಿಂತನೆಗಳನ್ನು ಪ್ರತಿಪಾದಿಸಿದ್ದ ಜವಾಹರಲಾಲ್ ನೆಹರೂ ಅವರೇ 1951ರಲ್ಲಿ ಸಂವಿಧಾನಕ್ಕೆ ಮೊದಲ ತಿದ್ದುಪಡಿ ತಂದು ಅಭಿವ್ಯಕ್ತಿ ಸ್ವಾತಂತ್ರ್ಯವೂ ಸೇರಿದಂತೆ ಮೂಲಭೂತ ಹಕ್ಕುಗಳನ್ನು ಮೊಟಕು ಮಾಡಿದರು ಮತ್ತು ಜನರಿಂದ ಚುನಾಯಿತವಾಗಿದ್ದ ಸರ್ಕಾರವನ್ನು (ಕೇರಳ) ಸಂವಿಧಾನದ 356ನೇ ವಿಧಿ ಬಳಸಿ ವಜಾ ಮಾಡಿದರು. ಕೆಲ ವರ್ಷಗಳ ಬಳಿಕ, ಇಂದಿರಾ ಗಾಂಧಿ ಅವರು ತುರ್ತುಸ್ಥಿತಿ ಹೇರಿದರು ಮತ್ತು ಸಂವಿಧಾನವನ್ನೇ ಅಮಾನತಿನಲ್ಲಿ ಇರಿಸಿದರು. ರಾಜೀವ್ ಗಾಂಧಿ ಅವರು ಬಹುಸಂಖ್ಯಾತರನ್ನೂ ಅಲ್ಪಸಂಖ್ಯಾತರನ್ನೂ ತುಷ್ಟೀಕರಿಸುವ ನೀತಿಯನ್ನು ಅನುಸರಿಸಿದರು. 1947ರ ದರ್ಶನವನ್ನು ಹಾಳುಗೆಡಹುವ ಕೆಲಸವನ್ನು ಎಲ್ಲ ಪಕ್ಷಗಳು ಮತ್ತು ಪ್ರಧಾನಿಗಳು ಮಾಡಿದ್ದಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಕುಸಿತವು ಹೆಚ್ಚು ತ್ವರಿತವೂ ಹೆಚ್ಚು ಶಕ್ತಿಯುತವೂ ಆಗಿದೆ.

1947ರ ನಂತರದ 75 ವರ್ಷಗಳಲ್ಲಿ ದೇಶವು ಹಲವು ಮಹತ್ವದ ಸಾಧನೆಗಳನ್ನು ಮಾಡಿದೆ. ಜಾಗತಿಕ ಮಟ್ಟದಲ್ಲಿ ದೊರೆತ ಮನ್ನಣೆಯೂ ಒಂದು ದೊಡ್ಡ ಸಾಧನೆಯೇ. ಹಲವು ಸವಾಲುಗಳನ್ನು ಎದುರಿಸಿ ದೇಶವು ನಿಂತಿದೆ, ಕೋಟ್ಯಂತರ ಜನರನ್ನು ಬಡತನದಿಂದ ಮೇಲಕ್ಕೆ ತಂದಿದೆ, ಅಕ್ಷರಸ್ಥರನ್ನಾಗಿಸಿದೆ ಮತ್ತು ವಿವಿಧ ರಂಗಗಳಲ್ಲಿ ದಾಪುಗಾಲಿರಿಸಿದೆ. ಸೂಪರ್ ಪವರ್ ಆಗುವ ಆಕಾಂಕ್ಷೆಯನ್ನೂ ತನ್ನೊಳಗೆ ಹುದುಗಿಸಿಕೊಂಡಿದೆ. ಬ್ರಿಟನ್‌ನ ಪ್ರಧಾನಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್ ಅವರು ಭಾರತವು ಸ್ವಾತಂತ್ರ್ಯ ಪಡೆಯುವುದಕ್ಕೆ ಮುನ್ನವೇ ಹೀಗೆ ಹೇಳಿದ್ದರು: 'ಭಾರತವೆಂದರೆ ಒಂದು ಭೂ ಪ್ರದೇಶ ಮಾತ್ರ. ಅದೊಂದು ದೇಶ ಅಲ್ಲವೇ ಅಲ್ಲ'. ಆದರೆ, ಭಾರತವು ತಾನೊಂದು ದೇಶ ಎಂಬುದನ್ನು ಸಾಬೀತು ಮಾಡಿದೆ, ಇಷ್ಟೂ ವರ್ಷ ಕಾಲ ಅಸ್ತಿತ್ವ ಉಳಿಸಿಕೊಂಡಿದೆ. ಆದರೆ, ಸಾಬೀತು ಮಾಡಬೇಕಾದುದು ಇನ್ನೂ ಬಹಳಷ್ಟಿದೆ. ದೇಶವು ಹುಟ್ಟಿದ ಆ ಮಧ್ಯರಾತ್ರಿಯ ಸಂದರ್ಭದಲ್ಲಿ ಮೂಡಿದ್ದ ಭರವಸೆಗೆ ಮರುಹುಟ್ಟು ನೀಡಬೇಕಿದೆ. ಭಾರತವೆಂಬ ಆ ಚಿಂತನೆಯ ಹಿಂದಿನ ಮೌಲ್ಯಗಳು ಮತ್ತು ಆದರ್ಶಗಳಿಗೆ ಬದ್ಧರಾಗೋಣ ಮತ್ತು ಈ ಚಿಂತನೆಗಳಿಂದ ದೇಶವು ದೂರ ಸಾಗದಂತೆ ನೋಡಿಕೊಳ್ಳೋಣ. ಆ ಭರವಸೆಯು ವಜ್ರದಂತೆ ಹೊಳೆದು, ಬಾಳಲಿ, ಉಳಿಯಲಿ.

ಮತ್ತೆ ಗೆಟಿಸ್‌ಬರ್ಗ್‌ಗೆ ಬರೋಣ: ಜನತಂತ್ರ ವ್ಯವಸ್ಥೆಗೆ ತಳಹದಿ ಒದಗಿಸಿದ ಲಿಂಕನ್ ಅವರು ತಮ್ಮ ಭಾಷಣದಲ್ಲಿ ಜನರಿಂದ, ಜನರಿಗಾಗಿ ಜನರ ಸರ್ಕಾರ ಎಂಬ ಪರಿಕಲ್ಪನೆಯನ್ನು ವಿವರಿಸಿದರು. ಈ ಭೂಮಿಯಲ್ಲಿ ಸ್ವಾತಂತ್ರ್ಯವು ನಶಿಸುವುದನ್ನು ದೇಶದ ಸ್ವಾತಂತ್ರ್ಯವು ತಡೆಯುತ್ತದೆ ಎಂದು ಅವರು ಹೇಳಿದ್ದರು. ಭಾರತವು ಸತ್ತರೆ ಇಲ್ಲಿ ಬದುಕುವವರು ಯಾರು ಮತ್ತು ಭಾರತವು ಬದುಕಿದರೆ ಸಾಯುವವರು ಯಾರು ಎಂದು ಜವಾಹರಲಾಲ್ ನೆಹರೂ ಹೇಳಿದ್ದರಲ್ಲಿ ಲಿಂಕನ್ ಹೇಳಿದ್ದ ಭಾವವೇ ಇದೆ. ಈ ಭಾವವು ನಿಜವಾಗಬೇಕಿದ್ದರೆ, ದೇಶವೆಂಬ ಚಿಂತನೆಯ ಕೇಂದ್ರದಲ್ಲಿ ಸ್ವಾತಂತ್ರ್ಯವು ಇರಬೇಕು ಮತ್ತು 1947ರಲ್ಲಿ ಗ್ರಹಿಸಿದ ಭಾರತದ ಚಿಂತನೆಯನ್ನು ಮರುಸ್ಥಾಪಿಸಬೇಕು, ಮತ್ತೆ ಹೇಳಬೇಕು ಮತ್ತು ಸಮಗ್ರಗೊಳಿಸಬೇಕು.

ಲೇಖಕ: ಹಿರಿಯ ಪತ್ರಕರ್ತ ಕನ್ನಡಕ್ಕೆ: ಹಮೀದ್ ಕೆ.



ನನ್ನ ಭಾರತ

ಸ್ವಚ್ಛ ಭಾರತವನ್ನು ನೋಡುವಾಸೆ

1967–68ರ ಸುಮಾರಿಗೆ ರಷ್ಯಾದಲ್ಲಿ ಚಲನಚಿತ್ರೋತ್ಸವ ನಡೆಯುತ್ತಿದ್ದಾಗ ಭಾರತದಿಂದ ನಾನು ಮತ್ತು ನನ್ನ ಪತಿ ಹೋಗಿದ್ದೆವು. ಅಲ್ಲಿ ಲೆನಿನ್ ಅವರ ಮೃತದೇಹವನ್ನು ಸಂರಕ್ಷಿಸಿಡಲಾಗಿದೆ. ಅದನ್ನು ನೋಡಲು ಸರತಿ ಸಾಲಿನಲ್ಲಿ ನಿಂತಿದ್ದೆವು. ಆಗ ಅಲ್ಲಿನ ಸಿಬ್ಬಂದಿಯೊಬ್ಬರು ನಮ್ಮ ಬಳಿ ಬಂದು ನಮ್ಮನ್ನು ಕರೆದು ನೀವು ಮುಂದೆ ಹೋಗಿ ಲೆನಿನ್ ಅವರ ಸ್ಮಾರಕ ನೋಡಿ. ನೀವು ಭಾರತದಿಂದ ಬಂದಿರುವಿರಿ ಅಲ್ಲವೇ? ನಿಮ್ಮ ಸೀರೆ ನೋಡಿ ಕಂಡುಹಿಡಿದೆ. ಬನ್ನಿ ಎಂದು ಅವಕಾಶ ಮಾಡಿಕೊಟ್ಟರು. ಭಾರತೀಯಳಾಗಿ ನನಗೆ ಅದೊಂದು ಹೆಮ್ಮೆಯ ಸಂಗತಿ.

ದೇಶದಲ್ಲೀಗ ಎಲ್ಲೆಡೆ ಶೈಕ್ಷಣಿಕ ಕ್ರಾಂತಿಯಾಗಿದೆ. ಸಣ್ಣ ಕೆಲಸದವರೂ ತಮ್ಮ ಮಕ್ಕಳು ಅಕ್ಷರ ಜ್ಞಾನ ಪಡೆಯಲಿ ಎಂದು ಹಂಬಲಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ವಿದ್ಯೆ ಕಲಿತರೆ ಗೌರವದಿಂದ ಬಾಳುವ ಅವಕಾಶ ಖಂಡಿತಾ ಸಿಗುತ್ತದೆ ಎನ್ನುವ ವಿಶ್ವಾಸ ನನ್ನದು. ನಮ್ಮ ದೇಶದಲ್ಲಷ್ಟೇ ನದಿಗಳಿಗೆ ಹೆಣ್ಣುಮಕ್ಕಳ ಹೆಸರಿಟ್ಟಿದ್ದಾರೆ. ನಮ್ಮಲ್ಲಷ್ಟೇ ಕೂಡುಕುಟುಂಬಗಳಿಗೆ ಆದ್ಯತೆ ಇದೆ. ಆಚಾರ, ಸಂಸ್ಕೃತಿ, ನಡವಳಿಕೆಯ ವಿಚಾರದಲ್ಲಿ ಭಾರತ ಇತರರಿಗಿಂತ ಭಿನ್ನ ಅನ್ನುವ ಬಗ್ಗೆ ಹೆಮ್ಮೆ ಇದೆ. ಆದರೆ, ಆಡಳಿತಾತ್ಮಕ ವಿಚಾರದಲ್ಲಿ ದೇಶದಲ್ಲಿ ಸುಧಾರಣೆಯಾಗಬೇಕಿದೆ. ಜನರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿ ಅಲೆಯುವಂತೆ ಆಗಬಾರದು. ಅಂತೆಯೇ ನನ್ನ ಕನಸಿನ ಭಾರತ ಸ್ವಚ್ಛ ಭಾರತವಾಗಿ ರೂಪುಗೊಳ್ಳಬೇಕೆಂಬ ಆಸೆ ನನ್ನದು.




ಬಿ. ಸರೋಜಾ ದೇವಿ
ಹಿರಿಯ ಕಲಾವಿದೆ, ಬೆಂಗಳೂರು

ಈ ಉದ್ಯಾನದ ಅಂದ ಕೆಡದಿರಲಿ

ನನ್ನ ಭಾರತ ಅನ್ನುವುದು ಹಲವು ಭಾಷೆಗಳು, ಹಲವು ಬುಡಕಟ್ಟುಗಳು, ಹಲವು ಜಾತಿ, ಧರ್ಮ, ಪಂಗಡಗಳನ್ನು ಒಳಗೊಂಡ ವಿಶಿಷ್ಟವಾದ ಉದ್ಯಾನ. ಇಲ್ಲಿರುವ ಎಲ್ಲಾ ಭಾಷೆಗಳು, ಎಲ್ಲಾ ರೀತಿಯ ಸಾಂಸ್ಕೃತಿಕ ವಿವರಗಳು ಒಟ್ಟಾಗಿ ಕೂಡಿ ನಗುನಗುತ್ತಾ ಬಾಳುಬೇಕೆನ್ನುವುದು ನನ್ನ ಕನಸಿನ ಭಾರತ. ಆದರೆ, ಇತ್ತೀಚಿನ ದಿನಗಳಲ್ಲಿ 'ಒಂದು ದೇಶ, ಒಂದು ಧರ್ಮ, ಒಂದು ಭಾಷೆ' ಅನ್ನುವಂತಹ ಘೋಷಣೆಗಳು ಹೆಚ್ಚಾಗಿ ಕೇಳಿ ಬರುತ್ತಿವೆ. ಈ ಸಂದರ್ಭದಲ್ಲಿ ನಾವು ಮತ್ತೆ ಮತ್ತೆ ನೆನಪಿಟ್ಟುಕೊಳ್ಳಬೇಕಾದ್ದು ಇಂತಹ ಮಾತುಗಳು ಭಾರತದ ವಿಘಟನೆಗೆ ಬೀಜ ಬಿತ್ತುತ್ತವೆ ಎಂಬುದು. ಎಪ್ಪತ್ತೈದು ವರ್ಷದ ಹಿಂದೆ ಆದ ಮೊದಲ ವಿಭಜನೆಯ ದುರಂತದ ನೆನಪು ಎಂದಿಗೂ ಮಾಸದಿರಲಿ.

ಜನರ ಬದುಕಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನೆಮ್ಮದಿ ಸಿಗಬೇಕಿರುವುದು ಇಂದಿನ ತುರ್ತು. 'ಸಾಮಾಜಿಕ ಭದ್ರತೆ' ಪ್ರತಿಯೊಬ್ಬರಿಗೂ ಸಿಗುವ ಹಾಗೆ ಆದಾಗ ಮತ್ತು ಎಲ್ಲರ ಹಸಿವು ನೀಗುವ ಹಂತ ತಲುಪಿದಾಗ ಮಾತ್ರ ಇಡೀ ಸಮಾಜ/ ದೇಶ ನೆಮ್ಮದಿಯಿಂದಿರಲು ಸಾಧ್ಯ. ಆ ಹಿನ್ನೆಲೆಯಲ್ಲಿ ಎಲ್ಲರ ಒಳಗೊಳ್ಳುವಿಕೆ ಪ್ರಧಾನ ಆದ್ಯತೆ ಆಗಬೇಕು. ಯಾವುದೇ ಧರ್ಮವನ್ನಾಗಲಿ, ಜನವನ್ನಾಗಲಿ ದೂರವಿಡದೆ, ಇವನು ಬೇರೆಯವನು ಎಂದು ಗುರುತಿಸದೇ 'ಇವ ನಮ್ಮವ' ಎಂಬ ಬಸವ ವಚನದ ಆಶಯದಂತೆ ಎಲ್ಲರನ್ನೂ ಒಳಗೊಳ್ಳುವ ಹಾಗೆ ನಮ್ಮ ಸಮಾಜವನ್ನು/ ದೇಶವನ್ನು ಕಟ್ಟಿಕೊಳ್ಳಬೇಕಿದೆ. ಇದು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಾವು ತೆಗೆದುಕೊಳ್ಳಬೇಕಾದ ತೀರ್ಮಾನ. ಹಾಗಾದಾಗ ಮಾತ್ರ ನನ್ನ ಕನಸಿನ ಭಾರತವು ಶಾಶ್ವತವಾಗಿ ಬಹುಕಾಲ ಉಳಿಯಬಲ್ಲದು.



ಬಿ. ಸುರೇಶ, ರಂಗಕರ್ಮಿ
ಚಲನಚಿತ್ರ ತಯಾರಕ, ಬೆಂಗಳೂರು

ಯಾರ ಎದೆಯಲ್ಲಿ ಹುಡುಕಲಿ?

ಸ್ವಾತಂತ್ರ್ಯದ ಅಮೃತ ಮಹೋತ್ಸವ ಇದಾದರೂ, ಭಾರತದ ಸದ್ಯದ ದ್ವಂದ್ವ ಪರಿಸ್ಥಿತಿಯನ್ನು ಬದಲಾಯಿಸಲು ವಿಜೃಂಭಣೆಯ ಸಮಾರಂಭಗಳಿಂದ ಸಾಧ್ಯವಿಲ್ಲ. ಈ ಹೊತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವ, ಜೀವನ ತ್ಯಾಗ ಮಾಡಿದವರನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಅವರ ಬಲಿದಾನವನ್ನು ಎಷ್ಟರಮಟ್ಟಿಗೆ ಸಾರ್ಥಕಗೊಳಿಸಿಕೊಳ್ಳುತ್ತಿದ್ದೇವೆ ಎನ್ನುವ ಪ್ರಶ್ನೆಯನ್ನೂ ನಮಗೆ ನಾವು ಕೇಳಿಕೊಳ್ಳಬೇಕಾದ ಜರೂರು ಇದೆ. ಧರ್ಮ, ವರ್ಗ, ರಾಜಕೀಯ, ಆರ್ಥಿಕತೆಗಳು ಧ್ರುವೀಕರಣಗೊಳ್ಳುತ್ತಿರುವ ವಿಷಮ ಸ್ಥಿತಿ ನಿರ್ಮಾಣವಾಗಿದೆ. ಬುದ್ಧ ಹೇಳಿಕೊಟ್ಟ ಜೀವಪ್ರೀತಿ, ಅಂಬೇಡ್ಕರ್ ಅವರ ಸಮಾನತೆಯ ದೃಷ್ಟಿಕೋನ, ಗಾಂಧೀಜಿಯವರ ಅಹಿಂಸೆಯನ್ನು ಯಾರ ಎದೆಯ ಧಮನಿಗಳಲ್ಲಿ ಹುಡುಕುವುದು?

ಎಲ್ಲವುಗಳ ಬೆಲೆಗಳು ಗಗನಕ್ಕೇರಿರುವಾಗ ಅಗ್ಗವಾಗಿರುವುದು ಮನುಷ್ಯನ ರಕ್ತ ಮಾತ್ರ. ಧರ್ಮದ ಅಫೀಮನ್ನು ನೆತ್ತಿಗೇರಿಸಿಕೊಂಡು ಉದ್ವೇಗಕ್ಕೊಳಗಾಗಿ ಮನಸು ಮನಸುಗಳ ನಡುವೆ ಕಿಡಿಹೊತ್ತಿಸುವ ಘೋಷಣೆಗಳ ಸದ್ದು ಮುಗಿಯುವ ಮೊದಲೇ ಹೆಣಗಳೆರೆಡು ಉರುಳಿಬೀಳುತ್ತಿವೆ. ಇಂತಹ ಸನ್ನಿವೇಶದಲ್ಲಿ ಧ್ವಜ ಹಾರಿಸುವ ದುಸ್ಥಿತಿ ಎದುರಾಗಿರುವುದು ದೌರ್ಭಾಗ್ಯವೇ ಸರಿ. ಎಲ್ಲರೆದೆಯಲ್ಲಿ ಸೌಹಾರ್ದದ ಹೂವು ಯಾವಾಗ ಅರಳುವುದೋ ಅಂದು ನನ್ನ ಭಾರತ ಸಂಭ್ರಮಿಸುತ್ತದೆ.



ಇಸ್ಮಾಯಿಲ್ ತಳಕಲ್,
ಶಿಕ್ಷಕ, ಬೆಳಗಾವಿ

ಮುನ್ನೋಟ 14-08-2022 ರಿಂದ 20-08-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಯವಂಚಕರ ಜಾಲಕ್ಕೆ ಬಿದ್ದು ಒದ್ದಾಡುವ ಸಾಧ್ಯತೆ ಇದೆ. ಹಣಕಾಸಿನ ವಿಚಾರದಲ್ಲಿ ಹೆಚ್ಚು ಎಚ್ಚರವಹಿಸಿರಿ. ಕೃಷಿಕರಿಗೆ ಆದಾಯ ಹೆಚ್ಚುವ ಸಂದರ್ಭವಿದೆ. ಆಹಾರದ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆ ಅಗತ್ಯ. ವಾಹನಗಳ ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ನ್ಯಾಯಾಲಯದ ವಿಚಾರದಲ್ಲಿ ಹೆಚ್ಚು ಅಲೆದಾಟ ಆಗಬಹುದು. ಹಣದ ಒಳಹರಿವು ಈಗ ಸಾಮಾನ್ಯಗತಿಯಲ್ಲಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ಯೋಜನೆಗಳು ತಾತ್ಕಾಲಿಕವಾಗಿ ಸ್ಥಗಿತವಾದಂತೆ ಭಾಸವಾದರೂ ಮುಂದುವರೆಯುತ್ತವೆ. ಆಸ್ತಿ ವ್ಯವಹಾರಗಳನ್ನು ಮಾಡುವವರಿಗೆ ಲಾಭ ಹೆಚ್ಚುತ್ತದೆ. ಹಣದ ಒಳಹರಿವು ನಿರೀಕ್ಷೆಯಷ್ಟು ಇದ್ದೇ ಇರುತ್ತದೆ. ಕೆಲವು ಸಮಸ್ಯೆಗಳನ್ನು ಯಥೋಚಿತವಾಗಿ ಬಗೆಹರಿಸಿಕೊಳ್ಳುವ ಅವಕಾಶಗಳು ಒದಗಿಬರುತ್ತವೆ. ಹೂವು ಮಾರಾಟಗಾರರಿಗೆ ಹೆಚ್ಚು ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮೊಂಡುವಾದಗಳಿಂದ ಯಾವುದೇ ಪ್ರಯೋಜನ ಇರುವುದಿಲ್ಲ, ಬದಲಾಗಿ ಕಿರುಕುಳ ಆಗಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಒಡಹುಟ್ಟಿದವರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಹೈನುಗಾರಿಕೆಯನ್ನು ಮಾಡುವವರಿಗೆ ಏಳಿಗೆ ಇರುತ್ತದೆ. ಹಾಲಿನ ಉತ್ಪನ್ನಗಳನ್ನು ಮಾಡುವವರ ವ್ಯವಹಾರ ವಿಸ್ತರಿಸುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬಹುದಿನಗಳ ನಂತರ ಕುಟುಂಬದ ಸದಸ್ಯರೊಡನೆ ಸಂತಸವಾಗಿ ಕಾಲ ಕಳೆಯುವಿರಿ. ನಿಮ್ಮ ನಡವಳಿಕೆ ವ್ಯಾವಹಾರಿಕವಾಗಿರುತ್ತದೆ. ಹೊಸ ಉದ್ಯೋಗ ಅವಕಾಶದಿಂದಾಗಿ ಜೀವನ ಶೈಲಿಯು ಬದಲಾವಣೆಯನ್ನು ಕಾಣುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಸಂಶೋಧನಾ ನಿರತರಿಗೆ ಉತ್ತಮ ಫಲಿತಾಂಶ ಸಿಗುವ ಸಾಧ್ಯತೆಗಳಿವೆ. ಕೃಷಿ ಬಾಂಧವರಿಗೆ ಉತ್ತಮ ಸೌಲಭ್ಯ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಕೊಂಡಿರುವವರಿಗೆ ಸಾಮಾನ್ಯವಾದ ದಿನವಾಗಿರುತ್ತದೆ. ಎಲ್ಲ ವ್ಯವಹಾರಗಳ ಬಗ್ಗೆ ಜಾಗರೂಕತೆ ಅತಿ ಮುಖ್ಯ. ನಿಮ್ಮ ಗೆಳೆಯರು ಸಹಾಯಕ್ಕಾಗಿ ನಿಮ್ಮ ಬಳಿ ಬರುವರು. ಜಮೀನು ವಿಷಯಕ್ಕೆ ಸಂಬಂಧಿಸಿದಂತೆ ನೆರೆಹೊರೆಯವರ ಬಳಿ ಕಿರಿಕಿರಿಯಾಗಬಹುದು. ಕ್ರೀಡಾಪಟುಗಳಿಗೆ ಹೆಚ್ಚು ಸಾಧನೆ ಮಾಡುವ ಅವಕಾಶ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕುಟುಂಬದ ಸಮಸ್ಯೆಗಳತ್ತ ಹೆಚ್ಚು ಗಮನ ಹರಿಸುವಿರಿ. ಸಂಗೀತಗಾರರಿಗೆ ಒಳ್ಳೆಯ ಅವಕಾಶ ದೊರೆಯುವ ಸಾಧ್ಯತೆಗಳಿವೆ. ಮಹಿಳೆಯರಿಗೆ ಹೊಸ ಸಂಪಾದನೆಯ ಮಾರ್ಗ ಒದಗಿ ಸಂತಸವಾಗುತ್ತದೆ. ದುಡುಕಿನ ನಿರ್ಧಾರಗಳು ಖಂಡಿತ ಬೇಡ. ಸರಕು ಸಾಗಿಗೆ ಮಾಡುವವರಿಗೆ ಹೆಚ್ಚು ಸಂಪಾದನೆಯಾಗುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಹೆಚ್ಚು ಶ್ರಮ ಹಾಕಬೇಕಾದ ಅಗತ್ಯ ಖಂಡಿತ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಂಶೋಧನೆಗಳನ್ನು ಮಾಡುತ್ತಿರುವವರಿಗೆ ಹೆಚ್ಚಿನ ಸಹಕಾರ ಮತ್ತು ಸೌಲಭ್ಯಗಳು ದೊರೆಯುತ್ತವೆ. ಪ್ರವಾಸ ಮಾಡುವಾಗ ಹೆಚ್ಚಿನ ಎಚ್ಚರಿಕೆ ಇರಲಿ. ನೀರು ಮತ್ತು ಆಹಾರದಿಂದ ಅನಾರೋಗ್ಯವಾಗಬಹುದು. ನಿರ್ಮಾಣ ಕೆಲಸ ಮಾಡುವವರಿಗೆ ಆರ್ಥಿಕ ಸಂಪನ್ಮೂಲಗಳನ್ನು ಹೊಂದಿಸುವಲ್ಲಿ ಹಿನ್ನಡೆ ಆಗಬಹುದು. ನಿರುದ್ಯೋಗಿಗಳಿಗೆ ತಾತ್ಕಾಲಿಕ ಅವಕಾಶ ದೊರೆಯುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ಇಂದಿನ ಉತ್ತಮ ಯೋಚನೆಗಳು ಮುಂದೆ ಉತ್ತಮ ಫಲ ಕೊಡುತ್ತವೆ. ನಿರೀಕ್ಷೆಯಷ್ಟು ಆದಾಯವನ್ನು ಕಾಣಬಹುದು. ಶಿಲ್ಪಕಲೆ ಮತ್ತು ಮೂರ್ತಿ ತಯಾರಕರಿಗೆ ವ್ಯವಹಾರ ಹೆಚ್ಚುತ್ತದೆ. ಪತ್ರಿಕೋದ್ಯಮದಲ್ಲಿ ಇರುವವರಿಗೆ ಪ್ರಮುಖ ವ್ಯಕ್ತಿಗಳನ್ನು ಸಂದರ್ಶಿಸುವ ಅವಕಾಶ ದೊರೆಯುತ್ತದೆ. ರಾಜಕೀಯದಲ್ಲಿ ಇರುವವರಿಗೆ ಸ್ವಲ್ಪ ದುಗುಡ, ದುಮ್ಮಾನಗಳು ಎದುರಾಗಬಹುದು.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಚುರುಕಾಗಿ ಕೆಲಸ ಮಾಡುವಿರಿ. ನೀವು ಯೋಚಿಸುವ ಕೆಲವು ಕೆಲಸಗಳು ವಿಳಂಬವಾದರೂ ಕೆಲಸದಲ್ಲಿ ಪೂರ್ಣ ಯಶಸ್ಸು ದೊರೆಯುತ್ತದೆ. ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ, ಪ್ರಕೃತಿ ಪ್ರಿಯರಿಗೆ ಗೌರವ ದೊರೆಯುವ ಸಾಧ್ಯತೆ ಇದೆ. ಹೊಸ ವ್ಯಕ್ತಿಗಳ ಪರಿಚಯದಿಂದಾಗಿ ಹೊಸ ವ್ಯವಹಾರವನ್ನು ಆರಂಭಿಸುವಿರಿ. ಭೂ ಸಂಬಂಧಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿರುದ್ಯೋಗಿಗಳಿಗೆ ಹಿರಿಯ ಸ್ಥಾನದಲ್ಲಿರುವ ಜನರ ಪರಿಚಯವಾಗಿ ಅವರಿಂದ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಲಾಭ ಬರುತ್ತದೆ. ರಾಜಕಾರಣಿಗಳಿಗೆ ಕ್ಷೇತ್ರದ ಮೇಲೆ ಹಿಡಿತ ಹೊಂದುವ ಸಾಧ್ಯತೆ ಒದಗಿ ಬರುತ್ತದೆ. ಷೇರು ವ್ಯಾಪಾರಸ್ಥರ ವ್ಯವಹಾರ ಸ್ಥಿರವಾಗಿರುತ್ತದೆ. ಅನಿರೀಕ್ಷಿತ ಖರ್ಚು ಬರುವ ಸಾಧ್ಯತೆ ಇದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕೆಲವು ಮುಖ್ಯ ನಿರ್ಧಾರಗಳನ್ನು ಆಲೋಚಿಸಿ ತೆಗೆದುಕೊಳ್ಳುವುದು ಉತ್ತಮ. ಕೆಲವರಿಗೆ ಉದ್ಯೋಗದಲ್ಲಿ ಸ್ಥಾನಪಲ್ಲಟ ಆಗುವ ಸಾಧ್ಯತೆಗಳಿವೆ. ತಂದೆಯಿಂದ ಮನೆ ನಿರ್ಮಾಣದ ಖರ್ಚಿನ ಬಗ್ಗೆ ಪ್ರಸ್ತಾಪವಾಗಬಹುದು. ಈ ಬಗ್ಗೆ ಮನೆಯಲ್ಲಿ ಕಾವೇರಿದ ಮಾತುಗಳು ಆಗಬಹುದು. ಕೆಲವು ವ್ಯಾಪಾರಸ್ಥರಿಗೆ ಅನಿರೀಕ್ಷಿತ ಲಾಭವಿರುತ್ತದೆ. ಒಡಹುಟ್ಟಿದವರಿಂದ ಯಾವುದೇ ಸಹಾಯವನ್ನು ನಿರೀಕ್ಷೆ ಮಾಡಬೇಡಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಯೊಂದು ದೂರವಾಗುತ್ತದೆ. ಸ್ವಯಂ ಉದ್ಯೋಗಿಗಳಿಗೆ ಅಧಿಕ ಪರಿಶ್ರಮದಿಂದ ಹೆಚ್ಚಿನ ಲಾಭವಾಗುವ ಸಾಧ್ಯತೆಗಳಿವೆ. ಸಮಾಜದ ಕೆಲವು ಧುರೀಣರಿಗೆ ಅಪಮಾನಕರ ಘಟನೆಗಳು ಎದುರಾಗಬಹುದು. ನೆರೆಹೊರೆಯವರೊಡನೆ ಸಂಬಂಧ ಸರಿಯಾಗಿ ಇಟ್ಟುಕೊಳ್ಳುವುದು ಬಹಳ ಉತ್ತಮ. ಕೆಲವರಿಗೆ ಉದ್ಯೋಗದ ನಿಮಿತ್ತ ದೂರ ಪ್ರಯಾಣ ಮಾಡುವ ಸಾಧ್ಯತೆ ಇದೆ.

ಪದಬಂಧ 2751



ಮೇಲಿನಿಂದ ಕೆಳಕ್ಕೆ
1. ಹೆಸರು ಸೂಚಿಸುವ ನಿರ್ದೇಶಕ ಶಬ್ದ 4
2. ಕರುಣಾಳು ಭಗವಂತನಿಗೆ ಸಲ್ಲುವ ಸಾಲು 6
3. ಲಂಕೆಯ ಪ್ರಭು ದಶಶಿರ ತಲೆಕೆಳಗೆ 3
4. ಒಪ್ಪವಾಗಿ ಒಡಹುಟ್ಟಿದವನ ದೀರ್ಘಸ್ವರೂಪ 3
5. ಒಳ್ಳೆಯ ಕೆಲಸದಲ್ಲಿ ಸದಾ ನಿರತನಾದ ಮಹಾನುಭಾವ 6
7. ಹೊಗಳಿಕೆಗೆ ಈಡಾದ ಹಣ ಸಂಪತ್ತು 4
9. ದುಪ್ಪಟ್ಟಿನ ಮಾನದಿಂದ ಉಂಟಾದ ಅಳಲು 3
10. ತ್ಯಾಗರಾಜರ ಕೃತಿಯಲ್ಲಿ ವಂದನೆಗೆ ಅರ್ಹರಾದ ಎಷ್ಟೋ ಜನ ಉತ್ತಮರು 6
11. ದ್ರವದಿಂದ ಉಕ್ಕಿ ಹರಿವ ಸಂತೋಷದ ಸ್ಥಿತಿ 4
13. ಪಾಠದ ನಡುವೆ ಊಟದ ಬಿಡುವು 6
16. ಹಾಸ ಜೇನಿನಂತೆ ತೊಟುಕುತ್ತದೆ 4
18. ಅದರಲ್ಲೇ ನಿರತ 3
19. ಸಂಸ್ಕೃತದಲ್ಲಿ ಒಂಬತ್ತನೆಯವ 3

ಎಡದಿಂದ ಬಲಕ್ಕೆ
1. ನರನಾರಾಯಣರ ನಡುವಣ ಕಲಹಪ್ರಿಯ ಮಹರ್ಷಿಯ ದೊಡ್ಡ ಕಥೆ 6
4. ಆಕಾಶ ನೋಡಿ ಬಟ್ಟೆ ಒಗೆಯುವವ 3
6. ವಿಶಿಷ್ಟಾದ್ವೈತದ ಮೂಲ ಪುರುಷ ಮಾರ್ಗದರ್ಶಕ 6
8. ಕೊತ್ತಂಬರಿ ಬೀಜದ ಪರ್ಯಾಯ 3
9. ಮೂಗು ಮುಚ್ಚಿಸುವ ಕೆಟ್ಟ ವಾಸನೆ 3
10. ದೊಡ್ಡದಾದ ಕೊಡುಗೆಯ ಪರಿಸರ 4
12. ಆಕಾಶದಲ್ಲಿ ಆಕಾಶಕಾಯಗಳ ಒಂದು ಗುಂಪು 4
14. ಸಿದ್ಧಿ ಮಾಡಿಕೊಳ್ಳಲು ಅಗತ್ಯವಾದ ಸಲಕರಣೆ 3
15. ನವಿರಾದ ಕಣ್ಣು 3
17. ನಮ್ಮ ರಾಷ್ಟ್ರಕ್ಕೆ ಕನ್ನಡಿ ಹಿಡಿದು ತೋರುವ ಕಾರ್ಯಕ್ರಮ 6
20. ಸಂಸ್ಕೃತದಲ್ಲಿ ಹರಿವ ನೆತ್ತರು 3
21. ಚಂಡಿಚಾಮುಂಡಿಯಾಗಿ ಕೋಣನನ್ನು ಅಡಗಿಸಿದವಳು 6

ಪದಬಂಧ ಉತ್ತರ -2750

ಮೇಲಿಂದ ಕೆಳಕ್ಕೆ
1.ರಘುರಾಮ 2.ಧರ್ಮಗುರು 4.ಪವಡಿಸು 5.ಕಡಿವಾಣ 7.ನೆಲವಾಗಿಲು 8.ಕಲಾವಿದರು 9.ಅನುಕರಿಸು 10.ಗಡಿವಿವಾದ 15.ಹಾಲುತನ 16.ಸಮಾಧಾನ 18.ರಸಧಾರೆ 19.ರಿಪುದಳ


ಎಡದಿಂದ ಬಲಕ್ಕೆ
1. ರಕ್ಷಾಬಂಧನ 3.ರೂಪವರ್ಧಕ 6.ಮನೆಮುರುಕ 9.ಅಸುರಗಣ 11.ಲಾಟೀನು 12.ವಾಮದೇವಿ 13.ಕಷ್ಟಜೀವಿ 14.ದರ್ಬಾರಿ 15.ಹಾಲುಮೊಸರು 17.ಸುರಸುಂದರಿ 20. ನಗೆಹೊನಲು 21.ಕೆರೆಯಂಗಳ



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಪುರಾತತ್ವ ಇಲಾಖೆ ದೇಶದ ಪಾರಂಪರಿಕ ತಾಣಗಳಿಗೆ ತಿರಂಗಾ ಬೆಳಕಿನ ವ್ಯವಸ್ಥೆ ಮಾಡಿದೆ. ಹಂಪಿಯ ಸ್ಮಾರಕಗಳು ತಿರಂಗಾದಲ್ಲಿ ಹೊಳೆದಾಗ...

ಚಿತ್ರ: ತಾಜುದ್ದೀನ್ ಆಜಾದ್





ಹಂಪಿಯ ಕಲ್ಲಿನ ರಥ



ಕಲಬುರಗಿ ಕೋಟೆ



ಬೆಂಗಳೂರಿನ ಟಿಪ್ಪು ಅರಮನೆ


ನನ್ನ ಭಾರತ

ಬೇಕಿದೆ ನೆಮ್ಮದಿಯ ಸ್ವಾತಂತ್ರ್ಯ

ಬ್ರಿಟಿಷರಿಂದ, ರಜಾಕಾರರ ಹಾವಳಿಯಿಂದ, ಅವರ ದಾಸ್ಯದಿಂದ ಮುಕ್ತಿಪಡೆದು ನೆಮ್ಮದಿಯಾಗಿ ಬದುಕಿದರೆ ಸಾಕು; ಅದೇ ಸ್ವಾತಂತ್ರ್ಯವೆಂದು ನಾವೆಲ್ಲರೂ ಭಾವಿಸಿದ್ದೆವು. ನಾವು ಅಂದುಕೊಂಡಿದ್ದೆಲ್ಲವೂ ಸಿಕ್ಕಿತು.

ಒಂದೂರಿನಿಂದ ಇನ್ನೊಂದು ಊರಿಗೆ ಹೋಗಬೇಕಾದರೆ ದಿನಗಟ್ಟಲೆ, ತಿಂಗಳುಗಟ್ಟಲೆ ನಡೆಯಬೇಕಾದ ಕೆಟ್ಟ ಪರಿಸ್ಥಿತಿಯಿತ್ತು. ಒಪ್ಪೊತ್ತಿನ ಊಟಕ್ಕೆ ಪರದಾಡಬೇಕಾಗಿತ್ತು. ಅದೆಲ್ಲವೂ ಈಗ ದೂರವಾಗಿದೆ. ಹೋರಾಟಕ್ಕಾಗಿ ನಮ್ಮ ಮುಂದೆಯೇ ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ. ನೋವು ಅನುಭವಿಸಿದ್ದಾರೆ. ಆ ದುರಂತವನ್ನೆಲ್ಲ ನೋಡಿದರೆ ಸ್ವಾತಂತ್ರ್ಯ ಆದಷ್ಟು ಬೇಗನೆ ಸಿಗಬೇಕು ಅನ್ನಿಸಿದ್ದು ಸುಳ್ಳಲ್ಲ.

ಆದರೆ, ಈಗ ಜಾತಿಜಾತಿಗಳ ನಡುವೆ ನಡೆಯುತ್ತಿರುವ ಸಂಘರ್ಷ, ಘರ್ಷಣೆ ನೋಡಿದರೆ ಮತ್ತೆ ನಮ್ಮ ಸ್ವಾತಂತ್ರ್ಯ ಕಳೆದುಕೊಳ್ಳುತ್ತಿದ್ದೇವೆ. ಇನ್ನೊಬ್ಬರ ತಾಳಕ್ಕೆ ಕುಣಿಯುತ್ತಿದ್ದೇವೆ ಎನ್ನುವ ಆತಂಕ ಶುರುವಾಗಿದೆ.




ನಮ್ಮೂರಿನಲ್ಲಿ ಕುಟುಂಬದವರು, ಬಂಧುಗಳು, ಸ್ನೇಹಿತರು, ಎಲ್ಲಾ ಸಮಾಜದವರು ಒಟ್ಟಿಗೆ ಸೇರಿ ಊಟ ಮಾಡುವ, ಹರಟೆ ಹೊಡೆಯುವ ಸಂಭ್ರಮದ ಹಾಗೂ ನೆಮ್ಮದಿಯ ದಿನಗಳನ್ನು ಸಾಕಷ್ಟು ಅನುಭವಿಸಿದ್ದೇನೆ. ಆದರೆ, ಈಗ ಅನೇಕರು ಹೊಟ್ಟೆಪಾಡಿಗಾಗಿ ಊರು, ದೇಶ ಬಿಟ್ಟು ಹೋಗುತ್ತಿದ್ದಾರೆ. ಎಲ್ಲರೂ ನೆಮ್ಮದಿಗಾಗಿ ಅಲೆದಾಡುವಂತಾಗಿದೆ. ದೇಶ, ವಿದೇಶದ ಸುತ್ತಾಟ ಸಾಕಾಗಿ ಮತ್ತೆ ಹುಟ್ಟೂರಿಗೆ ಬಂದಾಗ ನೆಮ್ಮದಿಯ, ಸ್ವಾತಂತ್ರ್ಯದ ಸುಖ ಅನುಭವಿಸುತ್ತಾರೆ. ಈ ಸುಖ ಎಲ್ಲರಿಗೂ ಇದ್ದೂರಿನಲ್ಲಿಯೇ ಸಿಗಬೇಕು. ಆಗಮಾತ್ರ ಅಮೃತ ಮಹೋತ್ಸವ ಸಂಭ್ರಮಕ್ಕೆ ಅರ್ಥ ಬರುತ್ತದೆ.

ಮಲ್ಲಮ್ಮ ಮೂಲಿಮನಿ,
ಸ್ವಾತಂತ್ರ್ಯ ಹೋರಾಟಗಾರನ ಪತ್ನಿ, ತಳಕಲ್ (ಕೊಪ್ಪಳ)

ದೇವರ ಕೃಪೆ ನಿರಂತರ...

ಸಂಗೀತ, ಸಾಹಿತ್ಯ, ಸಂಸ್ಕೃತಿಯ ಸಂಪತ್ಭರಿತ ದೇಶ ನಮ್ಮದು, ಋಷಿ, ಮುನಿ, ಗುರುವರ್ಯರು ಓಡಾಡಿದ ನೆಲ ನಮ್ಮದು. ನಿಸ್ವಾರ್ಥ ಸೇವೆಯೇ ನಮ್ಮ ದೇಶದ ಶಕ್ತಿ. ಸಂಗೀತ, ಸಂಸ್ಕೃತಿ ಎಂದೂ ವ್ಯವಹಾರವಾಗಿಲ್ಲ. ಆ ನಿಟ್ಟಿನಲ್ಲಿ ಮೊದಲಿನಿಂದಲೂ ನಮ್ಮ ದೇಶ ಇಡೀ ವಿಶ್ವದಲ್ಲೇ ಆದರ್ಶ ಎನಿಸಿದೆ. ನಮ್ಮ ಜೊತೆಯಲ್ಲಿ ಹಾಸುಹೊಕ್ಕಾಗಿರುವ ಅಧ್ಯಾತ್ಮದ ಹೊದಿಕೆ ನಮ್ಮನ್ನು ಮತ್ತಷ್ಟು ಸದೃಢಗೊಳಿಸಿದೆ. ದೇವರ ಕೃಪೆ ನಿರಂತರವಾದುದು. ಇಡೀ ಪ್ರಪಂಚ ಅನುಸರಿಸಬಹುದಾದ ಅಧ್ಯಾತ್ಮ ಶಕ್ತಿ ನಮ್ಮ ದೇಶದಲ್ಲಿದೆ. ನಮ್ಮ ಯೋಗ ಸಂಸ್ಕೃತಿ ಪ್ರಪಂಚಕ್ಕೆ ಆರೋಗ್ಯ ಕರುಣಿಸಿದ್ದು ನಮ್ಮ ದೇಶಕ್ಕೆ ಗುರುವಿನ ಸ್ಥಾನವಿದೆ.



ವಾಸ್ತವಿಕ ಭಾರತದಲ್ಲಿ ಆಧುನಿಕತೆಯ ಸ್ಪರ್ಶದೊಂದಿಗೆ ಕೆಲವು ಬದಲಾವಣೆಗಳಾಗಿವೆ. ಹಲವು ಆಕರ್ಷಣೆಗಳ ನಡುವೆ ಸಂಸ್ಕೃತಿ ಮಾಸಿದಂತೆ ಕಾಣುತ್ತಿದೆ, ಆದರೆ ಅದು ನಿಜವಲ್ಲ. ಸಂಸ್ಕೃತಿ, ಸಾಹಿತ್ಯ, ಸಂಗೀತ ಕ್ಷೇತ್ರ ಇಂದಿಗೂ ಶ್ರೀಮಂತವಾಗಿದೆ. ಸಂಸ್ಕೃತಿಯನ್ನು ಪ್ರೀತಿಸುವ ಹೊಸ ಪೀಳಿಗೆ ಹುಟ್ಟಿ ಬರುತ್ತಿದೆ. ಸಂಗೀತವನ್ನು ಬಹಳ ಗಂಭೀರವಾಗಿ ಸ್ವೀಕಾರ ಮಾಡಿರುವ ಯುವಕರನ್ನು ಕಂಡರೆ ಕಣ್ತುಂಬಿ ಬರುತ್ತದೆ. ಅವರ ಗಾಯನವನ್ನು ಕೇಳಿದಾಗ ಮನಸ್ಸು ಆರ್ದ್ರಗೊಳ್ಳುತ್ತದೆ. ದೇವರ ಕೃಪೆ ಎಂದಿಗೂ ನಿಲ್ಲುವಂಥದ್ದಲ್ಲ.

ಪಂ.ಎಂ.ವೆಂಕಟೇಶ ಕುಮಾರ್
ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ, ಧಾರವಾಡ

ಸೌಲಭ್ಯ ಹೆಚ್ಚಿಸಿದರೆ ಅದುವೇ 'ಅಮೃತ'...

ಕ್ರೀಡಾಕ್ಷೇತ್ರದಲ್ಲಿ ಭಾರತ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಜೃಂಭಿಸುತ್ತಿದೆ. ಇದಕ್ಕೆ ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಗೆದ್ದ ಪದಕಗಳೇ ಸಾಕ್ಷಿ.

ಕ್ರೀಡಾಪಟುಗಳ ಸಾಧನೆ ಕೂಡ ದೇಶದ ಅಭಿವೃದ್ಧಿ ಹಾಗೂ ಅಲ್ಲಿನ ಸಾಧಕರಿಗೆ ನೀಡಿದ ಮುಕ್ತ ಸ್ವಾತಂತ್ರ್ಯದ ಸಂಕೇತವೆಂದು ಭಾವಿಸಿದ್ದೇನೆ. ಈ ಪದಕಗಳನ್ನು ದುಪ್ಪಟ್ಟು ಮಾಡಲು ನಮಗೆ ಸ್ಥಳೀಯವಾಗಿ ಗುಣಮಟ್ಟದ ಸೌಲಭ್ಯಗಳು, ತರಬೇತುದಾರರು ಹಾಗೂ ಸಾಮಗ್ರಿಗಳನ್ನು ಒದಗಿಸಬೇಕು. ನಮಗೆ ಬೇಕಾದ ಕೋಚ್ ಆಯ್ಕೆ ಮಾಡಿಕೊಳ್ಳಲು ಮುಕ್ತ ಸ್ವಾತಂತ್ರ್ಯ ನೀಡಬೇಕು, ಬಯಸಿದ ಸ್ಥಳದಲ್ಲಿ ತರಬೇತಿಗೆ ವ್ಯವಸ್ಥೆ ಮಾಡಿಕೊಡಬೇಕು.

ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಅವಕಾಶಗಳು, ಸಾಮಗ್ರಿಗಳು ಸಿಕ್ಕಿವೆ. ಹೀಗಿದ್ದೂ ಇವು ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ತೀರಾ ಕಡಿಮೆ. ನಮ್ಮೂರಿನಲ್ಲಿಯೇ ಸೈಕ್ಲಿಂಗ್ ವೆಲೊಡ್ರೋಮ್, ಪ್ರತ್ಯೇಕ ಸೈಕಲ್ ಟ್ರ್ಯಾಕ್ ಸೇರಿದಂತೆ ಹಲವು ಸೌಲಭ್ಯಗಳನ್ನು ಕೊಟ್ಟರೆ ಅಭ್ಯಾಸಕ್ಕೆ ಅನುಕೂಲವಾಗುತ್ತದೆ. ವಿಶ್ವದ ಕ್ರೀಡಾ ವೇದಿಕೆಯಲ್ಲಿ ದೇಶದ ಕೀರ್ತಿ ಪತಾಕೆ ಹಾರಿಸಲು ಸಾಧ್ಯವಾಗುತ್ತದೆ. ಅವಕಾಶ ಸಿಗದೇ ಕುಗ್ರಾಮಗಳಲ್ಲಿದ್ದುಕೊಂಡು ದೊಡ್ಡ ಸಾಧನೆಯ ಕನಸು ಹೊತ್ತು ಕಾಯುತ್ತಿರುವ ನನ್ನಂಥ ಲಕ್ಷಾಂತರ ಕ್ರೀಡಾಪಟುಗಳಿಗೆ 'ಸವಲತ್ತುಗಳ ಸ್ವಾತಂತ್ರ್ಯ' ಬೇಕಿದೆ. ಆಗ ಮಾತ್ರ ಈಗಿನ ಸಾಧನೆಯ ಹೊಳಪು ಮತ್ತಷ್ಟು ಪ್ರಜ್ವಲಿಸಲು ಸಾಧ್ಯ. ಇದರಿಂದ ದೇಶದ 'ಅಮೃತ'ದ ಸಂಭ್ರಮವೂ ಹೆಚ್ಚಾಗುತ್ತದೆ.

ದಾನಮ್ಮ ಚಿಚಖಂಡಿ
ಅಂತರರಾಷ್ಟ್ರೀಯ ಸೈಕ್ಲಿಸ್ಟ್, ಬಾಗಲಕೋಟೆ



ನಭಕ್ಕೇರಿದ ತಿರಂಗಾ; ಅಭಿಮಾನದ ಉತ್ತುಂಗ

ಮಾಹಿತಿ: ಸ್ಮಿತಾ ಶಿರೂರ

2021ರಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನ ಜಾವಲಿನ್ ಥ್ರೋ ಸ್ಪರ್ಧೆ. ಚಿನ್ನ ಗೆದ್ದ ಭಾರತದ ನೀರಜ್ ಚೋಪ್ರಾ ತ್ರಿವರ್ಣ ಧ್ವಜ ಹಿಡಿದು ಓಡಿದಾಗ ದೇಶದಾದ್ಯಂತ ಸಂಭ್ರಮ ಮುಗಿಲು ಮುಟ್ಟಿತ್ತು. ಕೇಸರಿ, ಬಿಳಿ, ಹಸಿರು ವರ್ಣಗಳ ರಾಷ್ಟ್ರಧ್ವಜ ಹಾರಾಡುವ ಚಿತ್ರಣ ಕಣ್ಮುಂದೆ ಬಂದಾಗಲೆಲ್ಲ ದೇಶ-ವಿದೇಶಗಳಲ್ಲಿರುವ ಭಾರತೀಯರ ಮನದಲ್ಲಿ ದೇಶಪ್ರೇಮದ ಚಿಲುಮೆ.

ಸಂಭ್ರಮಾಚರಣೆಯ ನಂತರ ತ್ರಿವರ್ಣ ಧ್ವಜವನ್ನು ನೀರಜ್ ಅಚ್ಚುಕಟ್ಟಾಗಿ ಮಡಚಿ ಬ್ಯಾಗ್‌ಗೆ ಹಾಕಿದ ದೃಶ್ಯವಂತೂ ದೇಶಪ್ರೇಮಿಗಳನ್ನು ಇನ್ನಷ್ಟು ಭಾವುಕರಾಗುವಂತೆ ಮಾಡಿತು. ರಾಷ್ಟ್ರೀಯ ಧ್ವಜ ಎಂದರೆ ಒಂದು ಬಟ್ಟೆಯ ತುಂಡಲ್ಲ, ಅದು ದೇಶದ ಸಮಸ್ತ ಪ್ರಜೆಗಳ ಅಭಿಮಾನದ ಸಂಕೇತ ಎನ್ನುವುದನ್ನು ಹೇಳಲು ಇಂಥ ಹಲವು ನಿದರ್ಶನಗಳು ಸ್ಮೃತಿ ಪಟಲದಲ್ಲಿ ತೇಲಿ ಬರುತ್ತವೆ.



ಒಲಿಂಪಿಕ್ಸ್‌ನಲ್ಲಿ ದೇಶದ ಧ್ವಜ ಹಿಡಿದು ಸಾಗುವುದೇ ಬಹುದೊಡ್ಡ ಗರಿಮೆ. 1920ರಲ್ಲಿ ಬೆಲ್ಜಿಯಂನ ಆ್ಯಂಟ್‌ವರ್ಪ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ 400 ಮೀಟರ್ಸ್ ಓಟಗಾರ್ತಿ ಪೂರ್ಮಾ ಬ್ಯಾನರ್ಜಿ ಅವರಿಗೆ ಅಂದಿನ ಭಾರತೀಯ ಧ್ವಜವನ್ನು ಹಿಡಿದು ನಡೆಯುವ ಗೌರವ ಲಭಿಸಿತು. ಸ್ವಾತಂತ್ರ್ಯಾನಂತರ 1948ರಲ್ಲಿ ಭಾರತೀಯ ಫುಟ್‌ಬಾಲ್ ತಂಡದ ಕ್ಯಾಪ್ಟನ್ ಡಾ.ತಲಿಮೆರನ್ ಆವ್ ಅವರಿಗೆ ತಿರಂಗಾ ಹಿಡಿಯುವ ಭಾಗ್ಯ ಲಭಿಸಿತು. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗಳಿಸಿದ್ದ ಅಭಿನವ್ ಬಿಂದ್ರಾ ಅವರಿಗೆ 2016ರ ಒಲಿಂಪಿಕ್ಸ್ ಧ್ವಜಧಾರಿಯಾಗುವ ಗೌರವ ಲಭಿಸಿತು. ಹಾಕಿಯಲ್ಲಿ 3 ಬಾರಿ ಪದಕ ವಿಜೇತರಾದ ಬಲಬೀರ್‌ಸಿಂಗ್ ಅವರಿಗೆ 2 ಬಾರಿ ಧ್ವಜ ಹಿಡಿಯುವ ಅವಕಾಶ ಲಭಿಸಿದ್ದರೆ, 1992ರಲ್ಲಿ ಬಾರ್ಸಿಲೋನಾದಲ್ಲಿ ನಡೆದ ಒಲಿಂಪಿಕ್ ಕೂಟದಲ್ಲಿ ಓಟಗಾರ್ತಿ ಶೈನಿ ಅಬ್ರಾಹಂ ಪ್ರಥಮ ಬಾರಿಗೆ ಧ್ವಜ ಹಿಡಿದ ಭಾರತೀಯ ಮಹಿಳೆ ಎನಿಸಿದರು.

1983ರಲ್ಲಿ ಕ್ರಿಕೆಟ್ ವರ್ಲ್ಡ್‌ಕಪ್ ಜಯಿಸಿದ್ದ ಭಾರತ ತಂಡ ತ್ರಿವರ್ಣ ಧ್ವಜ ಹಿಡಿದು ಕ್ರೀಡಾಂಗಣದಲ್ಲಿ ಓಡಿದ ದೃಶ್ಯ ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಹಚ್ಚ ಹಸಿರಾಗಿದೆ. ಈಚೆಗೆ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲೂ ಹಲವು ಪದಕಗಳನ್ನು ಗಳಿಸಿದ ಭಾರತದ ಕ್ರೀಡಾಪಟುಗಳು ತ್ರಿವರ್ಣ ಧ್ವಜ ಕ್ರೀಡಾಕೂಟದಲ್ಲಿ ರಾರಾಜಿಸುವಂತೆ ಮಾಡಿದರು. ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಪಿ.ವಿ. ಸಿಂಧು ಹಾಗೂ ಸೈನಾ ನೆಹ್ವಾಲ್ ಸೇರಿದಂತೆ ಹಲವು ಪ್ರತಿಭೆಗಳು ಹಲವು ಬಾರಿ ತಿರಂಗಾ ಹಾರಾಡುವಂತೆ ಮಾಡಿ ಭಾರತೀಯರಿಗೆ ಹೆಮ್ಮೆ ತಂದಿದ್ದಾರೆ.


2022ರ ಜುಲೈ 29ರಂದು ಭಾರತೀಯ ಕರಾವಳಿ ಪಡೆ ಸಮುದ್ರದ ಒಳಗೆ ತ್ರಿವರ್ಣ ಧ್ವಜ ಅನಾವರಣಗೊಳಿಸಿ ಹೊಸ ದಾಖಲೆ ಬರೆಯಿತು. 2022ರ ಏಪ್ರಿಲ್ 23ರಂದು ಬಿಹಾರದ ಭೋಜಪುರದಲ್ಲಿ 78,220 ಮಂದಿ ಒಟ್ಟಿಗೆ ತ್ರಿವರ್ಣ ಧ್ವಜವನ್ನು ಹಾರಿಸಿದ್ದು ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಯಿತು.





ತ್ರಿವರ್ಣದಲ್ಲಿ ಮ್ಯಾಟರ್ ಹಾರ್ನ್ ಪರ್ವತ

ಜಗತ್ತಿನ ಅತಿ ಎತ್ತರದ ಕಟ್ಟಡ ದುಬೈನ ಬುರ್ಜ್ ಖಲೀಫಾ ತ್ರಿವರ್ಣ ಧ್ವಜದ ಬಣ್ಣಗಳಲ್ಲಿ ಮಿನುಗಿದ್ದು 2021ರ ಆಗಸ್ಟ್ 15ರಂದು. ಕೋವಿಡ್ ಸಂಕಷ್ಟದಲ್ಲಿ ಭಾರತೀಯರಿಗೆ ಸಹಾನುಭೂತಿ ಪ್ರದರ್ಶಿಸಲು ಯನೈಟೆಡ್ ಅರಬ್ ಎಮಿರೇಟ್ಸ್, ಬುರ್ಜ್ ಖಲೀಫಾಕ್ಕೆ 'ತ್ರಿವರ್ಣ'ದ ರಂಗು ನೀಡಿತ್ತು.




2020 ಏಪ್ರಿಲ್ 18ರಂದು ಸ್ವಿಟ್ಜರ್ಲೆಂಡ್‌ನ ಆಲ್ಪ್ಸ್ ಪರ್ವತ ಶ್ರೇಣಿಯ ಮ್ಯಾಟರ್ ಹಾರ್ನ್ ಪರ್ವತವು ಭಾರತೀಯ ಧ್ವಜದ ವರ್ಣದಲ್ಲಿ ಬೆಳಗಿತು. ಕೋವಿಡ್ ಸಂಕಷ್ಟದಿಂದ ನಲುಗುತ್ತಿದ್ದ ದೇಶಕ್ಕೆ ಆಶಾಭಾವ ಮೂಡಿಸಿತು. ಪಿರಮಿಡ್ ರೂಪದ ಪರ್ವತವು ತಿರಂಗಾ ಸ್ವರೂಪದಲ್ಲಿ ಬೆಳಗುವಂತೆ ಮಾಡಿದ ಸ್ವಿಸ್ ದೀಪಗಳ ಕಲಾವಿದ ಗೆರಿ ಹಾಫ್‌ಸ್ಟೆಟರ್ ಅವರ ಕೈಚಳಕಕ್ಕೆ ದೇಶ ಉಘೇ ಎಂದಿತು.

ಜಗತ್ತಿನ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್‌ನಲ್ಲೂ ಭಾರತದ ತ್ರಿವರ್ಣ ಧ್ವಜ ಹಾರಾಡಿದೆ. 1953 ಮೇ 29ರಂದು ಈ ಶಿಖರವೇರಿದ ಎಡ್ಮಂಡ್ ಹಿಲರಿ ಹಾಗೂ ತೇನ್‌ಸಿಂಗ್ ನಾರ್ಗೆ ಅವರು ಅಲ್ಲಿ ಭಾರತ, ಇಂಗ್ಲೆಂಡ್, ಉತ್ತರ ಐರ್ಲೆಂಡ್ ಹಾಗೂ ನೇಪಾಳದ ಧ್ವಜಗಳನ್ನು ನೆಟ್ಟರು. ಇದರೊಂದಿಗೆ ಭಾರತೀಯರ ಹರ್ಷ ಶಿಖರದತ್ತ ಮುಖ ಮಾಡಿತ್ತು.

ಲಡಾಖ್‌ನ ಲೇಹ್ ಕಣಿವೆಯ ಅತಿ ಎತ್ತರದ ಶಿಖರದಲ್ಲಿ ಕಳೆದ ವರ್ಷ ಅತಿ ದೊಡ್ಡ ತಿರಂಗಾ ಹಾರಾಡಿತು. ಮಹಾತ್ಮ ಗಾಂಧಿ ಅವರ 152ನೇ ಜನ್ಮಶತಮಾನೋತ್ಸವದ ಸಂದಭದಲ್ಲಿ 225 ಅಡಿ ಉದ್ದ, 150 ಅಡಿ ಅಗಲ, ಸಾವಿರ ಕೆ.ಜಿ ತೂಕದ ಕೈಮಗ್ಗದ ಖಾದಿ ರಾಷ್ಟ್ರಧ್ವಜವನ್ನು ಅನಾವರಣಗೊಳಿಸಲಾಯಿತು. ಇದರಲ್ಲಿ ಅಶೋಕ ಚಕ್ರ 30 ಅಡಿ ವ್ಯಾಸ ಹೊಂದಿತ್ತು. 4,500 ಮೀಟರ್‌ಗಳಷ್ಟು ಕೈಮಗ್ಗದ ದಾರ ಬಳಸಿ ಈ ಧ್ವಜವನ್ನು ತಯಾರಿಸಲಾಗಿತ್ತು.

1984ರ ಏಪ್ರಿಲ್‌ನಲ್ಲಿ ಇಂಡೋ-ಸೋವಿಯತ್ ಜಂಟಿ ಅಂತರಿಕ್ಷ ಯಾನ ನಡೆದಾಗ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ತಮ್ಮ ಸ್ಪೇಸ್ ಸ್ಯೂಟ್‌ನಲ್ಲಿ ತ್ರಿವರ್ಣ ಧ್ವಜದ ಲಾಂಛನ ಧರಿಸಿದ್ದನ್ನು ಯಾರೂ ಮರೆಯಲಾರರು. 2012ರ ಆಗಸ್ಟ್ 14ರಂದು ಅಂತರಿಕ್ಷದಲ್ಲಿ ಮತ್ತೊಮ್ಮೆ ಭಾರತದ ಧ್ವಜ ಹಾರಾಡಿತು. ಇಂಡೋ-ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ನಾಸಾದ ಅಂತರಿಕ್ಷ ನಿಲ್ದಾಣದಲ್ಲಿ ತಿರಂಗಾವನ್ನು ಪ್ರದರ್ಶಿಸಿ ಭಾರತೀಯರಿಗೆ ಸ್ವಾತಂತ್ರ್ಯೋತ್ಸವಕ್ಕೆ ಶುಭ ಕೋರಿದ್ದರು.



ನ್ಯೂಯಾರ್ಕ್‌ನ 'ಟೈಮ್ಸ್ ಸ್ಕ್ವೇರ್' ಎಂದರೆ ಪ್ರಖ್ಯಾತ ಪ್ರವಾಸಿ ಸ್ಥಳ. ಇಲ್ಲಿ ನಡೆಯುವ ಘಟನೆಗಳು ಯಾವಾಗಲೂ ಜಗತ್ತಿನ ಗಮನ ಸೆಳೆಯುತ್ತವೆ. 2021ರಂದು ಆಗಸ್ಟ್ 15ರಂದು 'ದಿ ಫೆಡರೇಷನ್ ಆಫ್ ಇಂಡಿಯನ್ ಅಸೋಸಿಯೇಷನ್ಸ್' ಭಾರತದ ಬೃಹತ್ ಧ್ವಜವನ್ನು ಅನಾವರಣ ಮಾಡಿತು. 25 ಅಡಿ ಎತ್ತರದ ಧ್ವಜಸ್ತಂಭದಲ್ಲಿ 48 ಚದರ ಅಡಿ ವಿಸ್ತೀರ್ಣದ ಧ್ವಜಾರೋಹಣ ಮಾಡಿದಾಗ ಭಾರತೀಯ ಮೂಲದವರು ಸಂಭ್ರಮಿಸಿದರು.

ರಾಜಸ್ಥಾನ-ಪಾಕಿಸ್ತಾನ ಗಡಿರೇಖೆ ಇರುವ ರಾಜಸ್ಥಾನದ ಲಾಂಗೇವಾಲಾದಲ್ಲೂ 2022ರ ಜನವರಿ 15ರಂದು ಧ್ವಜವನ್ನು 74ನೇ ಆರ್ಮಿ ಡೇ ನಿಮಿತ್ತ ಹಾರಿಸಲಾಯಿತು. 1971ರಲ್ಲಿ ಭಾರತ ಪಾಕಿಸ್ತಾನ ಯುದ್ಧ ನಡೆದ ಸ್ಥಳವಾದ ಇಲ್ಲಿ ಧ್ವಜಾರೋಹಣಕ್ಕೆ ಹೆಚ್ಚಿನ ಮಹತ್ವವಿದೆ.

ಶ್ರೀನಗರದ ಲಾಲ್‌ಚೌಕ್‌ನಲ್ಲಿ 2022ರ ಜನವರಿ 26 ಗಣರಾಜ್ಯೋತ್ಸವದಂದು ರಾಷ್ಟ್ರಧ್ವಜಾರೋಹಣಕ್ಕೆ ಎಲ್ಲಿಲ್ಲದ ಮಹತ್ವ ಲಭಿಸಿತು. ಕಾರಣ ಸ್ವಾತಂತ್ರ್ಯಾನಂತರ ಭಾರತೀಯ ಧ್ವಜ ಹಾರಿಸಲು ಸಾಧ್ಯವಾಗದ ಏಕೈಕ ಸ್ಥಳ ಇದಾಗಿತ್ತು. ಸ್ಥಳೀಯ ಹೋರಾಟಗಾರರಾದ ಸಾಜಿದ್ ಯೂಸುಫ್ ಹಾಗೂ ಸಾಹಿಲ್ ಬಷೀರ್ ಕ್ರೇನ್‌ನಲ್ಲಿ ಕುಳಿತು ಪ್ರಥಮ ಬಾರಿಗೆ ತ್ರಿವರ್ಣ ಧ್ವಜ ಹಾರಿಸಿ ಸಾಹಸ ಮೆರೆದಿದ್ದು ದೇಶದಾದ್ಯಂತ ಸಂಚಲನ ಮೂಡಿಸಿತು. ಕಾಶ್ಮೀರಿಗಳ ಮನದಾಳವನ್ನು ತಿರಂಗಾ ಮೂಲಕ ಪ್ರಸ್ತುತ ಪಡಿಸಿದ ಯುವಕರ ಸಾಹಸ ಮನೆಮಾತಾಯಿತು.

ಜಗತ್ತಿನ ಅದ್ಭುತಗಳಲ್ಲಿ ಒಂದಾಗಿರುವ ಕೆನಡಾದ ನಯಾಗಾರಾ ಜಲಪಾತದಲ್ಲಿ 2020ರ ಆ. 16ರಂದು ಭಾರತದ ಧ್ವಜದ ತ್ರಿವರ್ಣಗಳ ಬೆಳಕನ್ನು ಮೂಡಿಸಿ ಸ್ವಾತಂತ್ರ್ಯೋತ್ಸವಕ್ಕೆ ಶುಭ ಕೋರಲಾಯಿತು.



ಸ್ವತಂತ್ರ ಭಾರತದ ಮೊದಲ ಅಂಚೆ ಚೀಟಿ ಇದು. 1947ರ ನವೆಂಬರ್ 21ರಂದು ಬಿಡುಗಡೆ ಮಾಡಲಾದ ಈ ಅಂಚೆ ಚೀಟಿಯಲ್ಲಿ ತ್ರಿವರ್ಣ ಬಾವುಟವಿತ್ತು. ಮೇಲೆ ಜೈಹಿಂದ್ ಎಂದು ಬರೆಯಲಾಗಿತ್ತು. ಮೂರೂವರೆ ಅಣೆಯ ಅಂಚೆಚೀಟಿ ಅದಾಗಿತ್ತು

ಹೋರಾಟದುದ್ದಕ್ಕೂ ಹಾರಾಡಿದ ಬಾವುಟ

ಸ್ವಾತಂತ್ರ್ಯ ಹೋರಾಟದುದ್ದಕ್ಕೂ ಧ್ವಜದ ಬಳಕೆ ಇದ್ದಿತ್ತಲ್ಲದೇ, ಹಲವು ವಿನ್ಯಾಸಗಳನ್ನು ಪಡೆದು ದೇಶ ಸ್ವಾತಂತ್ರ್ಯ ಪಡೆಯುವ ಹೊಸ್ತಿಲಿನಲ್ಲಿದ್ದಾಗ 1947ರ ಜುಲೈ 22ರಂದು ಅಶೋಕ ಚಕ್ರವುಳ್ಳ ತ್ರಿವರ್ಣ ಧ್ವಜದ ಅಂತಿಮ ಸ್ವರೂಪ ಪಡೆಯಿತು.

ಸ್ವಾತಂತ್ರ್ಯಕ್ಕಿಂತ 40 ವರ್ಷಗಳ ಮೊದಲು (1907 ಆಗಸ್ಟ್ 2ರಂದು) ಹೋರಾಟಗಾರ್ತಿ ಭಿಕಾಜಿ ಪಟೇಲ್ ಕಾಮಾ ಅವರು ಧ್ವಜಾರೋಹಣ ಮಾಡಿ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುವಂತೆ ಜಗತ್ತಿಗೆ ಮನವಿ ಮಾಡಿದ್ದರು, ದೇಶವನ್ನು ಪ್ರತಿನಿಧಿಸಲು ಧ್ವಜ ಒಂದು ಉತ್ತಮ ಪ್ರತಿನಿಧಿಯ ಪಾತ್ರ ನಿರ್ವಹಿಸಿತು. ಭಿಕಾಜಿ ಕಾಮಾ ಅವರೊಂದಿಗೆ ಶ್ಯಾಮಜಿ ಕೃಷ್ಣ ವರ್ಮಾ ಇದರ ವಿನ್ಯಾಸ ಮಾಡಿದ್ದರು. 1947 ಜುಲೈ 22ರಂದು ಅಂಗೀಕೃತವಾದ ಧ್ವಜದ ವಿನ್ಯಾಸವನ್ನು ಕಲಾವಿದೆ ಸುರಯ್ಯಾ ಬದ್ರುದ್ದೀನ್ ತಯ್ಯಬಿ ಅವರು ಸಲ್ಲಿಸಿದ್ದರು. ಆಗಸ್ಟ್ 14ರ ರಾತ್ರಿ ಸ್ವಾತಂತ್ರ್ಯ ಘೋಷಿಸಿದಾಗ 72 ಮಹಿಳೆಯರಿದ್ದ ತಂಡವು ಹಂಸಾ ಮೆಹತಾ ನೇತೃತ್ವದಲ್ಲಿ ಈ ಧ್ವಜವನ್ನು ಅಂದಿನ ಸಂಸತ್ ನಾಯಕರಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಅವರಿಗೆ ಸಲ್ಲಿಸಿತು. ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಸಂಸತ್ತಿನಲ್ಲಿ ಮೊದಲ ಬಾರಿಗೆ ಧ್ವಜಾರೋಹಣ ಮಾಡಿದರು. ಆಗಸ್ಟ್ 16ರಂದು ಕೆಂಪು ಕೋಟೆಯಲ್ಲೂ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಪ್ರಥಮ ಸಾರ್ವಜನಿಕ ಧ್ವಜಾರೋಹಣವಾಗಿದ್ದು ಇಂಡಿಯಾ ಗೇಟ್ ಹತ್ತಿರದ ಪ್ರಿನ್ಸೆಸ್ ಪಾರ್ಕ್ ಬಳಿ. ಈ ಸಂದರ್ಭದಲ್ಲಿ ಕಾಮನಬಿಲ್ಲು ಕೂಡ ಕಂಡುಬಂದು ಅಚ್ಚರಿ ಮೂಡಿಸಿತು ಎಂದು 'ಫ್ಲ್ಯಾಗ್ ಫೌಂಡೇಶನ್ ಆಫ್ ಇಂಡಿಯಾ' ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ.





ನಿರ್ಭೀತ ಮನೋಭಾವದ ನೆಲವಾಗಲಿ

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸ್ವಾತಂತ್ರ್ಯವನ್ನು ತಂದುಕೊಟ್ಟ ಹೋರಾಟಗಾರರು ಹಾಗೂ ಪ್ರಜಾಪ್ರಭುತ್ವದ ಭದ್ರಬುನಾದಿಯನ್ನು ಹಾಕಿಕೊಟ್ಟ ಸಂವಿಧಾನ ರಚನೆಕಾರರಿಗೆ ನನ್ನ ವಿನಯಪೂರ್ವಕ ಗೌರವವನ್ನು ಸಲ್ಲಿಸುವ ಈ ಸಂದರ್ಭದಲ್ಲಿ, ಕೊಂಚ ಕಳವಳದಿಂದ ಭವಿಷ್ಯವನ್ನು ನೋಡಲಿಚ್ಛಿಸುತ್ತೇನೆ.

ಭಾರತದ ಇತಿಹಾಸದಲ್ಲಿ 75 ವರ್ಷ ಎನ್ನುವುದು ಕೇವಲ ಒಂದು ಅಧ್ಯಾಯವಷ್ಟೆ. ಈ ಅವಧಿಯಲ್ಲಿ ನಾವು ದಾಪುಗಾಲಿಟ್ಟಿದ್ದೇವೆ ಹಾಗೂ ಸಾಕಷ್ಟು ಸಾಧಿಸಿದ್ದೇವೆ. ಆದರೆ ವಿಶ್ರಾಂತಿಗೂ ಮುನ್ನ ಕ್ರಮಿಸಬೇಕಾದ ದಾರಿ ಇನ್ನೂ ಇದೆ.




ಭವಿಷ್ಯದ ಬಗ್ಗೆ ನನ್ನದೊಂದು ಕಲ್ಪನೆಯಿದೆ. ಸರ್ವರಿಗೂ ಸಮಾನ ಅವಕಾಶ ಹಾಗೂ ಗೌರವ, ಧಾರ್ಮಿಕ ಸ್ವಾತಂತ್ರ್ಯ, ಆರ್ಥಿಕ ರಕ್ಷಣೆ ಇರುವ ಶಾಂತಿಯುತ, ಎಲ್ಲರನ್ನೂ ಒಳಗೊಂಡ, ಜಾತ್ಯತೀತ ರಾಷ್ಟ್ರದ ಕನಸು ನನ್ನದು. ದೇಶದ ಮೂಲೆಮೂಲೆಯ ಎಲ್ಲ ಜಾತಿ, ಬಣ್ಣ ಹಾಗೂ ಮತದ ಪುರುಷರು, ಮಹಿಳೆಯರು ಹಾಗೂ ಮಕ್ಕಳು ಜೊತೆಯಾಗಿ ಎದ್ದುನಿಂತು, 'ಇಂದು, ಎಂದೆಂದೂ ನಾನು ಭಾರತೀಯ ಎನ್ನಲು ಹೆಮ್ಮೆ ಇದೆ' ಎನ್ನುವಂಥ ನನ್ನ ತಾಯ್ನಾಡನ್ನು ನಾನು ಕಾಣಬೇಕು. ಗುರುದೇವ ಟ್ಯಾಗೋರರು ಹೇಳುವಂತೆ ನನ್ನ ಈ ರಾಷ್ಟ್ರ ನಿರ್ಭೀತ ಮನೋಭಾವಕ್ಕೆ ಆಸ್ಪದವಿರುವ, ಹೆಮ್ಮೆಯಿಂದ ತಲೆಎತ್ತಿ ನಿಲ್ಲುವ, ಮುಕ್ತಜ್ಞಾನದ ನೆಲವಾಗಬೇಕು. ಅದೇ ನನ್ನ ಪಾಲಿನ ನಿಜವಾದ ಸ್ವಾತಂತ್ರ್ಯ.

ಮಾರ್ಗರೆಟ್ ಆಳ್ವ, ಹಿರಿಯ ರಾಜಕಾರಣಿ, ಕಾರವಾರ

ಮಾಯದ ಗಾಯದಂತೆ ನೋಯುತಿದೆ


ಯಾಕೋ ನನ್ನ ಕನಸಿನ ಭಾರತ ಗಾಯಗಳಿಂದಲೇ ತುಂಬಿದೆ ಅನಿಸುತ್ತದೆ. ಅಪ್ಪ ಜೀತಕ್ಕಿದ್ದ ಒಡೆಯರ ಮನೆಗೆ ಹೋದರೆ ವಿಶೇಷ ಊಟ, ತಿಂಡಿ ಸಿಗುತ್ತಿತ್ತು. ಕೊಟ್ಟಿಗೆಯಲ್ಲಿ, ಹಿತ್ತಲಲ್ಲಿ ಕೂತು, ಉಂಡು ಸವಿಯುತ್ತಿದ್ದೆ. ಸ್ವಾತಂತ್ರ್ಯದ ದಿನ ಕೂಡಾ ಜಗಲಿ ಕೆಳಗೆ ಕೈ ಒಡ್ಡಿ ನಿಂತು ಕೊಟ್ಟಿಗೆ, ಹಿತ್ತಲಲ್ಲಿ ಹಬ್ಬ ಮಾಡುತ್ತಿದ್ದೆ. ಒಡೆಯನ ಮನೆ ಎದುರಿಗಿದ್ದ ಭಟ್ಟರು, ಅಯ್ಯನವರು ಬಾಗಿಲು ದಾಟಿ ಆಚೆ ತಂದು ತಿಂಡಿ, ಪ್ರಸಾದವನ್ನು ಎತ್ತರದಿಂದ ಇಡುತ್ತಿದ್ದರು. ಯಾಕೋ ಎಲ್ಲವೂ ಇಂದು ಮಾಯದ ಗಾಯದಂತೆ ನೋಯುತಿವೆ.

ನಮ್ಮನ್ನು ನಾವೇ ಆಳಿಕೊಳ್ಳುವುದೆಂದರೆ ಸುಖ ಸಮೃದ್ಧಿಯ ಜೀವನ ಅಂದುಕೊಂಡಿದ್ದೆವು. ಊರು, ಕೇರಿ, ನಾಡು, ದೇಶಕ್ಕೆಲ್ಲ ಸುಭಿಕ್ಷ ಎಂದೂ ಅಂದುಕೊಂಡಿದ್ದೆವು. ನಮ್ಮವರದೇ ಸರ್ಕಾರ, ನಮ್ಮವರೇ ನಾಯಕರು, ಸರ್ವರಿಗೂ ಸಮಬಾಳು, ಸಮಪಾಲು ಅಂದುಕೊಂಡಿದ್ದೆವು. ಭೂಮಿ, ಉದ್ಯೋಗ, ಶಿಕ್ಷಣ, ಆರೋಗ್ಯ ಅನ್ನ, ನೀರು ಎಲ್ಲವೂ ಎಲ್ಲರಿಗೂ ಅಂದುಕೊಂಡಿದ್ದೆವು. ಈ ಎಲ್ಲವೂ ಕನಸುಗಳಾಗಿ, ನಿರೀಕ್ಷೆಗಳಾಗಿಯೇ ಉಳಿದು ಹೋದದ್ದು ಯಾವ ಕಾಲಘಟ್ಟದಲ್ಲಿ ಎಂಬ ಅಂದಾಜೇ ಸಿಗುತ್ತಿಲ್ಲ. ಸಮಾಜ, ಸಮುದಾಯಗಳನ್ನು ಬೆಸೆಯುವ, ಕಟ್ಟುವ ಕೆಲಸ ಮಾಡಬೇಕಾದುದು ಇಂದಿನ ತುರ್ತು. 'ಈ ದೇಶದ ಅಧಿಕಾರ ಮತ್ತು ಸಂಪತ್ತು ಪ್ರತಿಯೊಂದು ಜಾತಿ, ಜನಸಂಖ್ಯೆಗೆ ಅನುಗುಣವಾಗಿ ಸಮನಾಗಿ ಹಂಚಿಕೆಯಾಗಬೇಕು' ಎಂಬ ಅಂಬೇಡ್ಕರ್ ವಾದದ ಅನುಷ್ಠಾನವೇ ನನ್ನ ಕನಸಿನ ಭಾರತ.



ಮಹದೇವ ಶಂಕನಪುರ, ಕವಿ, ಚಾಮರಾಜನಗರ

ಬಹುತ್ವದ ಪ್ರಬುದ್ಧ ಭಾರತ ನನ್ನ ಹಂಬಲ



ನನ್ನ ಕನಸಿನ ಭಾರತ ಪ್ರಬುದ್ಧ ಭಾರತ. ಸಂವಿಧಾನದ ಆಶಯದಂತೆ ಎಲ್ಲ ಧರ್ಮ, ಪಂಥ, ಸಮುದಾಯಗಳನ್ನು ಗೌರವಿಸುವ ಮತ್ತು ಘನತೆಯಿಂದ ಕಾಣುವ ಭಾರತ. ಯಾವುದೇ ವ್ಯಕ್ತಿ, ಅಥವಾ ಸಮುದಾಯಗಳನ್ನು ಸಂಕುಚಿತ ದೃಷ್ಟಿಕೋನದಿಂದ ನೋಡುವ ಪ್ರವೃತ್ತಿಗೆ ರಾಷ್ಟ್ರಪ್ರೇಮದ ಹೆಸರು ಕೊಡದಿರುವ ಭಾರತ. ಇತಿಹಾಸದ ಪಾಠಗಳನ್ನು ನಾವು ಮರೆಯದಿರೋಣ. ಜಗತ್ತಿನಲ್ಲಿ ಇದುವರೆಗೆ ನಡೆದಿರುವ ಎರಡು ಮಹಾಯುದ್ಧಗಳು ಮತ್ತು ಈಗಲೂ ಉಕ್ರೇನ್, ಪ್ಯಾಲಿಸ್ತೀನ್‌ನಂತಹ ರಾಷ್ಟ್ರಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಹಿಂದೆ ಅತಿರೇಕದ ರಾಷ್ಟ್ರವಾದ ಕೂಡ ಕಾರಣಕರ್ತವಾಗಿದೆ. ನಮಗೆ ಬೇಕಿರುವುದು ರಾಷ್ಟ್ರಪ್ರೇಮವೇ ಹೊರತು ಅತಿರೇಕದ ರಾಷ್ಟ್ರವಾದವಲ್ಲ.

ನನ್ನ ಕನಸಿನ ಭಾರತ ಹುಸಿ ದೇಶಪ್ರೇಮದ ಅಮಲಿಗೆ ಒಳಗಾಗದ ಸರ್ವರನ್ನು ಒಗ್ಗೂಡಿಸುವ ಭಾರತ. ಜಾತಿ ಧರ್ಮದ ಸಮೂಹ ಸನ್ನಿಗೆ ಸಿಲುಕದೆ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಮಂಚೂಣಿ ಸ್ಥಾನದಲ್ಲಿ ಗುರುತಿಸಲ್ಪಡುವಂತಹ ಆಧುನಿಕ ಭಾರತ. ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಹಸಿವಿನಿಂದ ಮುಕ್ತವಾಗಿರುವಂತಹ ಭಾರತ. ಸಮಾಜದ ಸಾಮರಸ್ಯದ ಎಳೆಗಳು ಇನ್ನಷ್ಟು ಗಟ್ಟಿಗೊಂಡಂತಹ ಭಾರತ. ಎಂದೆಂದಿಗೂ ಬಹುತ್ವವನ್ನು ತನ್ನ ಎದೆಯಲ್ಲಿ ಹಾಗೇ ಕಾಪಿಟ್ಟುಕೊಳ್ಳುವ ಭಾರತ. ಅಂತಹ ಭಾರತಕ್ಕಾಗಿ ಮನಸ್ಸು ಹಂಬಲಿಸುತ್ತಿದೆ. ಆದರೆ, ಸ್ವಾತಂತ್ರ್ಯದ ಅಮೃತದ ಈ ಗಳಿಗೆ ಅಮೃತಕ್ಕಿಂತ ಅದಕ್ಕೆ ವಿರುದ್ಧವಾದುದನ್ನೇ ಎತ್ತಿ ತೋರುತ್ತಿದೆ. ಆ ವಿಷಾದ ಕಾಡುತ್ತಿದೆ.

ಎಂ.ಆರ್. ಸತ್ಯಪ್ರಕಾಶ್, ಸಹ ಪ್ರಾಧ್ಯಾಪಕ, ಶಿವಮೊಗ್ಗ

ಆ ಸೇನಾನಿಯನ್ನು ನೆನೆದು...

ವೆಂಕಟ್ ನಾಗ್ ಕೋಲಾಚಲಂ

ಅಂದು 1885ರ ಡಿಸೆಂಬರ್ 28. ಪ್ರಸ್ತುತ ವಾಣಿಜ್ಯ ನಗರಿ ಎಂದು ಕರೆಯಲ್ಪಡುವ ಮುಂಬೈ ನಗರದಲ್ಲಿ ಭಾರತದ ವಿವಿಧ ಪ್ರದೇಶವನ್ನು ಪ್ರತಿನಿಧಿಸುವ 72 ಜನರು ಒಂದೆಡೆ ಸೇರಿದ್ದರು. ಅನೌಪಚಾರಿಕವಾಗಿ ನಡೆದಿದ್ದ ಆ ಸಭೆ ನಂತರದಲ್ಲಿ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನ'ವಾಗಿ ಗುರುತಿಸಿಕೊಂಡಿತು. ಈ 72 ಜನರ ಪೈಕಿ 'ಕ್ಯಾನರೀಸ್ ಪ್ರದೇಶ'ವನ್ನು(ಇಂದು ಕರ್ನಾಟಕ) ಪ್ರತಿನಿಧಿಸಿ ಕನ್ನಡದಲ್ಲಿ ಸರಾಗವಾಗಿ ಸಂವಹನ ನಡೆಸುವ ಸಾಮರ್ಥ್ಯವಿದ್ದ ವೆಂಕಟ ರಾವ್ ಕೋಲಾಚಲಂ ಸಹ ಒಬ್ಬರಾಗಿದ್ದರು.

ಈ ಅಧಿವೇಶನದಲ್ಲಿ ಬೆಳಗಾವಿಯ ಬಾವುಸಾಹೇಬ್ ಭಾಟೆ ಹಾಗೂ ಬಳ್ಳಾರಿಯ ಸಭಾಪತಿ ಮೊದಲಿಯಾರ್ ಅವರು ಭಾಗವಹಿಸಿದ್ದರೂ ಕ್ರಮವಾಗಿ ಒಬ್ಬರು ಮರಾಠಿ ಭಾಷಿಕರಾದರೆ ಮತ್ತೊಬ್ಬರು ತಮಿಳು ಭಾಷಿಕರಾಗಿದ್ದರು.

ವೆಂಕಟ ರಾವ್ ಕೋಲಾಚಲಂ ಬಳ್ಳಾರಿಯ ಹೆಸರಾಂತ ಕುಟುಂಬಕ್ಕೆ ಸೇರಿದವರು. ಅವರ ತಂದೆ ವಿಜಯನಗರ ಸಾಮ್ರಾಜ್ಯದ ಆನೆಗುಂದಿ ಸಂಸ್ಥಾನದ ದಿವಾನರಾಗಿ ಕಾರ್ಯನಿರ್ವಹಿಸಿದವರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ವೆಂಕಟ ರಾವ್, ಹೆಚ್ಚಾಗಿ ಬಳ್ಳಾರಿ ಮತ್ತು ಮದ್ರಾಸ್ ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಅವರ ಕಾರ್ಯವೈಖರಿಯಿಂದಾಗಿ ಅವರಿಗೆ 'ನ್ಯಾಯವಾದಿ ಕೇಸರಿ' ಎಂಬ ಬಿರುದು ಬಂದಿತ್ತು. ಭಾರತದಲ್ಲಿ ನೂರು ವರ್ಷದ ಆಳ್ವಿಕೆಯ ಬಳಿಕ ಬ್ರಿಟಿಷ್ ಸರ್ಕಾರವು ವೈಸ್‌ರಾಯ್ ಲಾರ್ಡ್ ರಿಪನ್ ಆಡಳಿತದಡಿ, ಸ್ಥಳೀಯ ಆಡಳಿತವನ್ನು (local self-governance) ಎರಡನೇ ಹಂತದ ನಗರಗಳಿಗೆ ವಿಸ್ತರಿಸಲು ನಿರ್ಧರಿಸಿತ್ತು. ಆದರೆ ಈ ಪ್ರಸ್ತಾವದಿಂದ ಆಗ ಬಳ್ಳಾರಿಯನ್ನು ಹೊರಗಿಡಲಾಗಿತ್ತು. ಈ ಅನ್ಯಾಯದಿಂದ ನೊಂದಿದ್ದ ವೆಂಕಟ ರಾವ್, ನೇರವಾಗಿ ರಿಪನ್ ಬಳಿಗೆ ನಿಯೋಗವೊಂದನ್ನು ಕರೆದೊಯ್ದು ಬಳ್ಳಾರಿಯನ್ನು ಪಾಲಿಕೆಯಾಗಿ ಘೋಷಿಸುವ ಪ್ರಸ್ತಾವವನ್ನು ಮುಂದಿಟ್ಟಿದ್ದರು. ಇದರ ಪರಿಣಾಮವಾಗಿ 1884ರಲ್ಲಿ ಬಳ್ಳಾರಿ ಪುರಸಭೆಯನ್ನು ಘೋಷಿಸಲಾಯಿತು. ನಂತರದ ದಿನಗಳಲ್ಲಿ ಮೊದಲ ಕೌನ್ಸಿಲ್ ಚುನಾವಣೆಯೂ ನಡೆಯಿತು. ಬ್ರಿಟಿಷ್ ಆಡಳಿತ ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಪ್ರಶ್ನಿಸಲು ಕೌನ್ಸಿಲ್ ಸಭೆಗಳೇ ಸೂಕ್ತ ವೇದಿಕೆ ಎಂದು ಅರಿತಿದ್ದ ವೆಂಕಟ ರಾವ್, ಕೌನ್ಸಿಲ್ ಸಭೆಗೆ ಆಯ್ಕೆಯಾಗಲು ಜನರನ್ನು ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸುತ್ತಿದ್ದರು. ಈ ನಡೆ ಅವರಿಗೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟಿತ್ತು.

ವೆಂಕಟ ರಾವ್ ಅವರನ್ನು ಬಳ್ಳಾರಿ ಇಂದಿಗೂ ನೆನಪಿಸಿಕೊಳ್ಳುತ್ತಿದೆ ಎಂದರೆ ಅದಕ್ಕೆ ಮತ್ತೊಂದು ಘಟನೆಯ ಹಿನ್ನೆಲೆಯಿದೆ. ಸುಮಾರು 120 ವರ್ಷಗಳ ಹಿಂದೆ, ದಕ್ಷಿಣ ಭಾರತದಲ್ಲಿ ಪ್ಲೇಗ್ ಮಹಾಮಾರಿ ಅಟ್ಟಹಾಸ ಮೆರೆದಿತ್ತು. ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳ ನಡುವೆಯೂ ಇಂದು ಲಕ್ಷಾಂತರ ಜನರನ್ನು ಬಲಿಪಡೆದಿರುವ ಕೋವಿಡ್ ಅಂದಿನ ಪ್ಲೇಗ್ ರಣಕೇಕೆಯನ್ನು ನೆನಪಿಸಿತ್ತು. ಸೂಕ್ತ ವೈದ್ಯಕೀಯ ಸೌಲಭ್ಯವಿಲ್ಲದ ಕಾಲಘಟ್ಟದಲ್ಲಿ, ಅಂದರೆ 1902ರಲ್ಲಿ ಬಳ್ಳಾರಿಗೂ ಪ್ಲೇಗ್ ಕಾಲಿಟ್ಟಿತ್ತು. ಈ ಸಂದರ್ಭದಲ್ಲಿ ಬಳ್ಳಾರಿ ಪುರಸಭೆಯ ಮುಖ್ಯಸ್ಥರಾಗಿ ಅಧಿಕಾರ



ವಹಿಸಿಕೊಂಡಿದ್ದ ವೆಂಕಟ ರಾವ್, ಸ್ವಂತ ಆರೋಗ್ಯವನ್ನೂ ಪಣಕ್ಕಿಟ್ಟು, ತಮ್ಮದೇ ಖರ್ಚಿನಲ್ಲಿ ಪ್ಲೇಗ್ ಮಹಾಮಾರಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದ್ದರು. ಈ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ, ಇಂದಿನ ಅತ್ಯುನ್ನತ ನಾಗರಿಕ ಪ್ರಶಸ್ತಿಗೆ ಸಮನಾದ Right Honorable ಬಿರುದನ್ನು ನೀಡಿತ್ತು.

ಮದ್ರಾಸ್ ಸಂಸ್ಥಾನ ಎಂಬ ಹೆಸರಿನಲ್ಲಿ ದಕ್ಷಿಣ ಭಾರತದ ಬಹುತೇಕ ಪ್ರದೇಶವು ಬ್ರಿಟಿಷ್ ಆಡಳಿತದಡಿಯಿತ್ತು. ಮದ್ರಾಸ್ ಸಂಸ್ಥಾನದ ಮೇಲ್ಮನೆಯಲ್ಲಿ 8ರಿಂದ 12 ಸೀಟುಗಳು ಭಾರತೀಯರಿಗೆ ಮೀಸಲಿದ್ದವು. ಆದರೆ, ಅವರು ಚರ್ಚೆಗಳಲ್ಲಿ ಭಾಗವಹಿಸಬಹುದಿತ್ತೇ ಹೊರತು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಗಳಿಂದ ದೂರ ಇರಬೇಕಿತ್ತು. 1903ರಲ್ಲಿ ಪೂರ್ವ ಜಿಲ್ಲೆಗಳಿಗೆ ಮೇಲ್ಮನೆಯಲ್ಲಿ ಒಂದು ಸ್ಥಾನವನ್ನು ನೀಡಲಾಯಿತು. ಅಂದು ಪೂರ್ವ ಜಿಲ್ಲೆಯ ವ್ಯಾಪ್ತಿಯಡಿ ಇಂದಿನ ಕರ್ನಾಟಕದ ಕೆಲ ಪ್ರದೇಶಗಳಲ್ಲದೆ, ಸಂಪೂರ್ಣ ಆಂಧ್ರಪ್ರದೇಶವೂ ಇತ್ತು. ಈ ಸ್ಥಾನಕ್ಕೆ ಕಾಕಿನಾಡದ ಕೃತಿವೇಂಟಿ ಪೆರ್ರಾಜು ಅವರ ವಿರುದ್ಧ ಸ್ಪರ್ಧಿಸಿ ಗೆದ್ದ ವೆಂಕಟ ರಾವ್ 1904ರವರೆಗೆ ಆ ಸ್ಥಾನದಲ್ಲಿ ಮುಂದುವರಿದಿದ್ದರು.

ಭಾರತದಲ್ಲಿರುವ ಬ್ರಿಟಿಷ್ ಅಧಿಕಾರಿಗಳು, ಲಂಡನ್‌ನಲ್ಲಿ ಕುಳಿತು ಆದೇಶ ನೀಡುತ್ತಿರುವವರ ಕೈಗೊಂಬೆಗಳಷ್ಟೇ ಎಂದು ಅರಿತ ವೆಂಕಟ ರಾವ್, ತಮ್ಮ ಗಮನವನ್ನು ಲಂಡನ್‌ನತ್ತ ಹೊರಳಿಸಿದ್ದರು. ಅಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬ್ರಿಟಿಷ್ ಸಮಿತಿ ಲಂಡನ್‌ನಲ್ಲಿ ಕಚೇರಿ ಹೊಂದಿತ್ತು. ವೆಂಕಟ ರಾವ್ ಈ ಸಮಿತಿಯ ಪೋಷಕರಾದರು. ಭಾರತದಲ್ಲಿ ಆಡಳಿತದಲ್ಲಿರುವ ಬ್ರಿಟಿಷ್ ಸರ್ಕಾರದ ಅಧಿಕಾರಿಗಳ ದೌರ್ಜನ್ಯದ ಕುರಿತು ಬ್ರಿಟಿಷ್ ಪ್ರಜೆಗಳಲ್ಲಿ ಜಾಗೃತಿ ಮೂಡಿಸುವುದು ಈ ಸಮಿತಿಯ ಮೂಲಕಾರ್ಯವಾಗಿತ್ತು. ಈ ಉದ್ದೇಶದಿಂದ ಹಲವು ಬಾರಿ ಲಂಡನ್‌ಗೆ ವೆಂಕಟ ರಾವ್ ತೆರಳಿದ್ದರು.

ಬ್ರಿಟಿಷ್ ಸಂಸತ್‌ಗೆ ದಕ್ಷಿಣ ಲ್ಯಾಂಬೆತ್ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ದಾದಾಭಾಯಿ ನವರೋಜಿ ಅವರನ್ನು ಬೆಂಬಲಿಸಿ, 1905ರಲ್ಲಿ ಕಾಶಿಯಲ್ಲಿ ನಡೆದ ಕಾಂಗ್ರೆಸ್‌ನ 21ನೇ ಅಧಿವೇಶನದಲ್ಲಿ ನಿರ್ಣಯದ ಪ್ರಸ್ತಾಪವನ್ನು ವೆಂಕಟ ರಾವ್ ಇರಿಸಿದ್ದರು. 1907ರಲ್ಲಿ ಕಾಂಗ್ರೆಸ್‌ನಲ್ಲಿ ಕಚ್ಚಾಟ, ಒಳಜಗಳ ಆರಂಭವಾದಾಗ ವಿಶ್ವರಾಷ್ಟ್ರೀಯತೆ ಮನೋಭಾವವಿದ್ದ ವೆಂಕಟ ರಾವ್ ಕಾಂಗ್ರೆಸ್‌ನಿಂದ ಕ್ರಮೇಣವಾಗಿ ಅಂತರ ಕಾಯ್ದುಕೊಂಡರು. ಜೈಲಿನೊಳಗಡೆ ಬಾಲಗಂಗಾಧರ ತಿಲಕರನ್ನು ಬ್ರಿಟಿಷರು ಕ್ರೂರವಾಗಿ ನಡೆಸಿಕೊಂಡ ರೀತಿಯನ್ನು ಖಂಡಿಸಿ, 1916ರಲ್ಲಿ Right Honorable ಬಿರುದನ್ನು ವೆಂಕಟ ರಾವ್ ಹಿಂದಿರುಗಿಸಿದರು.

'ನಿರ್ಭೀತ'–ಈ ಪದದಿಂದಲೇ ವೆಂಕಟ ರಾವ್ ಗುರುತಿಸಿಕೊಂಡಿದ್ದರು. ಇದಕ್ಕೊಂದು ಉದಾಹರಣೆ ಇಲ್ಲಿದೆ. 'ಕ್ಷುಲ್ಲಕ ಪ್ರಕರಣಗಳಿಗೆ ನಿಮ್ಮ ಸಮಯವನ್ನೇಕೆ ವ್ಯರ್ಥ ಮಾಡುವಿರಿ' ಎಂದೊಮ್ಮೆ ನ್ಯಾಯಾಧೀಶರಾಗಿದ್ದ ಡಬ್ಲ್ಯು.ಡಬ್ಲ್ಯು. ಫಿಲಿಪ್ಸ್, ವೆಂಕಟ ರಾವ್ ಅವರನ್ನು ಕೇಳಿದ್ದರಂತೆ. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಅವರು, 'ನಿಮಗೆ ದೊರೆಯುವುದು ತಿಂಗಳ ಲೆಕ್ಕದ ವೇತನ. ನನಗೆ ಪ್ರತೀ ನಿಮಿಷದ ಲೆಕ್ಕದಲ್ಲಿ ಸಂಭಾವನೆ ದೊರೆಯುತ್ತದೆ. ಹೀಗಾಗಿ ನಿಮ್ಮ ಸಮಯಕ್ಕಿಂತ ನನ್ನ ಸಮಯವೇ ಅತ್ಯಮೂಲ್ಯ' ಎಂದಿದ್ದರಂತೆ.

ಸಮಾಜ ಸುಧಾರಕರಾಗಿದ್ದ ವೆಂಕಟ ರಾವ್ ಅಧ್ಯಕ್ಷತೆಯಲ್ಲೇ 1904ರಲ್ಲಿ ಮದ್ರಾಸ್‌ನಲ್ಲಿ ಭಾರತೀಯ ಸಾಮಾಜಿಕ ಸಮ್ಮೇಳನ ಆಯೋಜಿಸಲ್ಪಟ್ಟಿತ್ತು. ಮಾಧ್ಯಮಗಳಲ್ಲಿ ಪ್ರಕಟಗೊಂಡ ವರದಿಗಳ ಅನ್ವಯ ಈ ಸಮ್ಮೇಳನದಲ್ಲಿ ಭಾಗಹಿಸಿದ್ದ ಜನರ ಸಂಖ್ಯೆ ಕಾಂಗ್ರೆಸ್ ಅಧಿವೇಶನಕ್ಕಿಂತಲೂ ಅಧಿಕವಾಗಿತ್ತು. ಸಮುದ್ರಯಾನ ಮಾಡಿದ ಕಾರಣಕ್ಕಾಗಿ ಧರ್ಮದಿಂದಲೇ ಹೊರಹಾಕುವ ಸಂಪ್ರದಾಯವಾದಿ ಸಮುದಾಯಗಳ ಮನೋಧರ್ಮವನ್ನು ತೀವ್ರವಾಗಿ ಪ್ರಶ್ನಿಸಿದ ಈ ಸಮಾವೇಶ, ಆ ಪರಿಪಾಟವನ್ನು ಕೊನೆಗಾಣಿಸುವ ಆಂದೋಲನಕ್ಕೂ ನಾಂದಿ ಹಾಡಿತು. ವೆಂಕಟ್ ರಾವ್ ಅವರಂತೂ ಆ ಪರಿಪಾಟವನ್ನು ತೀವ್ರವಾಗಿ ನಿಕಷಕ್ಕೆ ಒಡ್ಡಿದ್ದರು.

ವೆಂಕಟ ರಾವ್ ಅವರ ಜೊತೆಗೆ ರಾವ್ ಬಹದ್ದೂರ್ ಕನೇಕಲ್ ನೆಟ್ಟಕಲ್ಲಪ್ಪ, ಸಭಾಪತಿ ಮೊದಲಿಯಾರ್ ಅವರೂ ಬಳ್ಳಾರಿ ಪುರಸಭೆಯ ಮೊದಲ ಕೌನ್ಸಿಲ್‌ಗೆ ಆಯ್ಕೆಯಾದವರಲ್ಲಿ ಸೇರಿದ್ದರು. ವೆಂಕಟ ರಾವ್ 'ಸುಮನೋರಮ ಸಭಾ' ಹೆಸರಿನ ನಾಟಕ ಕಂಪನಿಯ ಮಾಲೀಕರಾಗಿದ್ದರು. ಇದರ ವ್ಯವಹಾರವನ್ನು ಅವರ ತಮ್ಮ ನಿರ್ವಹಿಸುತ್ತಿದ್ದರು. 1909ರಲ್ಲಿ ಬೆಂಗಳೂರಿನಲ್ಲಿ ಈ ಕಂಪನಿ ನಾಟಕ ಪ್ರದರ್ಶನ ಏರ್ಪಡಿಸಿದ್ದ ಸಂದರ್ಭದಲ್ಲಿ ಕನೇಕಲ್ ನೆಟ್ಟಕಲ್ಲಪ್ಪ ಇದರ ಸಂಯೋಜಕರಾಗಿದ್ದರು. ಹೀಗೆ ವೆಂಕಟ ರಾವ್, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತಮ್ಮ ನಾಡಿನ ಜನರ ಏಳ್ಗೆಗಾಗಿ ಅವಿರತ ಶ್ರಮ ಹಾಕಿದ್ದರು. ಅವರನ್ನು ನೆನೆಯುವ ಮೂಲಕ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಪ್ರತಿಯೊಬ್ಬ ಸೇನಾನಿಯನ್ನೂ ಸ್ವಾತಂತ್ರ್ಯದ ಈ ಅಮೃತಗಳಿಗೆಯ ಸಂಭ್ರಮದಲ್ಲಿ ನಾವು ಗೌರವದಿಂದ ನೆನೆಯೋಣ.

ಸ್ವಾತಂತ್ರ್ಯ ಎಂದರೇನು?

8ನೇ ಪುಟದಿಂದ..

ಅದರ ಬದಲು ಶಿಕ್ಷಣದ ರೂಪದಲ್ಲಿ, ಭಾಷೆ ಮತ್ತು ಪಠ್ಯವನ್ನು ಅದರಲ್ಲಿ ಅಳವಡಿಸಿಕೊಳ್ಳುವ ರೂಪದಲ್ಲಿ ಬೇರೆಯದೇ ಆದ ನವಿರಾದ ಹಾದಿಯನ್ನು ಅವರು ಕಂಡುಕೊಂಡಿದ್ದರು.

1922ರಲ್ಲಿ ನೀವೊಂದು ವೇಳೆ ರಾಜಕೀಯವಾಗಿ ಕ್ರಿಯಾಶೀಲರಾಗಿದ್ದರೆ ಆಗಮಾತ್ರ ನಿಮ್ಮ ಪರಿಸ್ಥಿತಿ ಭಿನ್ನವಾಗಿರುತ್ತಿತ್ತು. ಆಗ ನೀವು ಬ್ರಿಟಿಷ್ ಸರ್ಕಾರದ ನೀತಿ, ನಿಲುವುಗಳನ್ನು ಟೀಕಿಸುವುದನ್ನು ಅಥವಾ ಅವರ ಕ್ರಮಗಳನ್ನು ವಿರೋಧಿಸಿ ನಡೆಯುತ್ತಿದ್ದ ಪ್ರತಿಭಟನೆಗಳಲ್ಲಿ ಭಾಗವಹಿಸುವುದನ್ನು ಬಿಡುತ್ತಿರಲಿಲ್ಲ. ಹೀಗಾಗಿ, ತಮ್ಮ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ ಪ್ರಜೆಗಳನ್ನು ಬಂಧಿಸಲು ಮತ್ತು ಅವರಿಗೆ ಕಿರುಕುಳ ನೀಡಲು ಬ್ರಿಟಿಷರು 'ದೇಶದ್ರೋಹ ಕಾನೂನು' ರೂಪಿಸಿದ್ದರು. ನಿತ್ಯದ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದ ಸಾಮಾನ್ಯ ಪ್ರಜೆಗಳಿಗೆ ಈ ಕಾನೂನಿಂದ ಯಾವುದೇ ತೊಂದರೆ ಇರಲಿಲ್ಲ. ಆದರೆ, ಲಕ್ಷಾಂತರ ಸಾಮಾನ್ಯ ಜನ ಮತ್ತು ಮುಖಂಡರ ನಿರಂತರ ಪ್ರತಿಭಟನೆ ಮತ್ತು ಆಂದೋಲನದ ಫಲಶ್ರುತಿಯಾಗಿ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು.

ನಾವೀಗ 2022ರಲ್ಲಿದ್ದೇವೆ. ಸ್ವಾತಂತ್ರ್ಯ ಸಿಕ್ಕು 75 ವರ್ಷಗಳಲ್ಲಿ ಪರಿಸ್ಥಿತಿ ಏನಾದರೂ ಬದಲಾಗಿದೆಯೇ? 1922ರಲ್ಲಿ ಇದ್ದಂತೆಯೇ ಈಗಲೂ ಸರ್ಕಾರದ ನೀತಿ, ನಿಲುವುಗಳನ್ನು ಟೀಕಿಸುವುದು ಅಪಾಯಕಾರಿ ಎಂಬ ವಾತಾವರಣವೇ ಇಲ್ಲವೇ? 1922ರಲ್ಲಿ ದೆಹಲಿಯಲ್ಲಿದ್ದ ಬ್ರಿಟಿಷ್ ಆಡಳಿತಗಾರರನ್ನು ಕಾಣುವುದು ಹೇಗೆ ಸಾಧ್ಯವಿರಲಿಲ್ಲವೋ ಹಾಗೆಯೇ ಈಗಲೂ ದೆಹಲಿಯಲ್ಲಿ ಕುಳಿತು ನಮ್ಮನ್ನು ಆಳುತ್ತಿರುವವರ ಸಮೀಪ ಹೋಗುವುದು ಕೂಡ ಅಸಾಧ್ಯವೇ ಆಗಿದೆ.

ಸಮಾಜದ ಎಲ್ಲ ಹಂತಗಳಲ್ಲಿ, ಪ್ರಾಯಶಃ 1922ಕ್ಕಿಂತ ಹೆಚ್ಚಾಗಿ, 2022ರಲ್ಲಿ ಭಯ ಆವರಿಸಿದೆ. ಪೋಷಕರಲ್ಲಿ, ಶಾಲೆಗಳಲ್ಲಿ, ಉದ್ಯೋಗದ ಸ್ಥಳಗಳಲ್ಲಿ, ಸಾರ್ವಜನಿಕ ತಾಣಗಳಲ್ಲಿ ಭಯದ ಉಪಸ್ಥಿತಿಯನ್ನು ಕಾಣಬಹುದಾಗಿದೆ. ನಮ್ಮ ಶಾಲಾ–ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು 'ರಾಜಕೀಯ'ಕ್ಕೆ ಸಂಬಂಧಿಸಿದ್ದನ್ನು ಮಾತನಾಡಲು ಭೀತಿಯಿಂದ ಹಿಂಜರಿಯುತ್ತಿದ್ದಾರೆ. ಹವಾಮಾನ ಬದಲಾವಣೆಗೆ ಕಾರಣವಾದ ಅಂಶಗಳ ವಿರುದ್ಧ ಪ್ರತಿಭಟಿಸಲು ಸಹ ಅವರು ಹೆದರುತ್ತಿದ್ದಾರೆ. ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಬೋಧಕರು ಮೂಕರಾಗಿ ದೀರ್ಘ ಸಮಯವೇ ಆಗಿದೆ. ಆದರೆ, ಅವರೆಂದಿಗೂ 2022ರಂತೆ ಕಡು ಮೌನಕ್ಕೆ ಶರಣಾಗಿರಲಿಲ್ಲ. ಸರ್ಕಾರ ಬಯಸದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಏನನ್ನೂ ಬರೆಯಬಾರದು ಎಂದು ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಕಟ್ಟುನಿಟ್ಟಿನ ಸೂಚನೆ ಕೊಡಲಾಗಿದೆ. ಯಾವುದನ್ನು ವರದಿ ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ವಿಷಯವಾಗಿ ಮಾಧ್ಯಮವೂ ಭೀತಿಯಿಂದ ಯೋಚಿಸುವಂತಹ ವಾತಾವರಣ ನಿರ್ಮಾಣವಾಗಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ನಾನು ಭೇಟಿಯಾದ ಪ್ರತಿಯೊಬ್ಬ ಮುಸ್ಲಿಮನೂ – ಆತ ಕೂಡ ನನ್ನ, ನಿಮ್ಮಂತಹ ಸಾಮಾನ್ಯ ಪ್ರಜೆ– ನಿತ್ಯದ ಜೀವನವನ್ನು ತಾನು ಹೇಗೆ ಭೀತಿಯಿಂದ ಕಳೆಯುವಂತಾಗಿದೆ ಎಂಬ ವಿಷಯವಾಗಿಯೇ ಮಾತನಾಡುತ್ತಿದ್ದಾನೆ. ಭಾರತದಲ್ಲಿ ಈಗ ತಮಗೂ ತಮ್ಮ ಮಕ್ಕಳಿಗೂ ಏನು ಕಾದಿದೆಯೋ ಎಂಬ ಭೀತಿ ಆ ಸಮುದಾಯವನ್ನು ಆವರಿಸಿದೆ.

ಸರ್ಕಾರದ ವಿರುದ್ಧದ ಟೀಕೆಗೆ 1922ರಲ್ಲಿ ಇದ್ದುದಕ್ಕಿಂತಲೂ ಈಗಿನ ಪ್ರತೀಕಾರದ ಕ್ರಮ ಕ್ರೂರವಾಗಿದೆಯೇ? 2022ರ ಭಯದ ವಾತಾವರಣ ಇನ್ನೂ ತೀವ್ರವಾಗಿದೆಯೇ? ಪ್ರಜೆಗಳನ್ನು ಬಂಧಿಸುವ ದೆಹಲಿ ಇಲ್ಲವೆ ರಾಜ್ಯದ ರಾಜಧಾನಿಗಳಲ್ಲಿರುವ ಸರ್ಕಾರಗಳು, 1922ರಲ್ಲಿದ್ದಂತೆ 'ವಿದೇಶಿ' ಸರ್ಕಾರ ಅಲ್ಲವೆನ್ನುವುದು ಈ ಭೀತಿ ಇನ್ನೂ ಹೆಚ್ಚಲು ಕಾರಣವೇ? ಸರ್ಕಾರದ ಜತೆಗೆ ಪಕ್ಷದ ಸದಸ್ಯರ ರೂಪದ 'ನಾಗರಿಕ ಸೇನೆ' ಆಗಿನ ಬ್ರಿಟಿಷ್ ಸರ್ಕಾರಕ್ಕಿಂತಲೂ ಕ್ರೂರವಾಗಿ ನಡೆದುಕೊಳ್ಳುವ ರೀತಿಯೇ ಕಳವಳ ಮೂಡಿಸಿದೆಯೇ?

ಹಾಗಾದರೆ, ಎಲ್ಲಿಗೆ ಬಂತು, ಯಾರಿಗೆ ಬಂತು 75ರ ಸ್ವಾತಂತ್ರ್ಯ?

ಲೇಖಕ: ಚಿಂತಕ, ಮಕ್ಕಳಿಗಾಗಿ ತತ್ವಚಿಂತನೆ ಕೃತಿಯ ಲೇಖಕ. ಅವರ The Social Life of Democracy ಪ್ರಕಟಣೆಯ ಹಂತದಲ್ಲಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಹೊಂದಿಸಿರಿ ಮೇಲಿನ ಚಿತ್ರಗಳಿಗೂ ಪಕ್ಕದಲ್ಲಿರುವ ಹೆಸರುಗಳಿಗೂ ಹೊಂದಿಸಿ

ಗಣಿತದಲ್ಲಿ ಗರ್ಭಿ ಗಮ್ಮತ್ತು

ಟ್ವೆಂಟಿ – 20 ಮ್ಯಾಚ್

A ಈ ಗುಣಾಕಾರದ ಉತ್ತರದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಖ್ಯೆಯನ್ನೇ ಕಾಣಬಹುದು

84175
X 9
75, 75, 75

B. ಈ ಗುಣಾಕಾರವು ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣನ ಜನ್ಮ ದಿನಾಂಕವನ್ನು ಕೊಡುತ್ತದೆ.

395449
X 4
15-8-1796

ಚೊಂಚ ತಂತ್ರ

1 ಭಾರತದ ತ್ರಿವರ್ಣ ಧ್ವಜದ ಅಳತೆಯ ಅನುಪಾತ 2; 3. ಇದು 'ವಂದೇ ಮಾತರಂ' ಘೋಷಣೆಯ ಅಕ್ಷರಗಳಲ್ಲೇ ಇದೆ. ಹಾಗಾಗಿ ಇದನ್ನು ಸುಲಭವಾಗಿ ನೆನಪಿಡಬಹುದು.

2 ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ಚೆನ್ನಮ್ಮನ ತಂದೆ ತಾಯಿಯ ಹೆಸರನ್ನು 'ಧೂಪ' ಪದದ ಮೂಲಕ ಸುಲಭವಾಗಿ ನೆನಪಿಡಬಹುದು.

ಧೂ = ಧೂಳಪ್ಪ

ಪ = ಪದ್ಮಾವತಿ

ಹೆಸರುಗಳು

- A ದಾದಾಬಾಯಿ ನವರೋಜಿ
- B ಮೊರಾರ್ಜಿ ದೇಸಾಯಿ
- C ಲಾಲ್ ಬಹದ್ದೂರ್ ಶಾಸ್ತ್ರಿ
- D ಸರ್ದಾರ್ ವಲ್ಲಭಭಾಯ್ ಪಟೇಲ್
- E ಝಾಕೀರ್ ಹುಸೇನ್
- F ಲಾಲಾ ಲಜಪತ್‌ರಾಯ್
- G ಬಾಲ ಗಂಗಾಧರ ತಿಲಕ್
- H ಚಿತ್ತರಂಜನ್ ದಾಸ್
- I ರಾಜಗೋಪಾಲಾಚಾರಿ
- J ಗೋಪಾಲಕೃಷ್ಣ ಗೋಖಲೆ
- K ಡಾ.ಬಿ.ಆರ್. ಅಂಬೇಡ್ಕರ್
- L ಎಸ್. ರಾಧಾಕೃಷ್ಣನ್
- M ರವೀಂದ್ರನಾಥ್ ಟ್ಯಾಗೋರ್
- N ಝಾನ್ಸಿರಾಣಿ ಲಕ್ಷ್ಮೀಬಾಯಿ
- O ಕಿತ್ತೂರು ಚೆನ್ನಮ್ಮ
- P ರಾಜಾರಾಮ್ ಮೋಹನರಾಯ್
- Q ಭಗತ್ ಸಿಂಗ್
- R ರಾಜೇಂದ್ರ ಪ್ರಸಾದ್
- S ಚಂದ್ರಶೇಖರ್ ಆಜಾದ್
- T ಸುಭಾಷ್‌ಚಂದ್ರ ಬೋಸ್

ಡಣ್ಣ ಚುಕ್ಕ ಕೇಶ್ರಪ್ಪ ಕಥೆಯ

ಕ್ವಿಟ್ ಇಂಡಿಯಾ ಚಳವಳಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ನಮ್ಮ ಸ್ವತಂತ್ರ ದೇಶದ ತ್ರಿವರ್ಣ ಧ್ವಜ ಇಂದು ಹಾರಾಡುತ್ತಿರುವುದರ ಹಿಂದೆ ಹಲವಾರು ಹೋರಾಟ, ಚಳವಳಿಗಳ ರೋಚಕ ಕಥನಗಳಿವೆ. ಅಂಥ ಹಲವಾರು ಚಳವಳಿಗಳ ಪೈಕಿ ಮಹಾತ್ಮ ಗಾಂಧಿ ನೇತೃತ್ವದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯೂ ಒಂದು



ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ 1942ರಲ್ಲಿ ಬ್ರಿಟಿಷರ ವಿರುದ್ಧ ಈ ಚಳವಳಿ ನಡೆಯಿತು. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬುದು ಚಳವಳಿಯ ಘೋಷವಾಕ್ಯವಾಗಿತ್ತು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದೇ ಇದರ ಗುರಿಯಾಗಿತ್ತು



ಈ ಚಳವಳಿಗಾಗಿ ಹೋರಾಟಗಾರರು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸಿ ಜನರನ್ನು ಒಗ್ಗೂಡಿಸಿದರು. ಸತಾರಾ, ತಾಲ್‌ಚೇರ್ ಮತ್ತು ಮಿಡ್ನಾಪುರಗಳಲ್ಲಿ ಈ ಚಳವಳಿಯು ತೀವ್ರತೆಯನ್ನು ಪಡೆಯಿತು. ಅಪಾರ ಜನ ಬೆಂಬಲವೂ ಸಿಕ್ಕಿತು. ಎಲ್ಲೆಡೆ ಬ್ರಿಟಿಷರ ವಿರುದ್ಧ ಘೋಷಣೆಗಳು ಮೊಳಗಿದವು



ಮುಂಬೈನ ಗೊವಳಿ ಮೈದಾನದಲ್ಲಿ (ಆಗಸ್ಟ್ ಕ್ರಾಂತಿ ಮೈದಾನ) ಆಗಸ್ಟ್ 8, 1942ರಂದು 'ಮಾಡು ಇಲ್ಲವೆ ಮಡಿ' ಘೋಷವಾಕ್ಯದೊಂದಿಗೆ ಚಳವಳಿ ಆರಂಭವಾಯಿತು. ಈ ವೇಳೆ ನೂರಾರು ನಾಯಕರು ಬಂಧನಕ್ಕೊಳಗಾದರು. ಆದರೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಇದು ಮಹತ್ವದ ಮೈಲಿಗಲ್ಲಾಯಿತು

ಕ್ವಿಜ್ ಇಂಡಿಯಾ

1 ಭಾರತದಲ್ಲಿ 9ನೇ ಏಷ್ಯಾಡ್ ಕ್ರೀಡೆ ನಡೆದ ವರ್ಷ ಯಾವುದು?

2 ಭಾರತದ ಸಂವಿಧಾನ ರಚಿಸಲು ತೆಗೆದುಕೊಂಡ ಸಮಯ ಎಷ್ಟು?

3 ಭಾರತದ ರಾಷ್ಟ್ರಗೀತೆ ಬರೆದ ರವೀಂದ್ರನಾಥ್ ಟ್ಯಾಗೋರರು ಯಾವ ರಾಜ್ಯದವರು?

4 ಭಾರತದ ರಾಷ್ಟ್ರಪತಿಯಾಗಲು ಕನಿಷ್ಠ ವಯಸ್ಸು ಎಷ್ಟು?

5 ಭಾರತದ ಕಾಂಗ್ರೆಸ್ ಪಕ್ಷದ ಪ್ರಥಮ ಅಧ್ಯಕ್ಷರು ಯಾರು?

6 ಭಾರತದ ರಾಷ್ಟ್ರಪತಿಯ ಆಳ್ವಿಕೆ ಅವಧಿ ಎಷ್ಟು?

7 ಭಾರತೀಯ ರಿಸರ್ವ್ ಬ್ಯಾಂಕ್ ಯಾವಾಗ ಸ್ಥಾಪನೆಯಾಯಿತು?

8 ಭಾರತದ ಪ್ರಜೆಯ ಮೊತ್ತ ಮೊದಲ ಹಕ್ಕು ಯಾವುದು?

9 ಭಾರತರತ್ನ ಪ್ರಶಸ್ತಿ ರವೀಂದ್ರನಾಥ ಟ್ಯಾಗೋರರಿಗೆ ಯಾವಾಗ ಸಿಕ್ಕಿತು?

10 ಭಾರತದಲ್ಲಿ ಅತಿ ಹೆಚ್ಚು ಕಲ್ಲಿದ್ದಲು ಸಿಗುವ ರಾಜ್ಯ ಯಾವುದು?


ಕಳೆದ ವಾರದ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್

1–H 2 -J 3-M 4-D 5-K 6-O 7-N 8-T 9-F 10-G H-R 12-B 13-Q 14-I 15-S 16-P 17-L 18-E 19-A 20-C

ಚಿಕ್ಕಲೆಕ್ಕ: 74 ಏಕೆಂದರೆ ತ್ರಿಕೋನದ ಭುಜದ ಮೇಲಿನ ಮೂರು ಸಂಖ್ಯೆಗಳ ಬೇರಿಜಿನ ತಿರುವು ಮುರುವು ಸಂಖ್ಯೆ ತ್ರಿಕೋನ ಒಳಗಿನ ಸಂಖ್ಯೆಯಾಗಿದೆ.

ಹೊಂದಿಸು ಆನಂದಿಸು



ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್: ನಿತಿನ್, ಭಾರ್ಗವ್ ಮಿಂಚು

ಪ್ಯಾಂಥರ್ಸ್‌ ಮೇಲೆ ಲಯನ್ಸ್ ಸವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿನ್ನಡೆಯಿಂದ ಚೇತರಿಸಿಕೊಂಡ ಬೆಂಗಳೂರು ಲಯನ್ಸ್ ತಂಡವು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಪಂದ್ಯದಲ್ಲಿ ಮೈಸೂರು ಪ್ಯಾಂಥರ್ಸ್‌ ತಂಡವನ್ನು ಮಣಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಿ ಗುಂಪಿನ ಸೆಣಸಾಟದಲ್ಲಿ ಶನಿವಾರ ಬೆಂಗಳೂರು ಲಯನ್ಸ್ 7–2ರಿಂದ ಗೆದ್ದಿತು.

ಮಹಿಳಾ ಸಿಂಗಲ್ಸ್‌ನ ಟ್ರಂಪ್ ಪಂದ್ಯದಲ್ಲಿ ಪ್ಯಾಂಥರ್ಸ್‌ನ ತಾನ್ಯಾ ಹೇಮಂತ್ 15–7, 15–3ರಿಂದ ಜನನಿ ಅನಂತ್ ಕುಮಾರ್ ಎದುರು ಗೆದ್ದರು. ಬಳಿಕ ಪುರುಷರ ಡಬಲ್ಸ್‌ನಲ್ಲಿ ಲಯನ್ಸ್‌ನ ಸಂಜೀತ್ ಎಸ್.– ವೈಭವ್ ಶರತ್ 13-15, 15-14, 15-6ರಿಂದ ರಾಹುಲ್ ಮತ್ತು ರೋಹಿತ್ ಮರಿಸ್ವಾಮಿ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಲಯನ್ಸ್‌ನ ಎಸ್. ಭಾರ್ಗವ್ 15-10, 15-9ರಿಂದ ತರುಣ್ ಮೊರಬ್ ಎದುರು ಗೆದ್ದರೆ, ಮಿಶ್ರ ಡಬಲ್ಸ್‌ನಲ್ಲಿ ನಿತಿನ್ ಎಚ್.ವಿ.– ಜನನಿ ಅನಂತ್‌ಕುಮಾರ್13-15, 15-10, 15-7ರಿಂದ ಕಿರಣ್‌ಕುಮಾರ್ ಜಿ.– ತಾನ್ಯಾ ಹೇಮಂತ್ ಅವರಿಗೆ ಸೋಲುಣಿಸಿದರು. ಕೊನೆಯ ಪಂದ್ಯದಲ್ಲಿ ವೈಭವ್ ಶ್ರೀನಾಥ್, ನಿತಿನ್ ಮತ್ತು ಸಂಜೀತ್ 22-20ರಿಂದ ರೋಹಿತ್, ಬಿ.ಎಚ್.ರಾಹುಲ್ ಮತ್ತು ಕಿರಣ್‌ಕುಮಾರ್ ಜಿ. ಎದುರು ಗೆದ್ದರು.

ಮತ್ತೊಂದು ಪಂದ್ಯದಲ್ಲಿ ಕೆಜಿಎಫ್ ವೂಲ್ವ್ಸ್ 6–2ರಿಂದ ಮಲ್ನಾಡ್ ಫಾಲ್ಕನ್ಸ್ ಎದುರು ಗೆದ್ದಿತು.

ಇಂದಿನ ಪಂದ್ಯಗಳು	
ಕೊಡಗು ಟೈಗರ್ಸ್– ಬಂಡೀಪುರ ಟಸ್ಕರ್ಸ್	
ಆರಂಭ	ಮಧ್ಯಾಹ್ನ 3
ಮಂಡ್ಯ ಬುಲ್ಸ್– ಮಂಗಳೂರು ಶಾರ್ಕ್ಸ್	
ಆರಂಭ	ಸಂಜೆ 6
ನೇರ ಪ್ರಸಾರ: ಯೂರೊ ಸ್ಪೋರ್ಟ್	



ಬೆಂಗಳೂರು ಲಯನ್ಸ್ ತಂಡದ ಭಾರ್ಗವ್ ಎಸ್.– ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಕೌಶಿಕ್ ಬಿರುಗಾಳಿ ಬೌಲಿಂಗ್: ಶಿವಮೊಗ್ಗಕ್ಕೆ ನಿರಾಸೆ

ತಾಹ ಅರ್ಧಶತಕ: ಹುಬ್ಬಳ್ಳಿಗೆ ಜಯ

● ಮೋಹನ್ ಕುಮಾರ ಸಿ.

ಮೈಸೂರು: ಅಮೋಘ ಅರ್ಧಶತಕ ಸಿಡಿಸಿದ ಮೊಹಮ್ಮದ್ ತಾಹ ಬ್ಯಾಟಿಂಗ್ ಬಲದಿಂದ ಹುಬ್ಬಳ್ಳಿ ಟೈಗರ್ಸ್‌ ಇಲ್ಲಿ ನಡೆಯುತ್ತಿರುವ ಮಹಾರಾಜ ಕ್ರಿಕೆಟ್ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು ಶಿವಮೊಗ್ಗ ಸ್ಟ್ರೈಕರ್ಸ್‌ ಅನ್ನು 6 ವಿಕೆಟ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ನಾಯಕ ಅಭಿಮನ್ಯು ಮಿಥುನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮಧ್ಯಮವೇಗಿ ವಿ.ಕೌಶಿಕ್ ಶಿವಮೊಗ್ಗದ ಆರಂಭಿಕರಾದ ಬಿ.ಆರ್.ಶರತ್ (3), ಕೆ.ಗೌತಮ್ (4), ಡೆಸ್ಮಂಡ್ ಆ್ಯಂಟನಿ (1) ವಿಕೆಟ್ ಉರುಳಿಸಿದರೆ, ಮಿಥುನ್ 2 ವಿಕೆಟ್ ಪಡೆದು ಬ್ಯಾಟಿಂಗ್ ಬಲವನ್ನೇ ಮುರಿದರು.

ಸಿದ್ಧಾರ್ಥ್‌, ಅವಿನಾಶ್ ಆಸರೆ: ಕೇವಲ ಒಂಬತ್ತು ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಶಿವಮೊಗ್ಗ ತಂಡವನ್ನು ಸಿದ್ಧಾರ್ಥ್‌ (ಅಜೇಯ 62 ರನ್; 53ಎ, 4x6, 6x1), ಡಿ.ಅವಿನಾಶ್ (41; 36ಎ, 4x2, 6x2) ಪಾರು ಮಾಡಿದರು. ರನ್ ಗಳಿಕೆಗೆ ಚೇತರಿಕೆ ನೀಡಿದ ಇಬ್ಬರೂ 6ನೇ ವಿಕೆಟ್‌ಗೆ 93 ರನ್ ಜೊತೆಯಾಟದ ಕಾಣಿಕೆ ನೀಡಿದರು. 20 ಓವರ್‌ಗಳಲ್ಲಿ 6ಕ್ಕೆ 133 ರನ್ ಗಳಿಸಿತು.

ಸಾಧಾರಣ ಮೊತ್ತ ಬೆನ್ನಟ್ಟಿದ ಹುಬ್ಬಳ್ಳಿ ಟೈಗರ್ಸ್‌ ಆರಂಭದಲ್ಲೇ ಆಘಾತ ಅನುಭವಿಸಿತ್ತು. ಆದರೆ ಮೊಹಮ್ಮದ್ ತಾಹ (ಅಜೇಯ 78; 49ಎ, 4x11, 6x2), ಶರತ್ ಶ್ರೀನಿವಾಸ್ (41; 42ಎ, 4x1, 6x2) ಜೊತೆಯಾಟವು ತಂಡವನ್ನು ಜಯದ ಹಾದಿಯಲ್ಲಿ ಮುನ್ನಡೆಸಿತು.



ಸಿಕ್ಸರ್ ಸಿಡಿಸಿದ ಹುಬ್ಬಳ್ಳಿ ಟೈಗರ್ಸ್‌ನ ಮೊಹಮ್ಮದ್ ತಾಹ

ಶುಭಾಂಗ್ ಆಲ್‌ರೌಂಡ್ ಆಟ: ಶುಭಾಂಗ್ ಹೆಗ್ಡೆ (ಔಟಾಗದೆ 33 ರನ್, 30ಕ್ಕೆ 1 ವಿಕೆಟ್) ಆಲ್‌ರೌಂಡ್ ಆಟದ ಬಲದಿಂದ ‘ಮೈಸೂರು ವಾರಿಯರ್ಸ್‌’ ಇಲ್ಲಿ ನಡೆಯುತ್ತಿರುವ ಮಹಾರಾಜ ಕ್ರಿಕೆಟ್ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ರೋಚಕ ಜಯ ಸಾಧಿಸಿತು. ಬೆಂಗಳೂರು ಬ್ಲಾಸ್ಟರ್ಸ್‌ ವಿರುದ್ಧ 6 ರನ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಶಿವಮೊಗ್ಗ ಸ್ಟ್ರೈಕರ್ಸ್‌ 20 ಓವರ್‌ಗಳಲ್ಲಿ 6ಕ್ಕೆ 133 (ಸಿದ್ಧಾರ್ಥ್‌ ಅಜೇಯ 62, ಡಿ.ಅವಿನಾಶ್ 41. ವಿ.ಕೌಶಿಕ್ 25ಕ್ಕೆ 3, ಅಭಿಮನ್ಯು ಮಿಥುನ್ 20ಕ್ಕೆ 2) ಹುಬ್ಬಳ್ಳಿ ಟೈಗರ್ಸ್‌ 17.2 ಓವರ್‌ಗಳಲ್ಲಿ 4ಕ್ಕೆ 134 (ಮೊಹಮ್ಮದ್ ತಾಹ ಅಜೇಯ 78, ಶ್ರೀನಿವಾಸ್ ಶರತ್ 41)

ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 6 ವಿಕೆಟ್ ಜಯ.

ಮೈಸೂರು ವಾರಿಯರ್ಸ್‌ 20 ಓವರ್‌ಗಳಲ್ಲಿ 6ಕ್ಕೆ 171 (ಪವನ್ ದೇಶಪಾಂಡೆ 55, ಶುಭಾಂಗ್ ಹೆಗ್ಡೆ ಅಜೇಯ 33. ಟಿ.ಪ್ರದೀಪ್ 38ಕ್ಕೆ 2) ಬೆಂಗಳೂರು ಬ್ಲಾಸ್ಟರ್ಸ್‌ 20 ಓವರ್‌ಗಳಲ್ಲಿ 8ಕ್ಕೆ 165 (ಕೆ.ವಿ.ಅನೀಷ್ 48, ಶಿವಕುಮಾರ್ ರಕ್ಷಿತ್ 34. ಆದಿತ್ಯ ಗೋಯಲ್ 32ಕ್ಕೆ 3, ವಿದ್ಯಾಧರ್ ಪಾಟೀಲ್ 24ಕ್ಕೆ 2, ಶುಭಾಂಗ್ ಹೆಗ್ಡೆ 30ಕ್ಕೆ 1). ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 6 ರನ್ ಜಯ.

ಇಂದಿನ ಪಂದ್ಯಗಳು: ಮೈಸೂರು ವಾರಿಯರ್ಸ್‌– ಶಿವಮೊಗ್ಗ ಸ್ಟ್ರೈಕರ್ಸ್‌ (ಮಧ್ಯಾಹ್ನ 3ರಿಂದ), ಗುಲ್ಬರ್ಗಾ ಮಿಸ್ಟಿಕ್ಸ್ – ಮಂಗಳೂರು ಯುನೈಟೆಡ್ (ರಾತ್ರಿ 7ರಿಂದ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್‌

ಬ್ಯಾಸ್ಕೆಟ್‌ಬಾಲ್: ಪಿಪಿಸಿಗೆ ಜಯ

ಬೆಂಗಳೂರು: ಪೀಪಲ್ಸ್ ಪ್ಲೇಯರ್ಸ್‌ ಕ್ಲಬ್ (ಪಿಪಿಸಿ) ಜಯನಗರ ಹಾಗೂ ಡಿವೈಇಎಸ್ ಮಂಡ್ಯ ತಂಡಗಳು ರಾಜ್ಯ 16 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಜಯ ಸಾಧಿಸಿದವು.

ಬಾಲಕರ ವಿಭಾಗದ ಪಂದ್ಯದಲ್ಲಿ ಪಿಪಿಸಿ 75–52ರಿಂದ ಬೀಗಲ್ಸ್ ಬಿ.ಸಿ. ಎದುರು ಗೆದ್ದಿತು. ವಿಜೇತ ತಂಡದ ಹೃದಯ್ 33 ಪಾಯಿಂಟ್ಸ್ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಡಿವೈಇಎಸ್ ಮಂಡ್ಯ 52–42ರಿಂದ ಎಸ್.ಬ್ಲ್ಯೂಸ್ ಎದುರು ವಿರುದ್ಧ ಜಯ ಸಾಧಿಸಿತು. ಮಂಡ್ಯ ಪರ ಸಹನಾ (14 ಪಾಯಿಂಟ್ಸ್) ಮಿಂಚಿದರು. ಸೆಮಿಫೈನಲ್ ಲೀಗ್‌ನ ಬಾಲಕರ ಇನ್ನೊಂದು ಪಂದ್ಯದಲ್ಲಿ ವಿಎನ್‌ಸಿಸಿ 74–41ರಿಂದ ವಿವೇಕ್ ಎಸ್‌ಸಿ ವಿರುದ್ಧ ಜಯಿಸಿತು. ಬಾಲಕಿಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ 56–25ರಿಂದ ಡಿವೈಇಎಸ್ ಮೈಸೂರು ಎದುರು ಗೆದ್ದಿತು.

‘ಬ್ಯಾಲನ್ ಡಿ ಒರ್’: ಮೆಸ್ಸಿ ಹೊರಕ್ಕೆ

ನಿಯಾನ್, ಸ್ವಿಟ್ಜರ್ಲೆಂಡ್ (ಎಪಿ): ಏಳು ಬಾರಿ ಪ್ರಶಸ್ತಿ ವಿಜೇತ ಲಯೊನೆಲ್ ಮೆಸ್ಸಿ ಅವರು 2005ರ ಬಳಿಕ ಇದೇ ಮೊದಲ ಬಾರಿ ‘ಬ್ಯಾಲನ್ ಡಿ ಒರ್’ ನಾಮ ನಿರ್ದೇಶನಗೊಂಡವರ ಪಟ್ಟಿಯಿಂದ ಹೊರಗುಳಿದಿದ್ದಾರೆ.

ಪ್ರತಿಷ್ಠಿತ ಪ್ರಶಸ್ತಿಗಾಗಿ 30 ಮಂದಿ ಫುಟ್‌ಬಾಲ್ ಆಟಗಾರರನ್ನು ಶುಕ್ರವಾರ ನಾಮನಿರ್ದೇಶನ ಮಾಡಲಾಗಿದ್ದು, ಅದರಲ್ಲಿ ಅರ್ಜೆಂಟೀನಾ ಆಟಗಾರನ ಹೆಸರು ಇಲ್ಲ. ಪೋಲೆಂಡ್‌ನ ರಾಬರ್ಟ್‌ ಲೆವಾಂಡೊಸ್ಕಿ, ಕಳೆದ ವರ್ಷ ಮೆಸ್ಸಿ ಅವರನ್ನು ಹಿಂದಿಕ್ಕಿ ಪ್ರಶಸ್ತಿ ಗೆದ್ದುಕೊಂಡಿದ್ದರು. .

ಬ್ರೆಜಿಲ್‌ನ ನೇಮರ್ ಕೂಡ ಪಟ್ಟಿಯಲ್ಲಿಲ್ಲ. ಲೆವಾಂಡೊಸ್ಕಿ, ಕಿಲಿನ್ ಬಾಪೆ, ಕ್ರಿಸ್ಟಿಯಾನೊ ರೊನಾಲ್ಡೊ, ಮೊಹಮ್ಮದ್ ಸಲಾ ನಾಮನಿರ್ದೇಶನಗೊಂಡವರಲ್ಲಿ ಸೇರಿದ್ದಾರೆ.

ಟೇಲರ್‌ಗೆ ರಾಜಸ್ಥಾನ ರಾಯಲ್ಸ್ ಮಾಲೀಕರಿಂದ ಕಪಾಳಮೋಕ್ಷ

ನವದೆಹಲಿ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಮಾಜಿ ಆಟಗಾರ ರಾಸ್ ಟೇಲರ್ ತಾವು 2011ರಲ್ಲಿ ಐಪಿಎಲ್‌ನಲ್ಲಿ ಆಡುತ್ತಿದ್ದ ಫ್ರ್ಯಾಂಚೈಸಿ ಮಾಲೀಕರು ಕಪಾಳಮೋಕ್ಷ ಮಾಡಿದ್ದರು ಎಂದು ಆರೋಪಿಸಿದ್ದಾರೆ.

2011ರಲ್ಲಿ ಅವರು ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡಿದ್ದರು. ಆ ಟೂರ್ನಿಯಲ್ಲಿ ಮೊಹಾಲಿಯಲ್ಲಿ ನಡೆದಿದ್ದ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಟೇಲರ್ ಸೊನ್ನೆ ಸುತ್ತಿದ್ದರು. ಆಗ ತಂಡದ ಮಾಲೀಕರು ಕಪಾಳಮೋಕ್ಷ ಮಾಡಿದ್ದರು ಎಂದು ತಮ್ಮ ಆತ್ಮಚರಿತ್ರೆ ‘ಬ್ಲ್ಯಾಕ್ ಆ್ಯಂಡ್ ವೈಟ್’ ನಲ್ಲಿ ಉಲ್ಲೇಖಿಸಿದ್ದಾರೆ.

‘195 ರನ್‌ಗಳ ಮೊತ್ತವನ್ನು ಬೆನ್ನಟ್ಟಿದ್ದೆವು. ನಾನು ಎಲ್‌ಬಿಡಬ್ಲ್ಯು ಆಗಿದ್ದೆ. ಅದರಿಂದಾಗಿ ಗುರಿ ಸನಿಹ ಸಾಗಲೂ ತಂಡಕ್ಕೆ ಆಗಿರಲಿಲ್ಲ. ಪಂದ್ಯದ ನಂತರ ನಾನೂ ಸೇರಿದಂತೆ ತಂಡದ ಆಟಗಾರರು, ಸಿಬ್ಬಂದಿ ಮತ್ತು ಮ್ಯಾನೇಜ್‌ಮೆಂಟ್ ಹೋಟೆಲ್‌ನ ಮಹಡಿಯಲ್ಲಿರುವ ಬಾರ್‌ನಲ್ಲಿದ್ದರು. ಲಿಝ್ ಹರ್ಲೆ ಅವರು ವಾರ್ನಿ (ಶೇನ್ ವಾರ್ನ್) ಜೊತೆಗೆ ಇದ್ದರು.



ರಾಸ್ ಟೇಲರ್

‘ರಾಯಲ್ಸ್ ತಂಡದ ಮಾಲೀಕರು ನನ್ನ ಬಳಿ ಬಂದರು. ರಾಸ್ ನೀನು ಸೊನ್ನೆ ಸುತ್ತಲು ಲಕ್ಷಾಂತರ ರೂಪಾಯಿ ಹಣ ಕೊಡುತ್ತಿಲ್ಲ ನಾವು ಎಂದು ಹೇಳಿ ಕೆನ್ನೆಗೆ ಮೂರು, ನಾಲ್ಕು ಸಲ ಹೊಡೆದರು. ಅವರು ನಗುತ್ತಿದ್ದರು. ಅಷ್ಟೇನೂ ಜೋರಾಗಿ ಪೆಟ್ಟಾಗಿರಲಿಲ್ಲ. ಆದರೆ, ಅವರು ಹೊಡೆಯುವಂತೆ ನಟಿಸಿದ್ದರೆಂದು ಕೂಡ ಹೇಳು ವಂತಿಲ್ಲ’ ಎಂದು ಟೇಲರ್ ಬರೆದಿದ್ದಾರೆ.

ಟೇಲರ್ 2008 ರಿಂದ 2010ರವರೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ 2011ರಲ್ಲಿ ರಾಜಸ್ಥಾನ ತಂಡದಲ್ಲಿ ಆಡಿದ್ದರು. ನಂತರ ಡೆಲ್ಲಿ ಹಾಗೂ ಪುಣೆ ವಾರಿಯರ್ಸ್ ಇಂಡಿಯಾ ತಂಡದಲ್ಲಿ ಕೂಡ ಆಡಿದ್ದರು.

ವಿಶ್ವ ಬ್ಯಾಡ್ಮಿಂಟನ್: ಸಿಂಧು ಗೈರು

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಗಾಯಗೊಂಡಿರುವುದರಿಂದ ಮುಂಬರಲಿರುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಡುತ್ತಿಲ್ಲ. ಅವರ ಎಡಗಾಲಿನಲ್ಲಿ ಮೂಳೆಮುರಿತ ಕಂಡುಬಂದಿರುವುದರಿಂದ ವಿಶ್ರಾಂತಿ ಪಡೆಯಲಿದ್ದಾರೆ.

‘ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿರುವುದರಿಂದ ಉತ್ತಮ ಲಯದಲ್ಲಿದ್ದೇನೆ. ಆದರೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡುವುದನ್ನು ತಪ್ಪಿಸಿಕೊಳ್ಳುತ್ತಿರುವುದು ದುರದೃಷ್ಟಕರ. ಕಾಮನ್‌ವೆಲ್ತ್ ಕೂಟದ ಕ್ವಾರ್ಟರ್‌ಫೈನಲ್‌ನಲ್ಲಿ ಆಡುವಾಗಲೇ ಕಾಲಿನಲ್ಲಿ ನೋವು ಇತ್ತು. ಗಾಯಗೊಳ್ಳುವ ಆತಂಕವೂ ಇತ್ತು. ಕೋಚ್ ಮತ್ತು ಫಿಸಿಯೊ ಮುತುವರ್ಜಿ ವಹಿಸಿ ಆರೈಕೆ ಮಾಡಿದ್ದರಿಂದ ಆಡಲು ಸಾಧ್ಯ ವಾಯಿತು’ ಎಂದು ಸಿಂಧು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಿ.ವಿ. ಸಿಂಧು

ಕೊಕ್ಕೊ: ಪ್ರಶಸ್ತಿಗಾಗಿ ಆರು ತಂಡಗಳ ಹಣಾಹಣಿ

ಪುಣೆ (ಪಿಟಿಐ): ಚೊಚ್ಚಲ ಆವೃತ್ತಿಯ ಅಲ್ಟಿಮೇಟ್ ಕೊಕ್ಕೊ (ಯುಕೆಕೆ) ಲೀಗ್‌ಗೆ ವೇದಿಕೆ ಸಜ್ಜುಗೊಂಡಿದೆ. ಇಲ್ಲಿನ ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಭಾನುವಾರ ಆರಂಭವಾಗುವ ಟೂರ್ನಿಯಲ್ಲಿ ಆರು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಚೆನ್ನೈ ಕ್ವಿಕ್ ಗನ್ಸ್, ಗುಜರಾತ್ ಜೈಂಟ್ಸ್, ಮುಂಬೈ ಖಿಲಾಡಿಸ್, ಒಡಿಶಾ ಜಗರ್‌ನಟ್ಸ್, ರಾಜಸ್ಥಾನ ವಾರಿಯರ್ಸ್‌ ಮತ್ತು ತೆಲುಗು ವಾರಿಯರ್ಸ್‌ ತಂಡಗಳು ಸೆಣಸಾಟಕ್ಕೆ ಸಿದ್ಧವಾಗಿವೆ.

ಭಾನುವಾರ ಎರಡು ಪಂದ್ಯಗಳು ನಿಗದಿಯಾಗಿವೆ. ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್– ಮುಂಬೈ ಖಿಲಾಡಿಸ್ ಬಳಿಕ ಚೆನ್ನೈ ಕ್ವಿಕ್ ಗನ್ಸ್– ತೆಲುಗು ಯೋಧಾಸ್ ಸೆಣಸಲಿವೆ.

ಭಾರತ ಕೊಕ್ಕೊ ಫೆಡರೇಷನ್ ಸಹಯೋಗದೊಂದಿದೆ ಅಮಿತ್ ಬರ್ಮನ್ ಅವರು ಮೊದಲ ಬಾರಿಗೆ ದೇಶದಲ್ಲಿ ಫ್ರಾಂಚೈಸ್ ಆಧಾರಿತ ಲೀಗ್‌ಅನ್ನು ಆರಂಭಿಸಿದ್ದಾರೆ.

‘ದೇಶದ ಕ್ರೀಡಾಕ್ಷೇತ್ರದಲ್ಲಿ ಇದೊಂದು ವಿಶೇಷ ಕ್ಷಣ. ಪ್ರತಿ ಭಾರತೀಯನ ಹೃದಯದಲ್ಲಿ ಕೊಕ್ಕೊ ಅಂತರ್ಗತವಾಗಿದೆ. ವಿಶ್ವಕ್ಕೆ ಹೊಸ ಅವತಾರದಲ್ಲಿ ಇದನ್ನು ನಾವು ಪರಿಚಯಿಸುತ್ತಿರುವುದು ಹೆಮ್ಮೆಯ ಸಂಗತಿ‘ ಎಂದು ಲೀಗ್ ಕಮಿಷನರ್ ಮತ್ತು ಯುಕೆಕೆ ಕಾರ್ಯನಿರ್ವಹಣಾಧಿಕಾರಿ ತೇನ್‌ಜಿಂಗ್ ನಿಯೋಗಿ ಹೇಳಿದ್ದಾರೆ.

ಆವೃತ್ತಿ: ಮೊದಲ
ತಂಡಗಳು: **6**
ಅವಧಿ: ಆಗಸ್ಟ್ **14**ರಿಂದ ಸೆಪ್ಟೆಂಬರ್ **4**
ಒಟ್ಟು ಪಂದ್ಯಗಳು: **34**
ಪಂದ್ಯಗಳು ಆರಂಭ ರಾತ್ರಿ **8** ರಿಂದ
ಲೈವ್: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್